


ಸಂಚಿಕೆ ೬೨

ಸಂಚಯ

ಸಾಂಸ್ಕೃತಿಕ ಪತ್ರಿಕೆ

ಸಂಚಯ ಗ್ಯಾಲರಿ



ಕೃತಿ: ದಿ ಲಾಸ್ಟ್ ಗೇಮ್, ಟೆರ್‍ರಾ ಕೊಟಾ
ಕಲಾವಿದರು: ಎನ್. ಪುಷ್ಪಮಾಲಾ

ಕೃಪೆ: ಶಿಲ್ಪಕಲಾ ಅಕಾ

ಸಂಚಯ

ತ್ರೈಮಾಸಿಕ ಸಾಂಸ್ಕೃತಿಕ ಪತ್ರಿಕೆ

ಸಂಪುಟ : ೧೩
ಸಂಚಿಕೆ : ೨(೬೩)
ಏಪ್ರಿಲ್ ೨೦೦೪

ಸಂಪಾದಕ :
ಡಿ.ವಿ. ಪ್ರಹ್ಲಾದ್


ಚಂದಾವಿವರ
ವಾರ್ಷಿಕ ಚಂದಾ : ರೂ. ೧೦೦/-
ಎರಡು ವರ್ಷ : ರೂ. ೨೦೦/-
ಐದು ವರ್ಷ : ರೂ. ೫೦೦/-

ಮುಖಪುಟ :
ಎಲ್.ಸಿ. ಅಂಚನ್ ಅವರ ಶಿಲ್ಪ 'ಮಹಿಳೆ'.
ಕೃಪೆ: ಶಿಲ್ಪಕಲಾ ಅಕಾಡೆಮಿ
ರೇಖಾಚಿತ್ರಗಳು :
ಋತ ಎಸ್. ಮತ್ತು ಸೃಜನ್

ಸಂಪರ್ಕ ವಿಳಾಸ
ನಂ. ೧೦೦, ೨ನೇ ಮುಖ್ಯರಸ್ತೆ
೬ನೇ ಬ್ಲಾಕ್, ೩ನೇ ಹಂತ,
೩ನೇ ಘಟ್ಟ, ಬನಶಂಕರಿ
ಬೆಂಗಳೂರು - ೫೬೦ ೦೮೫
ಫೋನ್ ನಂ. ೦೮೦ –೨೬೭೯೧೯೨೫

ನಕ್ಷತ್ರ ಉರಿಯುತಿವೆ ಮುಗಿಲು ಹಣತೆಗಳಿಂದ
ಗಾಳಿ ದಣಿವಾರಿಸಿದೆ ಬೀಸಿ ಬೀಸಿ
ಒಣಗಿದೆಲೆಗಳ ಹಾಗೆ ಉದುರುತಿವೆ ನಿಟ್ಟುಸಿರು
ದುಃಖ ಒರಗಿದೆ ಇಲ್ಲಿ ಚಾಪೆ ಹಾಸಿ

–ಸು.ರಂ. ಎಕ್ಕುಂಡಿ




ಹೊಳೆದದ್ದೆ ತಾರೆ ಉಳಿದದ್ದು ಆಕಾಶ!

ಪ್ರಿಯ ಓದುಗರೆ,

ಇತ್ತೀಚೆಗೆ ನೋಡಿದ ಒಂದು ಹಿಂದಿ ಚಲನಚಿತ್ರದ ಬಗ್ಗೆ ಕೆಲವು ಮಾತು. ಮುನ್ನಾಭಾಯಿ ಎಂ.ಬಿ.ಬಿ.ಎಸ್. ಎನ್ನುವ ಪಕ್ಕಾ ವ್ಯಾಪಾರೀ ಮಸಾಲೆಗಳುಳ್ಳ ತಮಾಷೆಯ ಚಲನಚಿತ್ರ. ಮುಂಬೈ ಭೂಗತಲೋಕದ 'ಭಾಯಿ' ಒಬ್ಬ ತನ್ನ ತಂದೆಗೆ ಸುಳ್ಳು-ಪಳ್ಳು ಹೇಳಿ ತಾನೊಬ್ಬ ಡಾಕ್ಟರ್ ಅಂತ ನಿರೂಪಿಸತೊಡಗುತ್ತಾನೆ. ತಾನು 'ಅಲ್ಲದ' ಡಾಕ್ಟರ್ 'ಆಗುವ' ಮೂಲಕ ನಮ್ಮ ಸಾಮಾಜಿಕ ನಂಬಿಕೆ, ನಡಾವಳಿಗಳ ಪೊಳ್ಳುತನಗಳನ್ನು ಒಡೆಯುವುದು ಈ ಚಲನಚಿತ್ರದ ವಸ್ತು. ಇಂಥ ಏಕಸೂತ್ರದ ಹೀರೋ ಸುತ್ತಲ ಸಿನೆಮಾಗಳು ಲೆಕ್ಕವಿಲ್ಲದಷ್ಟು ಬಂದುಹೋಗಿವೆ, ಬರುತ್ತಲೂ ಇವೆ. ಚಲನಚಿತ್ರದ ಉದ್ದಕ್ಕೂ ಮುನ್ನಾಭಾಯಿ ಡಾಕ್ಟರ್ ಅಲ್ಲ ಅಂತ ಎಲ್ಲರಿಗೂ ಗೊತ್ತು. ಮತ್ತೆ ಮತ್ತೆ ಅದನ್ನು ನಿರೂಪಿಸುವ, ನಿರಾಕರಿಸುವ ಪ್ರಯತ್ನ ನಡೆದೇ ಇರುತ್ತೆ. ಈ ಮಧ್ಯೆ ಕೂತು ನೋಡುವವರಿಗೆ ಹೊಟ್ಟೆ ತುಂಬ ನಗು-ಮನರಂಜನೆ.

ನಮ್ಮ ರಾಜಕಾರಣ-ಸಾಹಿತ್ಯದ ಸಂದರ್ಭಗಳು ಈ ಮುನ್ನಾಭಾಯಿ ಡಾಕ್ಟರಾದ ಕತೆಗಿಂತ ಭಿನ್ನವಾಗೇನೂ ಕಾಣುತ್ತಿಲ್ಲ. ನಮಗೆಲ್ಲರಿಗೂ ಗೊತ್ತು, ನಾವು 'ಆಡುವ' ಮಾತುಗಳು ನಮ್ಮದಲ್ಲ ಅಂತ. ಆದರೂ ಮಾತುಗಳನ್ನು 'ಆಡು'ವ ಈ ಆಡಿದ್ದನ್ನು ಬೃಹತ್ತಾಗಿ ಬಿಂಬಿಸುವ ಪ್ರಯತ್ನಗಳು ಮಾತ್ರ ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ನಮ್ಮ ಜನ ಸಮುದಾಯಕ್ಕೂ ಪ್ರತಿ ಐದು ವರ್ಷಗಳಿಗೊಮ್ಮೆ ಈ ಆಡುವ-ಮಾಡುವ ಎರಡೂ ವಿಷಯಗಳು ಈಗ ಸಾಕಷ್ಟು ಅರ್ಥವಾಗಿರುವಂಥವು.

ಸಾಹಿತಿಗಳ ಮಟ್ಟಿಗಂತೂ ಅವರವರ ರಾಜಕೀಯ ನಿಲುವುಗಳು ಪ್ರತಿ ಸಲವೂ ಚರ್ಚೆಯಾಗಿರುವಂಥದ್ದೇ. ಆ ಕಾಲದ ಜನಸಂಘದಿಂದ ಚುನಾವಣೆಗೆ ನಿಂತ ಕಾರಣಕ್ಕೆ ಅಡಿಗರ ಕಾವ್ಯದ ಬಗೆಗಿನ ಪ್ರೀತಿ ಕಮ್ಮಿಯಾಗಲಿಲ್ಲ. ಪ್ರಗತಿರಂಗ ವಿಫಲವಾಗಿಯೂ ಲಂಕೇಶರ ಬರವಣಿಗೆ ನೈತಿಕ ಸಿಟ್ಟು ಇವುಗಳ ಬಗ್ಗೆ ಯಾವ ಅನುಮಾನ ಯಾರಲ್ಲೂ ಮೂಡಲಿಲ. ಭೈರಪ್ಪ ಮೊದಲಾದ ಲೇಖಕರು ಬಲಪಂಥೀಯ ವಿಚಾರಧಾರೆಗಳ ಬಗ್ಗೆ ನಂಬಿಕೆ ಉಳ್ಳವರೆನ್ನುವುದು ಅವರ ಕೃತಿಯ ಓದಿಗೆ ತೊಡಕೇನೂ ಅಲ್ಲ. ಇವರಿಗೆಲ್ಲ ತಾವು ನಂಬಿದ್ದನ್ನು ಒಪ್ಪುವ ನಿರಾಕರಿಸುವ ತಾತ್ವಿಕ, ನೈತಿಕ ಶಕ್ತಿಯಾದರೂ ಇದೆ. ಆದರೆ ಕೋಮುವಾದ ವಿರೋಧಿಸುತ್ತಲೇ ಸಾಹಿತಿಗಳದ್ದೇ ಒಂದು 'ಸ್ಲೋಗನ್ ಕೋಮು' ಆಗುತ್ತಿರುವುದು ವಿಪರ್ಯಾಸ.




ಈ ಸಂಪಾದಕನೆಂಬೋ ಮನುಷ್ಯನ ಎಲ್ಲ ಪ್ರಯತ್ನಗಳನ್ನೂ ಮೀರಿ ಈ ಸಂಚಯ ತಡವಾಗಿ ನಿಮ್ಮ ಕೈ ಸೇರುತ್ತಿದೆ ಮನ್ನಿಸಿ.

ಮತ್ತೆ ಮುಂದಿನ ಸಂಚಿಕೆಗೆ
ನಿಮ್ಮ
ಸಂಪಾದಕ

ಸಂಚಯದಲ್ಲಿ...





ನನ್ನ ಕನ್ನಡ ಜಗತ್ತು

■ ಕೆ.ವಿ. ಸುಬ್ಬಣ್ಣ

ದೆಹಲಿಯೊಳಗೆ ಇದ್ದೂ ಇದು ದೆಹಲಿಯಲ್ಲ ಎನ್ನಿಸುವಂಥ ತಮ್ಮ ಸುಂದರ 'ಸಂಸ್ಕೃತಿ ಗ್ರಾಮ'ದಲ್ಲಿ ಈ ಪುಟ್ಟ ಮಿತ್ರಕೂಟವನ್ನು ಏರ್ಪಡಿಸಿ ಓಂಪ್ರಕಾಶ್‌ಜಿಯವರು ನನಗೆ ಅಪೂರ್ವವಾದ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಅವರಿಗೆ ನಾನು ಋಣಿ. ಯಾವ ಸಾಂಪ್ರದಾಯಿಕತೆಯಿಲ್ಲದೆ ಇಲ್ಲಿ ನಾವು ವಿರಾಮವಾಗಿ ಮಾತುಕತೆಯಾಡಬಹುದೆಂದೂ ಮಾತುಕತೆಗೆ ಚಾಲನೆ ಕೊಡಲಿಕ್ಕಾಗಿ ಪ್ರಾರಂಭದಲ್ಲಿ ನಾನು ಒಂದು ಟಿಪ್ಪಣಿಯನ್ನು ಮಂಡಿಸಬೇಕೆಂದೂ ಅವರು ಸೂಚಿಸಿದರು. ಒಪ್ಪಿಕೊಂಡೆ. ತಟ್ಟನೆ, 'ಕನ್ನಡದ ಬಗ್ಗೆಯೇ ಮಾತಾಡುತ್ತೇನೆ' ಅಂತಲೂ ಹೇಳಿದೆ. 'ಕನ್ನಡ'ದ ವಿಷಯವಾಗಿ ತಟ್ಟನೆ ಅನೈಚ್ಛಿಕವಾಗಿ ಹೇಳಲು ಅಥವಾ ನನ್ನ ಒಳಗಿನ ಒತ್ತಡ ಕಾರಣವಿದ್ದೀತು ಅಂತ ಯೋಚಿಸುತ್ತೇನೆ. ನನಗೆ ಸಲೀಸಾಗಿ ಬರುವ ಭಾಷೆ ಇದೊಂದೇ ಆಗಿರುವ ಕಾರಣ ಕನ್ನಡದಲ್ಲಿ ಮಾತನಾಡಲು ನನಗೆ ಯಾವತ್ತೂ ಖುಷಿಯೇ. ಆದರೆ ಇಲ್ಲಿ ಕನ್ನಡದಲ್ಲಿ ಮಾತನಾಡಲು ಸಾಧ್ಯವಿಲ್ಲವಾಗಿದ್ದ ಕಾರಣ, ಕನ್ನಡದ ಬಗ್ಗೆಯಾದರೂ ಮಾತಾಡಬಹುದಲ್ಲ, ಅಂತ ನನಗೆ ಅನ್ನಿಸಿರಬೇಕು ಅಥವಾ ಏನೇ ಮಾತಾನಾಡಲಿ, ಯಾವುದೇ ಭಾಷೆಯಲ್ಲಿ ಮಾತನಾಡಲಿ, ವಾಸ್ತವವಾಗಿ ನಾನು ಮಾತನಾಡುವುದೆಲ್ಲ ಕನ್ನಡದಲ್ಲಿಯೇ ಮತ್ತು ಕನ್ನಡದ ಬಗ್ಗೆಯೇ ಎಂದರೂ ತಪ್ಪಾಗಲಿಕ್ಕಿಲ್ಲ.

ಅಚಾನಕವಾಗಿ ಈ ಜಗತ್ತಿಗೆ ನಾನು ಬಂದುಬಿದ್ದಾಗ, ನನ್ನ ತಾಯಿ ಮತ್ತು ಬಳಿ ಬಳಗದವರ ನನ್ನ ತುಟಿಗಳೊಳಕ್ಕೆ ಕನ್ನಡ ಶಬ್ದಗಳನ್ನೂಡಿಸಿ, ಆ ಶಬ್ದಗಳ ಮೂಲಕವೇ ನನ್ನ ಮನಸ್ಸು ನಿಧಾನವಾ ಈ ಜಗತ್ತನ್ನು ಗ್ರಹಿಸುವ ಹಾಗೆ ಮಾಡಿದ್ದಾರೆ. ಶಬ್ದಗಳು ನನಗೆ ಹೆಸರುಗಳನ್ನು ಕೊಟ್ಟವು; ಹೆಸರುಗಳ ಆಕಾರಗಳನ್ನು ಮೂಡಿಸಿದವು; ಈ ಆಕೃತಿಗಳೇ ಈ ಆಕೃತಿಗಳನ್ನು ಕಲ್ಪಿಸಿದ ಕನ್ನಡ ಶಬ್ದಗಳೇ ನನ

ಪ್ರಪಂಚ, ಇವೊತ್ತಿಗೂ, ಈ ಶಬ್ದಗಳಿಲ್ಲದಿದ್ದರೆ ಗ್ರಹಿಕೆಯೇ ಇಲ್ಲವಲ್ಲ? ಪ್ರತಿಕ್ರಿಯೆಯೆಂಬುದೇ ಇಲ್ಲವಲ್ಲ? ಆಗ ನಾನು ಕಿವುಡ, ಕುರುಡ, ಮೂಕ, ಒಂದು ಕಲ್ಲು ಅಷ್ಟೇ. ಆಗ ಜಗತ್ತು ಎನ್ನುವುದೇ ಇಲ್ಲ.

ದೆಹಲಿಯ ಈ ದೂರದಿಂದ ಅಥವಾ ಭೂಮಿಯ ಇನ್ನೂ ದೂರದ ಇನ್ನಿತರ ನೆಲೆಗಳಿಂದ ನಿಂತು ನೋಡುವಾಗ ನನ್ನ ಕನ್ನಡದ ನೆಲ, ನನ್ನ ಕನ್ನಡದ ಭಾಷೆ ಮುಂತಾದವು ಅದೆಷ್ಟು ಸಣ್ಣದಾಗಿ, ನಗಣ್ಯವಾಗಿ ಕೂಡ ಕಂಡೀತು ಅಂತ ನಾನು ಊಹಿಸಬಲ್ಲೆ. ಭೂಮಿಗೋಲದ ಮೇಲೆ ಗುರುತಿಸಲು ಹೋದರೆ, ಫುಟ್‌ಬಾಲ್ ಚೆಂಡಿನ ಮೇಲೆ ಅಂಟಿರುವ ಒಂದು ಕಿರು ಅವರೆಬೇಳೆಯ ಹಾಗೆ ಕಾಣಿಸುತ್ತದೆ ನನ್ನ ಕರ್ನಾಟಕ. ಪ್ರಪಂಚದ ಹಲವಾರು ನೂರು ಭಾಷೆಗಳಲ್ಲಿ ಇದೂ ಒಂದು ಕಿರು ಭಾಷೆ ಅಷ್ಟೇ. ಈ ದೇಶದಲ್ಲೇ ನೋಡುವುದಾದರೂ ಇದರ ಹಾಗೆ ಬೆಳೆದು ನಿಂತಿರುವ ಹದಿನೈದಿಪ್ಪತ್ತು ಇನ್ನಿತರ ಭಾಷೆಗಳು ಕಾಣಸಿಗುತ್ತವೆ. ಪ್ರಾಯಶಃ, ಇತ್ತೀಚಿನ ತನಕ ದೆಹಲಿಯಲ್ಲಿರುವ ಬಹುಜನರಿಗೆ ಕನ್ನಡವೆಂಬ ನುಡಿ ಮತ್ತು ನೆಲ ಇದೆಯೆನ್ನುವುದೂ ಗೊತ್ತಿರಲಿಲ್ಲ. ವಿಂಧ್ಯದ ದಕ್ಷಿಣದ ಕೆಳಗಿರುವ ಜನರಾಶಿಯಷ್ಟೂ 'ಮದ್ರಾಸಿ' ಯೆಂದೇ ಅವರ ತಿಳಿವಳಿಕೆಯಾಗಿತ್ತು.

ಹೊರಗಿನವರ ಮಾತಿರಲಿ, ಜಾಗತೀಕರಣ- ಜಗತ್ ಗ್ರಾಮಗಳೆಂಬ ಬಣ್ಣಬಣ್ಣದ ಚಿಟ್ಟೆ ಮಾತುಗಳ 'ತಲೆಯ ಮೇಲೇ ದಟ್ಟಯಿಸಿ ಹಾರಾಡುತ್ತಿರುವ ಇವತ್ತಿನ ಸಂದರ್ಭದಲ್ಲಿ, ನಮ್ಮವರೇ ಆದ ಹೊಸ ಯುವಕರು ಅಮೆರಿಕವೋ ಮತ್ತೊಂದೋ ಮಿಟಿಮಿಟಿ ಸ್ವರ್ಗದ ಕಣಸು ಕನಸುಗಳನ್ನು ಕಣ್ ಕಿವಿಗಳಲ್ಲಿ ತುಂಬಿಕೊಂಡು, ಕನ್ನಡವೆನ್ನುವ ಕಿರುತನದ ಮಾತು ಕೇಳಿದರೇ ಮುಜುಗರಗೊಳ್ಳುತ್ತಾರೆ. ಕನ್ನಡವೆಂಬ ಕಿರುಕೂಪದ ಕನ್ನಡಿಯಲ್ಲಿ ತಮ್ಮ ಚಹರೆಯ ಬಿಂಬವನು ಗುರುತಿಸಿಕೊಳ್ಳಲು ಬೆಚ್ಚುತ್ತಾರೆ. ಕನ್ನಡವು ಚಿಕ್ಕದು, ನಿಜ. ಜಗತ್ತಿನ ತುಂಬ ಇರುವ ಕನ್ನಡದಂಥ ಅಸಂಖ್ಯಾತ ಸ್ಥಳ, ಭಾಷೆಗಳು ಚಿಕ್ಕವೇ. ಹಾಗಿದ್ದರೂ ಜಗತ್ತಿನತುಂಬ ಇರುವ ಇಂಥ ಕಿರುನೆಲ-ಕಿರುಭಾಷೆ- ಕಿರು ಸಮುದಾಯಗಳು ತಮ್ಮ ಕಿರುತನವನ್ನು ಎಂತೋ ಮೀರಿಕೊಂಡು, ತಮ್ಮ ಕಿರು ಕೂಪದಲ್ಲೂ ತಮ್ಮ ಸುತ್ತ ಜಗದಗಲದ ಅನಂತ ವಿಶ್ವಾಕಾಶವನ್ನು ಸೃಜಿಸಿಕೊಂಡು ಬಾಳಿ ಬಂದಿದ್ದಾರೆ. ಇದನ್ನು ಮರೆಯಬಾರದು.

ಕನ್ನಡಕ್ಕೇ ಬಂದರೆ, ಕರ್ಣಾಟಕವೆಂದು ಈಗ ನಾವು ಗುರುತಿಸುವ ಈ ನಾಡು, ಭಾರತದ ಒಟ್ಟೂ ಭೂಭಾಗದಲ್ಲಿ ಅತ್ಯಂತ ಪ್ರಾಚೀನವೂ ಬಹು ಸ್ಥಿರವೂ ಆದ ದಖನ್ ಪ್ರಸ್ಥಭೂಮಿಯ ಭದ್ರ ಪೀಠದ ಮೇಲೆ ದೃಢವಾಗಿ ನಿಂತಿದೆ. 'ಪೃಥಿವ್ಯಾ ಮಾನದಂಡ ಇವ' 'ನಗಾಧಿರಾಜಃ' ಅಂತೆಲ್ಲ ಕಾಲಿದಾಸನು ಬಣ್ಣಿಸುವ ಜಗತ್ತಿನ ಉನ್ನತೋನ್ನತ ಪರ್ವತವಾದ ಹಿಮಾಲಯವು ನಮ್ಮ ಪ್ರಸ್ಥ ಭೂಮಿಗೆ ಹೋಲಿಸಿದರೆ ಇನ್ನೂ ಪ್ರಾಯಬಂದಿಲ್ಲದ ಹಸುಳೆ. ಹಿಮಾಲಯದಲ್ಲಿ ಗ್ರಾನೈಟ್ ಶಿಲೆಯು ಸಿಕ್ಕುವುದಿಲ್ಲ. ಗ್ರಾನೈಟ್ ಬೆಳೆದು ಹರಳುಗಟ್ಟಿಕೊಳ್ಳಲಿಕ್ಕೆ ಬೇಕಾಗುವ ಎಷ್ಟೋ ಕೋಟಿ ಕೋಟಿ ವರ್ಷಗಳ ಪ್ರೌಢಿಮೆಗೆ ಅದಿನ್ನೂ ಕಾಯಬೇಕು. ಈ ನಾಡಿನ ಪಶ್ಚಿಮದಲ್ಲಿ ಸಮುದ್ರವೂ ಉದ್ದನೆಯ ಕರಾವಳಿ ಪ್ರದೇಶವೂ ಲಗತ್ತಾಗಿ ಕೊಂಡಿದೆ. ವಿಂಧ್ಯಾಂತವಾದ ಉತ್ತರ ಭಾರತಕ್ಕೆ ಹೊಸತಿಲೆನ್ನುವ ಹಾಗೆ, ಉತ್ತಾರಾಪಥ-ದಕ್ಷಿಣಾಪಥಗಳ ನಡುವಿನ ಸೇತುವೆಯೆನ್ನುವ ಹಾಗಿದೆ, ಈ ಭೂಭಾಗ. ಇಲ್ಲಿ ಕನಿಷ್ಠ ಐದು ಲಕ್ಷ ವರ್ಷಗಳಿಂದಲೂ ಮಾನವ ವಸತಿಯಿದ್ದಿತೆನ್ನುವುದು ಪುರಾತತ್ತ್ವ ಶೋಧಗಳು ಖಚಿತಪಡಿಸಿವೆ. ಉತ್ತರ-ದಕ್ಷಿಣಗಳ ಸಂಚಾರ-ಪ್ರತಿಸಂಚಾರಗಳಿಗೆ ಸೇತುವೆಯಾಗಿರುವುದು, ಪಶ್ಚಿಮದ ಸಪಾಟು ಸಮುದ್ರದ ಮೂಲಕ ಪಶ್ಚಿಮ ಭೂಖಂಡಗಳಿಗೆ ಮುಕ್ತವಾಗಿ ತೆರೆದುಕೊಂಡಿರುವುದು ಮತ್ತು ಲಕ್ಷಾಂತರ ವರ್ಷಗಳ ಜನವಸತಿಯ ದೀರ್ಘದಾಖಲೆ — ಈ ಮುಂತಾದ ವೈಶಿಷ್ಟ್ಯಗಳಿಂದಾಗಿ ಈ ಭೂಭಾಗದಲ್ಲಿ ದೀರ್ಘಕಾಲದಿಂದಲೂ ಅನೇಕಾನೇಕ ಜನಾಂಗ-ಬುಡಕಟ್ಟು-ಧರ್ಮ-ಭಾಷೆಗಳ ಸಂಕರ-ಸಮನ್ವಯಗಳು ನಡೆಯುತ್ತಲೇ

ಬಂದಿವೆ. ಇದರಿಂದಾಗಿ ಇವತ್ತಿನ ಕನ್ನಡ ಜನಪದದಲ್ಲಿ ಇಡೀ ಜಗತ್ತಿನ ಅನೇಕಾನೇಕ ಜನಾಂಗ - ಕುಲ-ಬುಡಕಟ್ಟುಗಳೂ ಧರ್ಮ-ಸಂಸ್ಕೃತಿಗಳೂ ಅರಗಿಕೊಂಡಿವೆ.

ಕನ್ನಡವು ದ್ರಾವಿಡ ಭಾಷಾ ಕುಟುಂಬಕ್ಕೆ ಸೇರಿದ್ದೆಂದು ಭಾಷಾಶಾಸ್ತ್ರಜ್ಞರು ನಿರ್ಣಯಿಸಿದ್ದಾರೆ. ಈ ದ್ರಾವಿಡ ಭಾಷಾ ಕುಟುಂಬವೆಂಬುದು ಮೂಲತಃ, ಫಿನ್‌ಲೆಂಡ್‌ನಿಂದ ಮಧ್ಯಮಂಗೊಲಿಯ ತನಕ ಹಬ್ಬಿರುವ ಫಿನ್ನೋ-ಉಗ್ರಿಯನ್ ಭಾಷಾ ವರ್ಗಕ್ಕೆ ಸೇರಿದ್ದಿರಬೇಕೆಂದು ಹಲವು ಭಾಷಾ ಶಾಸ್ತ್ರಜ್ಞರು ಊಹಿಸಿ ಪ್ರತಿಪಾದಿಸಿದ್ದಾರೆ. ಅಂದರೆ, ಈ ಭಾಷಾಮೂಲದಿಂದ ಒಂದು ಶಾಖೆಯು ಹಲವು ಸಹಸ್ರಮಾನದ ಭೂತಕಾಲದಲ್ಲಿ ಎಂದೋ ಸಂಚಲನೆ ತೊಡಗಿ ಯುರೋಪಿನ ಉದ್ದಗಲಗಳಲ್ಲಿ ಅಲೆಯುತ್ತ ಕ್ರಮೇಣ ಅಫ್ಘಾನಿಸ್ತಾನಕ್ಕೆ ಬಂದಿತು; ಅಲ್ಲಿಂದ ಮತ್ತೆ ಸಂಚಾರ ಹೊರಟು ಭಾರತದ ಮಧ್ಯಪ್ರದೇಶಕ್ಕೆ ಬಂದು ಅಲ್ಲಿ ಕೆಲಕಾಲ ತಂಗಿ ಅಲ್ಲಿಂದ ಪುನಃ ದಕ್ಷಿಣದ ಯಾತ್ರೆಯನ್ನಾರಂಭಿಸಿ ದಖನ್‌ನ್ನು ಪ್ರವೇಶಿಸಿತು; ಅಂತಿಮವಾಗಿ ಈ ದಕ್ಷಿಣ ಪರ್ಯಾಯ ದ್ವೀಪದಲ್ಲಿ ನೆಲೆಸಿತು. ಎಷ್ಟೋ ಸಹಸ್ರ ವರ್ಷಗಳಲ್ಲಿ ನಡೆದಿರಬಹುದಾದ ಈ ಯುಗ ಯಾತ್ರೆಯು ಇವತ್ತು ಯೋಚಿಸಿದರೆ ವಿಸ್ಮಯ ಹುಟ್ಟಿಸುತ್ತದೆ. ಈ ದೀರ್ಘಯಾತ್ರೆಯಲ್ಲಿ ಆ ಮೂಲಭಾಷಾ ಶಾಖೆಯು ಅದೆಷ್ಟು ಭಾಷಾ ಸಮುದಾಯಗಳಲ್ಲಿ ಹೊಕ್ಕು ನೆಲೆಸಿ ಬಳಸಿ ಆ ಭಾಷೆಗಳ ಸಾಹಚರ್ಯ-ಸಂಘರ್ಷ-ಸಂಧಾನಗಳಲ್ಲಿ ಅವುಗಳ ಶಬ್ದ-ವ್ಯಾಕರಣ ಸಾರಗಳನ್ನು ಅರಗಿಸಿಕೊಳ್ಳುತ್ತ ಬದಲಾಗುತ್ತ ಬೆಳೆದುಕೊಳ್ಳುತ್ತ ಬಂದಿತೋ ದೇವರೇ ಬಲ್ಲ. ಹೀಗೆ ಪ್ರಾಯಶಃ ಕ್ರಿಸ್ತನಿಗಿಂತ ಮೊದಲು ಸಾವಿರ ವರ್ಷಗಳಿಗಿಂತ ಹಿಂದೆಯೇ ಇಲ್ಲಿ ಬಂದು ನೆಲೆಸಿ 'ದ್ರಮಿಳ' 'ದ್ರಾವಿಡ' ಇತ್ಯಾದಿ ಹೆಸರುಗೊಂಡ ಈ ಭಾಷೆಯು ಕ್ರಿಸ್ತಪೂರ್ವದ ಎರಡುಮೂರು ಶತಮಾನಗಳಲ್ಲಿ ಒಡೆದುಕೊಳ್ಳತೊಡಗಿತು ಮತ್ತು ಮೊದಲಿಗೆ ತಮಿಳು ಹಾಗೂ ಅನಂತರ ಕನ್ನಡವು ಪ್ರತ್ಯೇಕ ಭಾಷೆಯಾಗಿ ಅಸ್ತಿತ್ವ ಕಂಡುಕೊಂಡಿತು ವಿಭಜನೆಗೆ ಹಿಂದಿನ ಸಾವಿರಾರು ವರ್ಷ ಮಿಕ್ಕಿದ ಇಲ್ಲಿನ ವಾಸ್ತವ್ಯದಲ್ಲಿ ಹಾಗೂ ಆಮೇಲೆ ಕನ್ನಡ ಭಾಷೆಯು ಕನ್ನಡ ದೇಶವೆನಿಸಿ ಭಾಷೆ-ಸಂಸ್ಕೃತಿ-ಸಮುದಾಯ ಭೌಗೋಳಿಕ ರಾಜ್ಯಗಳೆಲ್ಲದರ ಏಕೀಕೃತ ಸಾವಯವ ಘಟಕವಾಗಿ ಹರಳುಗಟ್ಟಿಕೊಳ್ಳುವ ತನಕದ ಎಂಟೊಂಬತ್ತು ಶತಮಾನಗಳಲ್ಲಿ ಕೂಡ ಈ ಭಾಷೆಯು, 'ಮಾರ್ಗಭಾಷೆ'ಯೆನ್ನುವಂತಿದ್ದ ಸಂಸ್ಕೃತದೊಡನೆಯೂ ಒಡನಾಡಿ ಕೊಳ್ಳುತ್ತ ಕೊಳು ಕೊಡುಗೆಯ ಅನುಸಂಧಾನದಲ್ಲಿ ಬೆಳೆದುಕೊಳ್ಳುತ್ತ ಬಂದಿತು. ಅಲ್ಲಿಂದ ಮುಂದಿನ ಈ ತನಕದ ಸಹಸ್ರಮಾನದಲ್ಲಿ ಕೂಡ ಅರಬ್ಬಿ-ಫಾರ್ಸಿ-ಪೋರ್ಚುಗೀಸ್-ಇಂಗ್ಲಿಷ್‌ಗಳು ಯಜಮಾನಿಕೆ ಯಲ್ಲಿ ಹೆಗಲೇರಿ ಕೂತಿದ್ದಾಗಲೂ ಕನ್ನಡವು ಎದೆಗುಂದಿ ಕುಗ್ಗದೆ ಆ ಭಾಷೆಗಳಿಂದ ಸಾಧ್ಯವಾದ ಲಾಭಗಳನ್ನೆಲ್ಲ ಪಡೆದುಕೊಂಡಿತು.

ಸಮುದಾಯಗಳಲ್ಲಿ ವಿಭಿನ್ನತೆಯನ್ನು ಕಲ್ಪಿಸುವ ಇನ್ನೊಂದು ಸಂಗತಿಯೆಂದರೆ, 'ಧರ್ಮ'. ಕ್ರಿಸ್ತಪೂರ್ವದ ಸಹಸ್ರಮಾನವನ್ನು ಪರಿಗಣಿಸಿದರೆ ಈ ಭಾಗದ ಜನಸಮುದಾಯವು, ಸ್ಥಳೀಯವಾಗಿದ್ದಿರ ಬಹುದಾದ ಹತ್ತು ಹಲವು ಧಾರ್ಮಿಕ ಪಂಥಗತ ವೈದಿಕೋತ್ತರ ಧರ್ಮದಿಂದಲೂ ಬೌದ್ಧ ಧರ್ಮ ದಿಂದಲೂ ಪ್ರಭಾವಗೊಂಡಿರಬೇಕು. ಕ್ರಿಸ್ತನ ಅನಂತರದ ಸಹಸ್ರಮಾನದಲ್ಲಿ ಬೌದ್ಧ-ಜೈನ-ಶೈವ-ಸ್ಮಾರ್ತ-ವೈಷ್ಣವ-ತಾಂತ್ರಿಕ ಇತ್ಯಾದಿ ಧರ್ಮಗಳು ಇಲ್ಲಿ ಪ್ರಭಾವಕಾರಿಯಾಗಿದ್ದವು. ಈ ಅವಧಿಯಲ್ಲಿ ಬಹಳ ಕಾಲ ಜೈನ ಧರ್ಮವು ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿಗಳ ನಿರ್ಮಾಣದ ಹೊಣೆ ಹೊತ್ತು ನಿಂತಿತ್ತು. ಈ ಎರಡನೇ ಸಹಸ್ರಮಾನದಲ್ಲಿ ನಮ್ಮ ಕನ್ನಡ ಜನಪದವು ಹಿಂದಿನ ಧರ್ಮಗಳಲ್ಲದೆ ಶೈವ-ವೀರಶೈವ-ತಾಂತ್ರಿಕ-ಭಕ್ತಿಪಂಥಗಳಿಂದಲೂ ಅದಕ್ಕೆ ಮುಂದೆ ಇಸ್ಲಾಮ್-ಸೂಫಿ-ಕ್ರೈಸ್ತ ಮುಂತಾದ ವಿದೇಶಿ ಧರ್ಮ ಗಳಿಂದಲೂ ಗಾಢವಾಗಿ ಪ್ರಭಾವಗೊಂಡಿತು.

ಇತಿಹಾಸದ ಈ ಸಂಗತಿಗಳನ್ನೆಲ್ಲ ಗಮನಿಸಿದಾಗ ಇವತ್ತಿನ ನಾವು ಕನ್ನಡಿಗರು ಜಗತ್ತಿನ ಬಹುತೇಕ ಎಲ್ಲ ಜನ-ಜನಾಂಗ- ಬುಡಕಟ್ಟು- ಧರ್ಮ-ಜಾತಿಗಳನ್ನೂ ಅರಗಿಸಿಕೊಂಡಿರುವ ವಿಶ್ವಮಾನವರು ಮತ್ತು ನಮ್ಮ ಕನ್ನಡವು ಜಗತ್ತಿನ ಅಸಂಖ್ಯ ಭಾಷೆಗಳನ್ನು ಅರಗಿಸಿಕೊಂಡಿರುವ ವಿಶ್ವಭಾಷೆ. ಹಾಗೆ ನಮ್ಮದು ಕನ್ನಡ ಕೂಪವಲ್ಲ, ಕನ್ನಡ ವಿಶ್ವ, ಕನ್ನಡ ಬ್ರಹ್ಮಾಂಡ.

ಇದು ಕನ್ನಡಕ್ಕೆ ಮಾತ್ರವೇ ಅನ್ವಯಿಸುತ್ತದೆ ಅಂತಲೂ ಅಲ್ಲ. ಜಗತ್ತಿನ ಎಲ್ಲ ಜನ ಸಮುದಾಯಗಳೂ ಎಲ್ಲ ಭಾಷೆಗಳೂ ವಾಸ್ತವವಾಗಿ ಇಂಥ ಪ್ರಕ್ರಿಯೆಯಲ್ಲೇ ರೂಪುಗೊಂಡವು ಮತ್ತು ಅವೆಲ್ಲವೂ ವಿಶ್ವಜನ-ವಿಶ್ವಭಾಷೆಗಳೇ. ಕನ್ನಡ ಭಾಷೆಯ ಮೂಲದ ಮೂಲವು 'ಫಿನ್ನೋ-ಉಗ್ರಿಯನ್' ಎಂದೆನ್ನುವ ಊಹೆಯು ನಿಲ್ಲದೆ ಹೋಗಬಹುದು; ಅದು ಸುಳ್ಳೆಂದು ಮುಂದೆ ಯಾರಾದರೂ ಸಂಶೋಧನೆಯಿಂದ ಸಾಬೀತುಗೊಳಿಸಬಹುದು. ಅದೇನಾದರೂ ನನಗೆ ಚಿಂತೆಯಿಲ್ಲ. ಯಾಕೆಂದರೆ, ವಾಸ್ತವ ಸತ್ಯದ 'ಇತಿಹಾಸ'ವಾಗಿಯಲ್ಲದೆ ಸಂಭಾವ್ಯ ಸತ್ಯದ 'ಐತಿಹ್ಯ'ವಾಗಿ ನಾನಿದನ್ನು ಒಪ್ಪಿಕೊಂಡಿದ್ದೇನೆ. ಎಲ್ಲ ಭಾಷೆಗಳ ಬೆಳವಣಿಗೆಯ ಪ್ರಕ್ರಿಯೆಯೂ ಹೀಗೇ ಆಗಬೇಕಲ್ಲದೆ ಬೇರೆ ಪರ್ಯಾಯವೇ ಇಲ್ಲ. ಅಧ್ಯಯನ ಸೌಲಭ್ಯಕ್ಕಾಗಿ ಶಾಸ್ತ್ರಜ್ಞರು ಜನಗಳಲ್ಲಿ ಮತ್ತು ಭಾಷೆಗಳಲ್ಲಿ ಅನೇಕ ವರ್ಗ ಉಪವರ್ಗಗಳನ್ನು ಕಲ್ಪಿಸಿರುತ್ತಾರೆ. ಅವೆಲ್ಲ 'ಕೇವಲ'ವೆಂದು ಅಥವಾ 'ವಾಸ್ತವ'ವೆಂದು ನಂಬಿ ಮೋಸ ಹೋಗಬಾರದು. 'ಕೇವಲ ಸ್ವಂತಿಕೆ'ಯ ಶುದ್ಧ ಜನವಾಗಲೀ ಶುದ್ಧ ಭಾಷೆಯಾಗಲೀ ಜಗತ್ತಿನಲ್ಲಿ ಇಲ್ಲವೇ ಇಲ್ಲ.

ಇದಾದ ಮೇಲೆ, ಒಂದೊಂದು ಜನವರ್ಗ-ಭಾಷಾವರ್ಗ ಇವೂ ಕಾಲಕಾಲಕ್ಕೆ ತನ್ನದೆಂಬ ಸ್ವಂತಿಕೆಯ ಬಣ್ಣಗಳನ್ನು ಹೊರಗೊಳಿಸಿಕೊಳ್ಳುತ್ತ ಹೋಗುತ್ತವೆ. ಆಯಾ ಸಮುದಾಯಗಳು ಬಾಳಿಕೊಳ್ಳುತ್ತಿರುವ ನೆಲ-ಜಲ, ಬಯಲು ಬೆಟ್ಟ ಕಾಡುಮೇಡುಗಳು ಮತ್ತು ಹೊಳೆ ನದಿ ಸರೋವರ ಸಮುದ್ರಗಳು ಹಾಗೂ ಅಲ್ಲಿ ಅರಳಿಕೊಳ್ಳುವ ವಿಶಿಷ್ಟ ಜನಪ್ರಜ್ಞೆ ಮುಂತಾದವು ಪ್ರಾಯಃ ಸ್ವಂತಿಕೆಗಳನ್ನೂ ಭಿನ್ನತೆಗಳನ್ನೂ ಸೃಷ್ಟಿಸುತ್ತ ಹೋಗುತ್ತವೆ.

ದಕ್ಷಿಣ ಭಾರತದಲ್ಲಿ ಗಣ್ಯಸ್ಥಾನವನ್ನು ಗಳಿಸಿಕೊಳ್ಳಲು ಮೊದಲು ಹವಣಿಸಿದ ಎರಡು ದ್ರಾವಿಡ ಭಾಷೆಗಳೆಂದರೆ, ತಮಿಳು ಮತ್ತು ಕನ್ನಡ. ತಮಿಳಿನ ನೆಲವು ಪರ್ಯಾಯದ್ವೀಪದ ತುದಿ ತ್ರಿಕೋನದಲ್ಲಿ ಮೂರು ಕಡೆ ಸಮುದ್ರ ಮತ್ತು ಇನ್ನೊಂದು ಕಡೆ ಕಾವೇರಿಯ ಪ್ರಾಕೃತಿಕ ರಕ್ಷಣೆಯಲ್ಲಿದ್ದುದು; ಹೊರಗಿನ ಜನರ ಆಕ್ರಮಣ-ಸಂಕರಗಳು ಕಡಿಮೆಯಿದ್ದುದರಿಂದ ಅಲ್ಲಿನ ಜನಪದವು ಹೆಚ್ಚಿನ ನೆಮ್ಮದಿಯಲ್ಲಿ ಉದ್ದಕ್ಕೂ ತನಗೆ ತಾನೆನ್ನುವಂತೆ ಬಾಳಿಕೊಂಡಿತು. ಇದಕ್ಕಿಂತ ಭಿನ್ನವಾದ ಕನ್ನಡದ ನೆಲವು ಮಧ್ಯಸ್ಥಳ-ಸೇತುಭೂಮಿಯಾಗಿ ಮೇಲಿಂದ ಮೇಲೆ ಕ್ಷೋಭೆಗಳನ್ನೆದುರಿಸುತ್ತಲೇ ಬಂದುದರಿಂದ, ಅದು ಉದ್ದಕ್ಕೂ ಅನ್ಯ-ಅನುಸಂಧಾನದ ತಂತ್ರಗಳನ್ನು ಅಳವಡಿಸಿಕೊಳ್ಳುತ್ತ ಬಾಳುವಂತಾಯಿತು. ಈ ಪ್ರಕ್ರಿಯೆಯಲ್ಲಿ ಈ ಎರಡೂ ಭಾಷೆಗಳ ಭಿನ್ನತೆಗಳು ಮೈದಾಳಿಕೊಂಡವು.

ಒಂದು ಉದಾಹರಣೆಯನ್ನು ಕೊಡುತ್ತೇನೆ. ತಮಿಳು ಭಾಷೆಯು, ಸುಮಾರಾಗಿ ಕ್ರಿಸ್ತಪೂರ್ವ ಒಂದೆರಡು ಶತಮಾನಗಳ ಅವಧಿಯಲ್ಲಿ ತನ್ನ ಲಿಪಿ ವ್ಯವಸ್ಥೆಯನ್ನು ರೂಪಿಸಿಕೊಳ್ಳುವಾಗ, ಮೂಲ ಬ್ರಾಹ್ಮೀ ಲಿಪಿಯ ಐವತ್ತಕ್ಕೂ ಮಿಕ್ಕಿದ ಅಕ್ಷರಗಳ ಲಿಪಿಮಾಲೆಯಲ್ಲಿ ತನ್ನ ಉಚ್ಚಾರಣೆಗೆ ಬೇಕಾದ ಇಪ್ಪತ್ತಾರು ಅಕ್ಷರಗಳನ್ನಷ್ಟೇ ಕರಾರುವಾಕ್ಕಾಗಿ ಆಯ್ದುಕೊಂಡಿತು. ಆದಾಗಿ ಒಂದೆರಡು ಶತಮಾನಗಳ ಅನಂತರ ಕನ್ನಡವು ತನ್ನ ಲಿಪಿಮಾಲೆಯನ್ನು ರೂಪಿಸಿಕೊಳ್ಳುವಾಗ, ತನ್ನ ಉಚ್ಚಾರಣೆಗೆ ಅಗತ್ಯವಿಲ್ಲದಿದ್ದಾಗ್ಯೂ ಅದೇ ಬ್ರಾಹ್ಮಿಯ ಬಹುತೇಕ ಅಷ್ಟೂ ಅಕ್ಷರಗಳನ್ನೂ ಇರಲಿ ಅಂತ, ಉಳಿಸಿಕೊಂಡಿತು. ಈ ಮೂಲಕ ಕನ್ನಡವು ಅನ್ಯಭಾಷೆಗಳ ಶಬ್ದಾಕ್ಷರ ವ್ಯವಹಾರಗಳಿಗೂ ಯಾವತ್ಕಾಲಕ್ಕೂ ತೆರಪನ್ನು ಕಾದಿರಿಸಿಕೊಂಡಿತು.

ಈಯೊಂದು ನಿರ್ಧಾರದ ಮೂಲಕ ಈ ಎರಡು ಭಾಷೆಗಳ ಅತ್ಯಂತ ಮೌಲಿಕ ಭಿನ್ನತೆಯೊಂದು ಸೃಷ್ಟಿಗೊಂಡಂತಾಯಿತು.

ತಮಿಳುಭಾಷೆಯ ಮೊದಲ ಆಧಾರಗ್ರಂಥವೆನ್ನಬಹುದಾದ 'ತೊಲ್ಕಾಪ್ಪಿಯಂ' (ಕ್ರಿ.ಶ.೪-೫ನೇ ಶತಮಾನ?) ಮತ್ತು ಅದೇ ಬಗೆಯಲ್ಲಿ ಕನ್ನಡಕ್ಕೆ ಆಧಾರಗ್ರಂಥವಾದ 'ಕವಿರಾಜಮಾರ್ಗ' (ಸು.ಕ್ರಿ.ಶ. ೮೬೦-೮೭೦) – ಈಯೆರಡು ಸಮಾನಗ್ರಂಥಗಳನ್ನು ಪರಸ್ಪರ ಹೋಲಿಸಿ ನೋಡಿದರೆ. ತಮಿಳು ಮತ್ತು ಕನ್ನಡ ಭಾಷೆಗಳು ಪ್ರತ್ಯೇಕ-ಸ್ವತಂತ್ರವಾಗಿ ಹರಳುಗಟ್ಟಿಕೊಳ್ಳುತ್ತಿದ್ದ ಸಂದರ್ಭದಲ್ಲಿ ಯಾವ ಯಾವ ಬಗೆಯ ಸ್ವಂತಿಕೆಗಳನ್ನು ಸೃಷ್ಟಿಸಿಕೊಂಡವು ಮತ್ತು ಭಿನ್ನತೆಗಳನ್ನು ಹೊರಗುಳಿಸಿಕೊಂಡವು ಎಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ.

ಒಂದು ಉದಾಹರಣೆಯನ್ನು ಹೇಳುತ್ತೇನೆ. ಸಂಸ್ಕೃತದಲ್ಲಿ ಆಗ ವಿಪುಲವಾಗಿ ಬೆಳೆದುಕೊಳ್ಳುತ್ತಿದ್ದ 'ಕಾವ್ಯಮೀಮಾಂಸೆ'ಯು ತನಗೆ ಅಪ್ರಸ್ತುತ ಅಥವಾ ಅಪರಿಚಿತ ಎನ್ನುವ ಹಾಗೆ 'ತೊಲ್ಕಾಪ್ಪೀಯಂ', ತಮಿಳಿನದೇ ಆದ ಸ್ವಂತ ಕಾವ್ಯಶಾಸ್ತ್ರವನ್ನು ರಚಿಸಿಕೊಳ್ಳಲು ಯತ್ನಿಸಿತು. 'ಕವಿರಾಜಮಾರ್ಗ'ವು ಅದಕ್ಕೆ ಬದಲಾಗಿ, ಸಂಸ್ಕೃತ ಕಾವ್ಯಮೀಮಾಂಸೆಯನ್ನು ಆಧಾರಕ್ಕಿಟ್ಟುಕೊಂಡು ಅದರಲ್ಲಿ ಕನ್ನಡದ ಸ್ವಂತ ಚಿಂತನೆಗಳೇನೆಂಬುದನ್ನು ಖಚಿತವಾಗಿ ನಮೂದಿಸಿಕೊಳ್ಳುತ್ತ ಹೋಯಿತು. ಸಂಸ್ಕೃತದಲ್ಲಿ 'ಶಾಂತರಸ'ದ ಬಗ್ಗೆ ಚರ್ಚೆಯ ಪ್ರಾರಂಭವಾದದ್ದೇ ಬಹುಶಃ, ಕನ್ನಡದ ವಿಶಿಷ್ಟ ಚಿಂತನೆಯ ಪರಿಣಾಮವಾಗಿ.

ಈ ಭಿನ್ನತೆ-ಏಕತೆಗಳ ಮಾತು ಅಷ್ಟು ಸರಳವಾದ್ದಲ್ಲ ಅಂತಲೂ ನಮಗೆ ಗೊತ್ತಿದೆ. ಒಂದು ಐತಿಹ್ಯವನ್ನು ಕೇಳಿದ್ದೇನೆ. ಕೇರಳದ ವೈಕಂ ಸತ್ಯಾಗ್ರಹದ ಸಂದರ್ಭದಲ್ಲಿ ಗಾಂಧಿಜಿಯು ನಾರಾಯಣ ಗುರುಗಳನ್ನು ಭೇಟಿಯಾದಾಗ ನಡೆದ ಸಂಗತಿಯಂತೆ ಇದು. ಇಬ್ಬರೂ ಆಶ್ರಮದೆದುರು ವಿಶಾಲವಾದ ಮರದ ಕೆಳಗೆ ಕೂತು ಮಾತಾಡಿಕೊಳ್ಳುತ್ತಿದ್ದರಂತೆ. ನಾರಾಯಣ ಗುರು ಅಪ್ಪಟ ಅದ್ವೈತಿ ಮತ್ತು ಗಾಂಧಿ , 'ಅಹಂಬ್ರಹ್ಮಾಸ್ಮಿ' ಅನ್ನಲಿಕ್ಕೆ ಅಂಜಿದವರು. 'ಗುರೂಜಿ, ನಮ್ಮ ತಲೆಯ ಮೇಲೆ ಚಪ್ಪರವಾಗಿರುವ ಈ ದೊಡ್ಡ ಮರದಲ್ಲಿ ಲಕ್ಷಾಂತರ ಎಲೆಗಳಿವೆ; ಇವುಗಳಲ್ಲಿ ಒಂದರ ಹಾಗೆ ಇನ್ನೊಂದು ಇಲ್ಲವೇ ಇಲ್ಲ ಅಲ್ಲವೇ?' ಅಂತ ಗಾಂಧಿ, ಮಾತಿನ ಮಧ್ಯೆ ಪ್ರಶ್ನೆ ಹಾಕಿದರು. ಅದಕ್ಕೆ ಗುರುಗಳ ಉತ್ತರ : 'ಹೌದು. ಆದರೆ ಬಾಯಲ್ಲಿಟ್ಟು ಜಗಿದು ನೋಡಿದರೆ ಅವೆಲ್ಲವುಗಳ ರುಚಿಯೂ ಒಂದೇ ಅಲ್ಲವೆ?' ಈ ಮಾತುಕತೆಯ ಸಂಗತಿ ಏನೇ ಇದ್ದರೂ ಗುರು-ಮಹಾತ್ಮರಿಬ್ಬರೂ ಇಂಥ ದ್ವಂದ್ವಗಳನ್ನು ನಿಚ್ಚಳವಾಗಿ ಅರಿತವರೇ ಎಂಬುದನ್ನು ನಾವು ಬಲ್ಲೆವು. ಇಂಥ ದ್ವಂದ್ವಗಳನ್ನು ಪ್ರಾಯಶಃ, ಬುದ್ಧನು ಹೇಳುವ ಹಾಗೆ, 'ಮಾಧ್ಯಮಿಕ' ದೃಷ್ಟಿಯಿಂದ ಒಮ್ಮೆಲೇ ಒಟ್ಟಿಗೆ, ಗ್ರಹಿಸುವ ಚಾತುರ್ಯ ಬೇಕು.

ಜಗತ್ತಿನಲ್ಲೇ ಅತ್ಯಂತ ಎತ್ತರದ ಏಕಶಿಲಾವಿಗ್ರಹವಾದ ಶ್ರವಣಬೆಳುಗೊಳದ ಗೊಮ್ಮಟ ಪ್ರತಿಮೆಯು ಕನ್ನಡದ ಸೃಷ್ಟಿಯೇ. ಕನ್ನಡದ ಸ್ವಂತಿಕೆಯ ಅಚಲ ಸಾಕ್ಷಿ ಅದು. ಹಾಗಂತ, ಅದರಲ್ಲಿ ಕನ್ನಡದ್ದೆಂದು ಮೇಲಕ್ಕೆ ಕಾಣುವ ಚಹರೆಗಳಾವುವೂ ಇಲ್ಲವೇ ಇಲ್ಲ. ಸ್ಥಳೀಯತೆಯನ್ನು ಕಾಣಿಸಬಹುದಾದ ಯಾವುದೇ ಒಡವೆಯಿಲ್ಲದ, ಕಡೆಗೆ ತುಂಡು ಬಟ್ಟೆಯೂ ಇಲ್ಲದ ನಗ್ನ ಮಾನವ ವಿಗ್ರಹ ಅದು. ಆದರೆ, ಪಂಪಕವಿಯ ಕೃತಿಯ ಸ್ಮೃತಿಯಿಂದ, ಮಾತ್ರವಲ್ಲ ಅದಕ್ಕೆ ಹಿಂದಿನ ಸಹಸ್ರವರ್ಷಗಳ ಕನ್ನಡದ ಸ್ಮೃತಿಯಿಂದ ದೀಪ್ತನಾಗಿರುವ ಕನ್ನಡಿಗನು ಮಾತ್ರವೇ ಆ ಗೊಮ್ಮಟ ಮುಖಚರ್ಯೆಯ ಅಸಂಖ್ಯ ಸೂಕ್ಷ್ಮಗಳನ್ನು ಅರಿವುಗೊಳಿಸಿಕೊಳ್ಳಬಲ್ಲ — ಇತಾಲಿಯನ್ನನೊಬ್ಬ ಅಥವಾ ಒಬ್ಬ ಕ್ರಿಶ್ಚಿಯನ್ ಮೊನಾಲಿಸಾಳ ನಿಗೂಢ ಹಾಸವನ್ನು ಅರಿವುಗೊಳಿಸಿಕೊಳ್ಳಬಹುದಾದಂತೆ. (ಗೊಮ್ಮಟನ ಮುಖಚರ್ಯೆಯನ್ನು ಹೊಳೆಯಿಸಿಕೊಂಡಿರುವ ಕನ್ನಡಿಗನೊಬ್ಬನಿಗೆ ಕ್ರಮೇಣ ಮೊನಾಲಿಸಾಳ ಮುಖಚರ್ಯೆ ಅರಿವುಗೊಂಡೀತು ಮತ್ತು ಹಾಗೇ ಇತಾಲಿಯನ್ – ಕ್ರಿಶ್ಚಿಯನ್‌ಗೆ ಗೊಮ್ಮಟನ ಮುಖಚರ್ಯೆಯೂ ಅವಗತವಾದೀತು.)

'ಕವಿರಾಜಮಾರ್ಗ'ವೆಂಬ ಗ್ರಂಥದ ಮಾತು ಹೇಳಿದೆ. ಕವಿ ಶ್ರೀವಿಜಯ ಮತ್ತು ರಾಜಾ ನೃಪತುಂಗರಿಬ್ಬರೂ ಕೂಡಿ ರಚಿಸಿರುವ ಈ ಗ್ರಂಥವು, ತನ್ನ ಕಿರುಭಾಷೆಯ ಅಂಗೈನೆಲದಲ್ಲಿ ಪ್ರಪಂಚ ಜಗತ್ತನ್ನು ಆವಾಹಿಸಿ ಅರಗಿಸಿಕೊಂಡಿರುವ ಕನ್ನಡವೆಂಬ ನಿಸ್ಸೀಮೆಯ ಪ್ರತಿ ಜಗತ್ತನ್ನು ಹೇಗೆ ಸೃಷ್ಟಿಸಿಕೊಳ್ಳಬೇಕೆಂಬುದರ ಕುರಿತು ಚಿಂತಿಸುತ್ತದೆ. 'ಕವಿರಾಜಮಾರ್ಗ'ದಲ್ಲಿನ ಒಂದು ಕಿರು ಕಂದಪದ್ಯವು ಅದನ್ನು ಮನೋಜ್ಞವಾಗಿ ಬಣ್ಣಿಸುತ್ತದೆ. 'ಕಾವೇರಿಯಿಂದಂ - ಆ ಗೋದಾವರಿವರಂ - ಇರ್ದ - ನಾಡು - ಅದು ಆ ಕನ್ನಡದೊಳ್ ಭಾವಿಸಿದ ಜನಪದಂ.' ಈ ನಾಡು ಮತ್ತು ಜನಪದವು ತತ್ಕಾಲದಲ್ಲಿ ಕಾಣಿಸುತ್ತಿದ್ದ ಭೌಗೋಲಿಕ ಘಟಕವಷ್ಟೇ ಅಲ್ಲ; ಅದು 'ಭಾವಿತ'ವಾದದ್ದು; 'ಕನ್ನಡ'ವೆಂಬುದರ ಒಳಗಡೆ — ಆ ಚಿಪ್ಪಿನ ಒಳಗೆ ಎನ್ನಿ 'ಭಾವಿತ'ವಾದದ್ದು. ಅಂದರೆ, 'ಕನ್ನಡ'ವೆಂಬುದು ಒಂದು ಚಿತ್-ಜಗತ್ತು, ಒಂದು ಕಣಸು, ದರ್ಶನ; ಮೊದಲು ಚಿತ್-ಜಗತ್ತಿನೊಳಗೆ ಮೈದಾಳಿದ್ದಾಗಿ ಅನಂತರ ನಿರ್ಮಿತಗೊಂಡಿದೆ. ಮತ್ತು ಇದು, 'ವಸುಧಾ-ವಲಯ-ವಿಲೀನ, ವಿಶದ-ವಿಷಯ-ವಿಶೇಷಂ'. ವಸುಧಾ (ಭೂಮಿ) ಎನ್ನುವುದು ಅನಂತ ಬ್ರಹ್ಮಾಂಡದೊಳಗಿನ ಒಂದು 'ವಲಯ' ಅಷ್ಟೇ; ಮತ್ತು 'ಕನ್ನಡ'ವೆಂಬ 'ವಿಷಯ' (ನಾಡು)ವು ಆ ವಸುಧಾವಲಯದಲ್ಲಿ 'ವಿಲೀನ'ವಾಗಿದೆ, ಸಮರಸವಾಗಿ ಬೆರೆತುಕೊಂಡಿದೆ. ಹಾಗೆಂದ ಮಾತ್ರಕ್ಕೆ ಇದು ಸ್ವಂತಿಕೆಯ ಚಹರೆಯಿಲ್ಲದೆ ವಸುಧೆಯಲ್ಲಿ ಗುರುತು ಸಿಗದಂತೆ ಮುಳುಗಿಹೋದದ್ದಲ್ಲ; ತನ್ನದೇ 'ವಿಶೇಷ'(ವೈಶಿಷ್ಟ್ಯ) ಇರುವ ನಾಡು. ಅಷ್ಟೇ ಅಲ್ಲ— ಇದು 'ವಿಶದ'ವಾದದ್ದು; ವಸುಧೆ ಅಥವಾ ಬ್ರಹ್ಮಾಂಡದಷ್ಟೇ ವ್ಯಾಪಕವಾದದ್ದು. ಯಾಕೆಂದರೆ ಇದು, 'ವಸುಧಾವಲಯ ವಿಲೀನ, ಇಲ್ಲಿ 'ವಸುಧಾ ವಲಯವಿಲೀನ' ಎಂಬುದರ ಇನ್ನೊಂದು ಅರ್ಥವನ್ನು (ವಸುಧಾವಲಯವನ್ನು ತನ್ನೊಳಗೆ ಅರಗಿಸಿ ಕೊಂಡಿರುವಂಥದು ಎಂಬ ಅರ್ಥವನ್ನು) ಪರಿಭಾವಿಸಿಕೊಳ್ಳಬೇಕು. ವಸುಧೆಯ ಒಳಗಿನ ಒಂದು ಕಿರುಬಿಂದುವಾಗಿದ್ದೂ ತನ್ನೊಳಗೆ ಆ ವಸುಧೆಯನ್ನೇ ಅರಗಿಸಿಕೊಂಡಿರುವ 'ಕನ್ನಡ'ದ ಇಂಥ ಪ್ರತಿಮೆಯನ್ನು 'ಕವಿರಾಜಮಾರ್ಗ'ವು ಕಂಡರಿಸಿಟ್ಟಿದೆ.

ಕನ್ನಡವು ವಸುಧಾವಲಯವನ್ನು ತನ್ನಲ್ಲಿ ವಿಲೀನಗೊಳಿಸಿಕೊಂಡಿರುವ ಪರಿಯನ್ನು 'ಕವಿರಾಜ ಮಾರ್ಗ'ವು ಬಣ್ಣಿಸಿದ್ದರೆ, ರಾಜಾ ನೃಪತುಂಗನು ತನ್ನ ದೊಡ್ಡ ಸಾಮ್ರಾಜ್ಯವನ್ನು ತನ್ನ ಕಿರು ವ್ಯಕ್ತಿತ್ವದೊಳಗೆ ಭಾವಿಸಿಕೊಂಡಿದ್ದ ಪರಿಯನ್ನು ನೃಪತುಂಗನದೇ ಆದ 'ಸಂಜಾನಶಾಸನ'(ಕ್ರಿ.ಶ. ೮೭೧)ದ ಒಂದು ವೃತ್ತವು (ಪ.ಸಂ. ೪೩) ಹೀಗೆ ಬಣ್ಣಿಸಿದೆ :

ರಾಜಾತ್ಮಾ ಮನ ಏವ ತಸ್ಯ ಸಚಿವಃ ಸಾಮಂತಚಕ್ರಂ ಪುನಃ
ತನ್ನಿತ್ಯೇಂದ್ರಿಯವರ್ಗ ಏಷ ವಿಧಿವದ್ವಾಗಾದಯಸ್ಸೇವಕಾಃ
ದೇಹಸ್ಥಾನಮಧಿಷ್ಠಿತಃ ಸ್ವವಿಷಯಂ ಭೋಕ್ತುಂ ಸ್ವತಂತ್ರಃ ಕ್ಷಮಃ
ತಸ್ಮಿನ್ ಭೋಕ್ತರಿ ಸನ್ನಿಪಾತವಿವಶೇ ಸರ್ವೇಽಪಿ ನಶ್ಯಂತಿ ತೇ

(ತನ್ನ ಆತ್ಮವೇ ರಾಜ, ತನ್ನ ಮನಸ್ಸೇ ಮಂತ್ರಿ, ತನ್ನ ಇಂದ್ರಿಯಗಳೇ ಸಾಮಂತವರ್ಗ, ತನ್ನ ಮಾತು ಮುಂತಾದವೇ ಸೇವಕರು — ಹೀಗೆ ತನ್ನ ದೇಹದಲ್ಲೇ ದೇಶವನ್ನು ಅಧಿಷ್ಠಾನಗೊಳಿಸಿಕೊಂಡಿರುವವನು ರಾಜ್ಯವನ್ನು ಸಂಪೂರ್ಣವಾಗಿ ಅನುಭವಿಸಲಿಕ್ಕೆ ತಕ್ಕ ಸಹನಾಶಕ್ತಿಯನ್ನೂ, ಸ್ವಾತಂತ್ರ್ಯವನ್ನೂ ಪಡೆದಿರು ತ್ತಾನೆ; ಹೀಗಿದ್ದಾಗ ರಾಜ್ಯದಲ್ಲಿ ಹುಟ್ಟಿಕೊಳ್ಳುವ ರೋಗಸನ್ನಿಪಾತಗಳು ಸಮಸ್ತವೂ ನಾಶವಾಗಿಹೋಗುತ್ತವೆ.)

ಜಗತ್ತಿಗೆ ತಾನು ವಿಸ್ತರಿಸಿಕೊಳ್ಳುವ ಮತ್ತು ಜಗತ್ತನ್ನು ತನ್ನಲ್ಲಿ ಒಳಗೊಳಿಸಿಕೊಳ್ಳುವ ಈ ಚೋದ್ಯದ ಪ್ರಕ್ರಿಯೆಗೆ ದೃಷ್ಟಾಂತವನ್ನು, ವ್ಯವಸಾಯಗಾರನಾಗಿ ನಾನು ನಿತ್ಯವೂ ಕಣ್ಣೆದುರೇ ಕಾಣುತ್ತೇನೆ. ನೆಲದಲ್ಲಿ

ನೆಟ್ಟುಕೊಂಡ ಬೀಜವು ಅಲ್ಲೇ ಮೊಗ್ಗು ಮೊಗವಡೆದು ಮುನ್ನೂಕಿಕೊಂಡು ಕ್ರಮೇಣ ಬೃಹದಾಕಾರದ ಮರವಾಗಿ ಉಪಬೃಂಹಿತವಾಗಿ ಬೆಳೆಯುತ್ತದೆ, ಬಾನನ್ನು ತುಂಬುತ್ತದೆ; ಅನಂತರ ತನ್ನ ಬೃಹತ್ತನ್ನು ಕಿರುಬೀಜವೊಂದರಲ್ಲಿ ಮರಳಿ ಆಕುಂಚನಗೊಳಿಸಿ ಸಂಗೋಪಿಸಿಕೊಳ್ಳುತ್ತದೆ.

ಕನ್ನಡ ನಾಡು ಎಂಬ ಭಾಷಾ ಸಮುದಾಯವು ಏಕಘಟಕ ಭೌಗೋಲಿಕ ರಾಜ್ಯವೂ ಆಗಿದ್ದುದು ೯ನೇ ಶತಮಾನದಲ್ಲೊಮ್ಮೆ, ಕೆಲವು ಕಾಲ ಮಾತ್ರ. ಮತ್ತೆ ಅದು ಅಸ್ತಿತ್ವಕ್ಕೆ ಬಂದು ಕಂಡದ್ದು ನಮ್ಮ ಕಾಲದಲ್ಲೇ; ೧೯೫೬ರಲ್ಲಿ ಭಾರತದಲ್ಲಿ ಭಾಷಾ ರಾಜ್ಯಗಳ ನಿರ್ಮಾಣವಾದಾಗ. ಹಾಗಾದರೂ 'ಕವಿರಾಜ ಮಾರ್ಗ'ವು ಹರಳುಗಟ್ಟಿಸಿಟ್ಟ ಕನ್ನಡ ಭಾವರಾಜ್ಯವು ಸಹಸ್ರವರ್ಷಗಳಿಗೂ ಮಿಕ್ಕು ಮುಕ್ಕಾಗದೆ ಕನ್ನಡಿಗರ ಅಂತರಂಗದಲ್ಲಿ ತಾಳಿ ಬಾಳಿಕೊಂಡು ಬಂದಿದೆ.

ಅನಂತರ ಒಬ್ಬ ಕವಿಯು (ದುರ್ಗಸಿಂಗ ; ಕ್ರಿ.ಶ. ೧೦೩೦) 'ಕವಿರಾಜಮಾರ್ಗ'ವನ್ನು 'ಕನ್ನಡಿಯುಂ ಕೈದೀವಿಗೆಯುಂ' ಅಂತ ಹೊಗಳಿದ. ಇದು ಬಹು ಮಾರ್ಮಿಕವಾದ ರೂಪಕ. 'ಕವಿರಾಜಮಾರ್ಗ'ವು ವಸುಧಾ ಜಗತ್ತನ್ನೂ ಅದರಲ್ಲಿನ ಕನ್ನಡದ ಸ್ವಾಂತಿಕೆಯ ಜಗತ್ತನ್ನೂ ವಾಸ್ತವವಾಗಿಯೇ ಕಾಣಿಸುವ ಕನ್ನಡಿ; ಮತ್ತು ಅದಕ್ಕಿಂತ ಮುಖ್ಯವಾಗಿ, ನವೋನವಜಾಯಮಾನ-ಸೃಜನಶೀಲತೆಯ 'ಕನ್ನಡದರ್ಶನ'ದ ಕೈದೀವಿಗೆ.

ಈ ಶತಮಾನದ ಪೂರ್ವಾರ್ಧವಿಡೀ ಕನ್ನಡಿಗರು ಕನ್ನಡ ರಾಜ್ಯ ಏಕೀಕರಣಕ್ಕಾಗಿ ಹಂಬಲಿಸಿ ಹೋರಾಡಿದ್ದರು. ಆಗ ರಚಿತವಾದ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ಹಾಡು ಕನ್ನಡದ ರಾಷ್ಟ್ರಗೀತವೆನ್ನಿಸಿಕೊಂಡಿತು. ೧೯೫೬ರಲ್ಲಿ ಕರ್ನಾಟಕ ಏಕೀಕರಣವಾದ ದಿನ ರಾಜಧಾನಿಯಲ್ಲಿ ನಡೆದ ಮಹಾಸಮಾರಂಭದಲ್ಲಿ ನಮ್ಮ ಪ್ರತಿಭಾವಂತ ಹಾಡುಗಾರ ಪಿ. ಕಾಳಿಂಗರಾಯರು, 'ಉದಯವಾಗಲಿ' ಎಂದಿದ್ದುದನ್ನು ಕೊಂಚ ಬದಲಿಸಿ, 'ಉದಯವಾಗಿದೆ ನಮ್ಮ ಚೆಲುವ ಕನ್ನಡ ನಾಡು' ಅಂತ ಹಾಡಿದರಂತೆ. ಆಗ, ಕನ್ನಡದ ಮಹತ್ತ್ವದ ಕವಿ ಬೇಂದ್ರೆಯವರು ಕೊಂಚ ಅಸಮಾಧಾನದಿಂದ, 'ಹಾಂಗೆ ಬದಲಿಸಬಾರದಪಾ' ಅಂದರಂತೆ. ಕವಿಯ ಮಾತು ಸಂಗೀತಗಾರನಿಗೆ ತಟ್ಟನೆ ಅರ್ಥವಾಗಲಿಲ್ಲ. ಅರ್ಥವೆಂದರೆ 'ಕನ್ನಡದರ್ಶನ' ಅಥವಾ 'ಭಾವ ಕನ್ನಡ'ವೆಂಬುದು ಪ್ರಾಯಃ ಯಾವತ್ತೂ ಉದಯ ವಾಗದ, ಆದರೆ ಯಾವದ್ವಿಷ್ವವೂ ಅದರ ಪೂರ್ಣೋದಯಕ್ಕಾಗಿ ಹೊಸ ಹೊಸ ಪ್ರಯತ್ನಗಳನ್ನು ನಡೆಸುತ್ತಲೇ ಹೋಗಲು ಸವಾಲು ಹಾಕಿ ಛಲ ಹುಟ್ಟಿಸುವ – ಮುಂಗೈಲಿದ್ದು ಅಂಗೈಗೆ ಬಾರದ – ಕನ್ನಡ ಜನಪದ ಚೈತನ್ಯವನ್ನು ಬೆಳಕುಬೀರಿ ಮುಂದುಮುಂದಕ್ಕೆ ನಡೆಸುವ ಮಾಯದ ಕೈದೀವಿಗೆ.

ಯಾಕೆ ಇದನ್ನು ಒತ್ತಿ ಹೇಳುತ್ತಿದ್ದೇನೆಂದರೆ, ಮೂಲನಿಷ್ಠಾವಾದ (ಫಂಡಮೆಂಟಲಿಸ್ಟ್)ವು ಗೂಡುಗಟ್ಟಬಹುದಾದ ಕೊಂಬೆಯೂ ಇದೇ. ಕನ್ನಡದ ಸ್ವರ್ಣಯುಗವೊಂದು ಹಿಂದಕ್ಕೆ ಇತ್ತು ಅಂತ ಭ್ರಾಂತಿಗೊಂಡಿರುವವನು ತನ್ನ ಭ್ರಮೆಯ ಆ ಪ್ರಾಚೀನ ಜಗತ್ತಿಗೆ ಮರಳಿಕೊಳ್ಳಲು ತವಕಿಸುತ್ತಾನೆ, ಮೂಲ ನಿಷ್ಠನಾಗುತ್ತಾನೆ. ನನಗೆ ಅಂಥ ಭ್ರಾಂತಿ ಇಲ್ಲವೇ ಇಲ್ಲ. ಪೂರ್ವದ ಕನ್ನಡ ಭವವು ಈಗಿನಷ್ಟೇ, ಅಥವಾ ಬಹುಶಃ ಈಗಿಗಿಂತಲೂ ಹೆಚ್ಚು ಕಲುಷಿತವಾದ್ದಿರಬೇಕು, ದುಷ್ಟವಾದ್ದಿರಬೇಕು ಅಂತ ನನ್ನ ಊಹೆ. ಆದರೆ ಪೂರ್ವದ ಯುಗಯುಗಗಳ ಭಾವ ಕನ್ನಡ- ಸ್ಮೃತಿ ಕನ್ನಡವು ಇವತ್ತಿಗೂ ನನಗೆ ಸಂಜೀವನಿ ಯಿರಬಹುದಾದ ಗಣಿ; ಅಗೆದಗೆದು ಅದನ್ನು ಶೋಧಿಸಿಕೊಳ್ಳಲು ಹಾರೈಸುತ್ತೇನೆ, ಹವಣಿಸುತ್ತೇನೆ.

ಪ್ರಾರಂಭದಲ್ಲಿ ನಾನು ಇವತ್ತಿನ ನಮ್ಮ ಆಕಾಶದಲ್ಲಿ ಹುಯ್ಯಲಿಡುತ್ತಿರುವ ಜಾಗತೀಕರಣ - ಜಗತ್‌ಗ್ರಾಮ ಜಾಹೀರುಗಳ ಬಗ್ಗೆ ಪ್ರಸ್ತಾಪಿಸಿದೆ. ಜಗತ್ತು ಎನ್ನುವ ಈ ಶಬ್ದವನ್ನು ಬಹು ಸಲೀಸಾಗಿ

ಉಗ್ಗಡಿಸುತ್ತೇವಲ್ಲ? ಬೇರೆ ಬೇಡ, ಈ ಭೂಜಗತ್ತನ್ನೇ ತೆಗೆದುಕೊಳ್ಳಿ. ಅದು ಯಾವುದು? ಎಲ್ಲಿದೆ? ಭೂಗೋಲ ಭೂಭಾಗ ನಕಾಶೆಗಳೆಲ್ಲವೂ ನಮಗೆ ಗೊತ್ತು. ವಿಮಾನದಲ್ಲಿ ಸಂಚಾರ ಹೊರಟು ಹಲವಾರು ದೇಶಗಳ ರಾಜಧಾನಿಗಳಲ್ಲಿ ಮೊಕ್ಕಾಂ ಮಾಡಿ ತಂಗಿ, ಅಲ್ಲಲ್ಲಿನ ವಿಶೇಷಗಳೆಲ್ಲವನ್ನೂ ಪರಿವೀಕ್ಷಿಸುತ್ತ ಭೂಮಂಡಲವನ್ನು ಸುತ್ತುವವರಿದ್ದಾರೆ. ಅಂಥವರಿಗೂ ಜಗತ್ತು ಎನ್ನುವ ಆ ಸಮಸ್ತವೂ ಅಂತಿಮವಾಗಿ ಉಳಿದುಕೊಳ್ಳುವುದು ಅವರ ಐದಾರಡಿ ಗಾತ್ರದ ದೇಹ ಪಂಜರದ ಒಳಗೇನೇ. ಅಂಥ ಚಾರಣ ಚಕ್ರವರ್ತಿಗಳಿಗೂ ಅಂತಿಮವಾಗಿ ಜಗತ್ತೆಂದರೆ ಅವರ ಪಂಚೇಂದ್ರಿಯ ಮನಸ್ಸು ಬುದ್ಧಿಗಳು ಏನೇನನ್ನು ಹಿಡಿದು ಅವರ ಗಾತ್ರ ಪಂಜರದಲ್ಲಿ ಇಡಿದಿಟ್ಟಿರುತ್ತವೋ ಅಂಥ ಚಿತ್ರಗಳು-ಪ್ರತಿಮೆಗಳು ಮಾತ್ರವೇ. ಸೂರ್ಯ-ಚಂದ್ರ-ಗ್ರಹ-ನಕ್ಷತ್ರ ಸ್ಥಗಿತ ಸಮಸ್ತ ವಿಶ್ವಮಂಡಲವೂ ಚಿತ್ತಗತ ಚಿತ್ರವಷ್ಟೇ. ತನ್ನೊಳಗೆ ಅಡಸಿ ಅಡಗಿಸಿಕೊಂಡದ್ದನ್ನು ಬಿಟ್ಟು ಹೊರಗಿನದೇನುಂಟು ನಮಗೆ?


ಪ್ರವಾಹದಲ್ಲಿ ಮುಳುಮುಳಗಿ ತೇಲಿಹೋಗುತ್ತಿದ್ದ ಒಂದು ನರಿಯು, 'ಹೋ, ಜಗತ್ತು ಮುಳುಗುತ್ತಿದೆ' ಅಂತ ಅರಚಿಕೊಳ್ಳುತ್ತಿತ್ತಂತೆ. ಅದನ್ನೊಂದು ಪರಿಹಾಸದ ಕಥೆಯಾಗಿ ಹೇಳುವುದುಂಟು. ಪರಿಹಾಸವ್ಯಾತಕ್ಕೆ? ಅದೇ ವಾಸ್ತವ. ಜಗತ್ತು ಇರುವುದು ನಮ್ಮ ಒಳಗೇ ಮತ್ತು ನಾವು ಮುಳುಗಿದರೆ ಆ ನಮ್ಮ ಜತ್ತು ಮುಳುಗಿದಂತೇ ಅಲ್ಲವೆ? 'ಅಲ್ಲ, ಜಗತ್ತು ನಮ್ಮ ಹೊರಗೆ ಆಚೆಗಿರುವಂಥದು' ಅಂತ ಯಾರಾದರೂ ವಾದಿಸುವುದಾದರೆ, 'ಹಾಗೆನ್ನುವ ಆ ನಂಬಿಕೆ ಕೂಡ ನಿಮ್ಮ ಒಳಗಿನದು, ಹೊರಗೆ ಇರುವಂಥದಲ್ಲ' ಅನ್ನುತ್ತೇನೆ ನಾನು.

ಜಾಗತೀಕರಣವೆಂಬ ಇವತ್ತಿನ ನಮ್ಮ ಸಂಭ್ರಮಣವನ್ನು ಕಂಡು ಯಾಕೆ ನನಗೆ ಅಸಮಾಧಾನ ವಾಗುತ್ತದೆ ಮತ್ತು ಯಾಗೆ ಜುಗುಪ್ಸೆ-ಭೀತಿಗಳಿಂದ ಮೈ ನಡುಗುತ್ತದೆ ಅಂತ ಯೋಚಿಸುತ್ತೇನೆ. 'ಜಾಗತೀಕರಣ'ದ ನಿರ್ಭಿನ್ನ ಪ್ರತಿಮುಖವಾಗಿರುವ 'ಸ್ಥಳೀಕರಣ'ವನ್ನು ಮರೆತು ಅಥವಾ ಅವಗಣಿಸಿ ಅದೊಂದನ್ನೇ ವಿಜೃಂಭಿಸುವುದನ್ನು ಕಂಡು ಅಸಮಾಧಾನವಾಗುತ್ತದೆ. ಅದಕ್ಕಿಂತಲೂ ಈ ಜಾಗತೀಕರಣ ವೆಂಬುದು ಪರರನ್ನು ವಂಚಿಸಿ ನಫೆ ಕಮಾಯಿಸಿಕೊಳ್ಳುವೆನೆಂಬ ಅಸಹ್ಯ ಅಮಾನುಷ ವಾಣಿಜ್ಯ ಶೋಷಣೆಯ ಘೋರ ದುಸ್ಸಾಹಸಕ್ಕೆ ಕೊಟ್ಟುಕೊಂಡಿರುವ ಹೊಸ ಹೆಸರು ಎಂಬುದರ ಅರಿವಾಗಿ ಜುಗುಪ್ಸೆ ಹುಟ್ಟುತ್ತದೆ, ಅಪಾರ ಭಯವಾಗುತ್ತದೆ.

ನಮಸ್ಕಾರ.

ಕೃಪೆ : *'ಕವಿರಾಜ ಮಾರ್ಗ ಮತ್ತು ಕನ್ನಡ ಜಗತ್ತು'* ಪುಸ್ತಕದ ಆಯ್ದ ಭಾಗ
ಪ್ರ : ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ
(ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದ ಪುಸ್ತಕ)





ಸುಬ್ಬಣ್ಣನವರ ಕನ್ನಡಿ ವಿವೇಕ

■ ರಾಮಲಿಂಗಪ್ಪ ಟಿ. ಬೇಗೂರು

ಇತ್ತೀಚೆಗಷ್ಟೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಶ್ರೀ ಕೆ.ವಿ. ಸುಬ್ಬಣ್ಣನವರ 'ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು' ಕೃತಿಯನ್ನು ಓದಿದ ನಂತರ ಉಂಟಾದ ಅಭಿಪ್ರಾಯಗಳನ್ನು ಹಂಚಿಕೊಳ್ಳುವುದು ಈ ಟಿಪ್ಪಣಿಯ ಉದ್ದೇಶವಾಗಿದೆ.

ಕನ್ನಡ ಭಾಷಾ ಪಠ್ಯವೊಂದರ ತಾತ್ವಿಕತೆಯನ್ನು ನಿರ್ವಚಿಸಲು ಸುಬ್ಬಣ್ಣನವರು ಅದಕ್ಕೆ ಒಂದು ಸಾವಿರ ವರ್ಷದ ಚಾರಿತ್ರಿಕ ಹಿನ್ನೆಲೆಯನ್ನು ಸಿದ್ಧ ಮಾಡಿದ್ದಾರೆ. ಹಾಗೇ ಕೃತಿ ಸೃಷ್ಟಿ ಕಾಲಾನಂತರದ ಸಾವಿರ ವರ್ಷಗಳ ಕನ್ನಡ ಚರಿತ್ರೆಯೊಳಗೂ ಅದನ್ನಿಟ್ಟು ಕಾಣುತ್ತಾರೆ. ಈ ಪ್ರಯತ್ನ ಬಹು ಮಹತ್ವದ ಪ್ರಯತ್ನ. ಒಂದು ಪಠ್ಯವನ್ನು ಚರಿತ್ರೆಯ ಉತ್ಪನ್ನ ಮತ್ತು ಭವಿಷ್ಯತ್ತಿನ ಕೈದೀವಿಗೆ ಎಂಬಂತೆ ಕಾಣುವ ಪ್ರಯತ್ನವಿದು.

ನಮ್ಮ ಆಧುನಿಕ ವಿಮರ್ಶಾವಲಯದಲ್ಲಿ ಕೃತಿಯನ್ನು ಅದು ರಚನೆಯಾದ ಕಾಲ, ಪರಿಸರಗಳಿಂದ ನೋಡಿ ಅರ್ಥಮಾಡಿಕೊಳ್ಳುವ ಮತ್ತು ವರ್ತಮಾನದ ಹಿನ್ನೆಲೆಯಲ್ಲಿ ಅದರ ಪ್ರಸ್ತುತತೆಯನ್ನು ಪರೀಕ್ಷಿಸುವ ಎರಡೂ ತೆರನ ವಿಧಾನಗಳು ಯಾವತ್ತಿನಿಂದಲೂ ಇವೆ. ಸುಬ್ಬಣ್ಣನವರ ಚಿಂತನೆ ಕೂಡ ಈ ಎರಡೂ ವಿಧಾನಗಳನ್ನು ವಿಲೀನಗೊಳಿಸಿ, ಸಾಹಿತ್ಯ ವಿಮರ್ಶೆಯು ಸಾಂಸ್ಕೃತಿಕ ಅನುಸಂಧಾನವಾಗಿ ಹೊರಳಿದ ಮಹತ್ತು ಮತ್ತು ಡಿ.ಆರ್. ನಾಗರಾಜರಂಥವರ ವಿಮರ್ಶಾ ಬೀಸುತನದ ಆಪತ್ತು ಇವೆರಡೂ ಇವರ ಕೃತಿಯಲ್ಲಿ ಮಿಳಿತಗೊಂಡಿವೆ.

ಕವಿರಾಜಮಾರ್ಗವನ್ನು ದುರ್ಗಸಿಂಹ ಮತ್ತು ಒಂದನೇ ನಾಗವರ್ಮರು ಕೈದೀವಿಗೆ – ಕನ್ನಡಿ ಎಂದು ಕರೆದಿರುವುದನ್ನು ಇವರು ತತ್ವಶಃ ಒಪ್ಪಿದ್ದಾರೆ. ಹಾಗೇ ಈ ಪಠ್ಯದ ವಿವೇಚನೆಗೆ ನೆಬ್ರಿಜಾನ ಸ್ಪ್ಯಾನಿಶ್ ವ್ಯಾಕರಣ, ಇವ್ಯಾನ್ ಇಲಿಚ್‌ನ ಚಿಂತನೆ, ಶೆಲ್ಡನ್ ಪೊಲಾಕ್‌ನ ವಿಶ್ವಾತ್ಮಕ ದೇಶಭಾಷೆ, ತಮಿಳಿನ ತೊಲ್ಕಾಪ್ಪಿಯಂ, ಕನ್ನಡ ಜನಪದ, ಚರಿತ್ರೆಗಳೆಲ್ಲದರಿಂದಲೂ ಸ್ಫೂರ್ತಿ ಪಡೆದಿದ್ದಾರೆ.

ಇಲ್ಲಿನ ಸುಬ್ಬಣ್ಣನವರ ದೃಷ್ಟಿಕೋನ ಸ್ಥಳೀಯದೊಳಗೆ ಇವರು ವೈಶ್ವಿಕತೆ ಮತ್ತು ವೈಶ್ವಿಕತೆಯೊಳಗೆ ಇರುವ ಸ್ಥಳೀಕತೆಗಳೆಂಬ ದ್ವಂದ್ವಾತ್ಮಕ ನೆಲೆಯಲ್ಲಿ ರೂಪಿತಗೊಂಡಿರುವಂಥದ್ದು. ಇದು ಇವರ ವ್ಯಕ್ತಿತ್ವ ಕೂಡ. ಇಂಥ ತಮ್ಮ ವ್ಯಕ್ತಿತ್ವವನ್ನೇ (ದೃಷ್ಟಿಕೋನವನ್ನೇ) ಕವಿರಾಜಮಾರ್ಗ ಪಠ್ಯ ಕನ್ನಡಿಯಲ್ಲಿ ಕಾಣುತ್ತಾರೆ ಅಥವಾ ಇದೆಯೆಂದು, ಕಾಣಿಸುತ್ತಿದ್ದೇನೆಂದು ಹೇಳುತ್ತಾರೆ. ತನ್ನೊಳಗೆ ಇರುವ ನಂಬಿಕೆಯನ್ನು ಪಠ್ಯದೊಳಗೆ ಕಾಣುವ ಪರಿ ಇದು. ಪಠ್ಯದಲ್ಲಿ ಏನಿದೆ ಎಂಬುದಕ್ಕಿಂತ ಅದರಲ್ಲಿ ಓದುಗ ಏನನ್ನು ಕಾಣುತ್ತಾನೆ ಎಂಬುದೇ ಮುಖ್ಯವಾಗುವ ಓದುಗ ಸ್ಪಂದನ ಸಿದ್ಧಾಂತ ಸುಬ್ಬಣ್ಣನವರ ಈ ಪುಸ್ತಕವನ್ನು ಓದುವಾಗೆಲ್ಲ ನೆನಪಾಗುತ್ತದೆ.

ಕವಿರಾಜಮಾರ್ಗದ ಒಂದೆರಡು ಪದ್ಯಗಳನ್ನು (ಕಾವೇರಿಯಿಂದ ಮಾ..., ನೆರೆಸೈರಿಸಲಾರ್ಪೊಡೆ... ಹೀಗೆ) ಮಾತ್ರ ಬಳಸಿಕೊಂಡು ಒಂದು ರೀತಿಯಲ್ಲಿ ಇಡೀ ಪಠ್ಯದ ಬಯಾಪ್ಸಿಯನ್ನು ಮಾಡುವ ಇವರು; ''ಕವಿರಾಜಮಾರ್ಗದ ಪೀಠಿಕೆಯನ್ನು ಕನ್ನಡ ತತ್ವದ ಭದ್ರ ಭೂಮಿಕೆಯೆಂದು ಗ್ರಹಿಸಬೇಕು... ಈ ಭೂಮಿಕೆಯ ಬೆಳಕಿನಲ್ಲಿಯೇ ಇಡೀ ಪಠ್ಯವನ್ನು ಗ್ರಹಿಸಿಕೊಳ್ಳಬೇಕು. ಹೀಗೆ ಮಾಡಿದಾಗ ಮಾತ್ರ ಇಡೀ ಪಠ್ಯದ ಅರ್ಥವಂತಿಕೆಯು ಅನಾವರಣಗೊಳ್ಳಬಲ್ಲದು'' (ಪು. ೫೪) ಎಂದು ಹೇಳುತ್ತಾರೆ. ಇದೇ ಬೆಳಕಿನಲ್ಲಿ ಇಡೀ 'ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು' ಕೃತಿಯನ್ನು ರಚಿಸಿದ್ದಾರೆ.

ಶ್ರೀವಿಜಯನು ಕವಿ ರೀತಿಗಳನ್ನು ಹೇಳುವಾಗ ಲೋಕದಲ್ಲಿ ಅನಾದಿಕಾಲದಿಂದಲೂ ಎಷ್ಟೆಲ್ಲ ಕವಿಗಳಿದ್ದಾರೊ ಅಷ್ಟೊಂದು ಉಕ್ತಿರೀತಿಗಳಿವೆ ಎಂದಿದ್ದಾನೆ. ಇದನ್ನೇ ಮಾರ್ಗಭೇದಕ್ಕೆ ಅನ್ವಯಿಸಿ, 'ಉಕ್ತಿಗಳುಂ ಅನಂತ ಭೇದವದರಿಂ ಮಾರ್ಗಂ' ಎಂದಿದ್ದಾನೆ. ಇಲ್ಲಿ ಶ್ರೀ ವಿಜಯ ಹೇಳುತ್ತಿರುವುದು ಕವಿತ್ವದ ರೀತಿಯ ಬಹುತ್ವ, ಭಾಷಾ ಮಾರ್ಗದ ಬಹುತ್ವ, ಮತ್ತು ಕನ್ನಡ ಸಂಸ್ಕೃತಾದಿಗಳಲ್ಲಿರುವ ಬಹುತ್ವವನ್ನು. ಆದರೆ ಇದನ್ನು ಸುಬ್ಬಣ್ಣನವರು ಬಹುತ್ವವೆಂದು ಗ್ರಹಿಸದೆ 'ದ್ವಂದ್ವತತ್ವವಿವೇಕ' (ಪುಟ ೬೧) ಎಂದೇ ಗ್ರಹಿಸಿದ್ದಾರೆ. 'ಕವಿ ಪ್ರತಿಭೆಯಿಂದ ದ್ವಂದ್ವ ಸೂಕ್ಷ್ಮಗಳನ್ನು ಅರಿವುಗೊಳಿಸಿಕೊಳ್ಳಬೇಕೆಂಬ ಎಚ್ಚರವಿರುವುದು ಈ ಗ್ರಂಥದ ಅತಿಶಯವಾಗಿದೆ (ಪು. ೭೮) ಎಂದು ಯತಿ ವಿಲಂಘನ ವ್ಯಾಯಾಮದ ಕೊನೆಯಲ್ಲಿ ಇವರು ತಲುಪುವ ತೀರ್ಮಾನವೂ ಇದೇ ರೀತಿಯದ್ದೇ. ಹಾಗಾಗಿಯೇ ಕವಿರಾಜಮಾರ್ಗದ ಪೀಠಿಕಾ ಭಾಗವು ಇವರ ಪ್ರಕಾರ : 'ಕನ್ನಡವೆಂಬ ಸಮಸ್ತವನ್ನು ಮೂರ್ತ-ಅಮೂರ್ತ, ಸಾಮಾನ್ಯ - ವಿಶಿಷ್ಟ, ಭೌತಿಕ-ಭಾವಕ ಎಂಬ ವಿರುದ್ಧ ದ್ವಂದ್ವಗಳಲ್ಲಿ ಏಕತ್ರಗ್ರಹಿಸಿ ಕಂಡರಿಸುತ್ತದೆ' (ಪು. ೫೪) ಹೀಗೆ ಎಲ್ಲವನ್ನೂ ದ್ವಿಮಾನ ವೈರುಧ್ಯಗಳಲ್ಲೇ (Binary oppositions) ಗ್ರಹಿಸುತ್ತಿರುವುದು ಸುಬ್ಬಣ್ಣನವರೇ ವಿನಾ ಕವಿರಾಜಮಾರ್ಗವಲ್ಲ.

ಸುಬ್ಬಣ್ಣನವರು ಕವಿರಾಜ ಮಾರ್ಗವನ್ನು ಕವಿ ಮತ್ತು ರಾಜರಿಬ್ಬರೂ ಸೇರಿ ಜಂಟಿಯಾಗಿ ರಚಿಸಿದ ಕೃತಿ ಎಂದು ಹೇಳುತ್ತಾರೆ(ಪುಟ ೪೦). ಕವಿರಾಜಮಾರ್ಗವೆಂದರೆ ರಾಜನ ಅನುಮತ (Acceptance) ಉಳ್ಳ, ಕವಿಗಳಿಗೆ ತೋರುತ್ತಿರುವ ರಾಜಮಾರ್ಗ. ಇದೇ ಇದರ ಪ್ರಧಾನ ಅರ್ಥ. ಮಿಕ್ಕೆಲ್ಲ ಅರ್ಥಗಳೂ ಭಾಷಾ ಸಾಧ್ಯತೆಗಳಷ್ಟೇ. ಸುಬ್ಬಣ್ಣನವರ 'ಇದು ಕವಿ ಮತ್ತು ರಾಜ ಜಂಟಿಯಾಗಿ ನಿರ್ಮಿಸಿದ ಮಾರ್ಗ ಎನ್ನುವುದನ್ನು ಮುಖ್ಯಾರ್ಥವಾಗಿಯೂ ಉಳಿದವನ್ನು ಅದರ ಉಪಾರ್ಥ ಧ್ವನಿಗಳನ್ನಾಗಿಯೂ ಗ್ರಹಿಸಬೇಕು' ಎಂಬ ಸೂಚನೆಯನ್ನು ಇಲ್ಲಿ ಒಪ್ಪಲಾಗುವುದಿಲ್ಲ. ಸೋಜಿಗವೆಂದರೆ ಸುಬ್ಬಣ್ಣನವರಿಗೇ ತಮ್ಮ ಈ ಜಂಟಿಕರ್ತೃಕವೆಂಬ ಪ್ರಮೇಯವನ್ನು ಖಚಿತವಾಗಿ ನಿರೂಪಿಸಲು ಮನಸಿದ್ದಂತೆ ಕಾಣುವುದಿಲ್ಲ. ೧೮, ೪೬ ಹಾಗೂ ೧೦೭ನೇ ಪುಟಗಳಲ್ಲಿ ಇದಕ್ಕೆ ತದ್ವಿರುದ್ಧವಾದ ಏಕಕರ್ತೃಕ ಅಂಶವನ್ನೇ ಪ್ರಸ್ತಾಪಿಸಿದ್ದಾರೆ. ಇದನ್ನು ನೇರವಾಗಿ 'ಇದರ ಕಾರಣನು ನೃಪತುಂಗ ಮತ್ತು ಕರ್ತೃ ಶ್ರೀವಿಜಯ' ಎಂದು ಹೇಳುತ್ತಾರೆ (ಪು. ೧೦೭)' ಹೀಗೆ ಖಾಚಿತ್ಯರಾಹಿತ್ಯವೇ ಇವರ ಪ್ರಮೇಯಗಳ ಗುಣವೂ ದೌರ್ಬಲ್ಯವೂ ಆಗಿದೆ.

ಅಂದಿನ ಕವಿರಾಜಮಾರ್ಗದ ವಿವೇಕದಿಂದ ನಾವು ಇಂದಿನ ನಮ್ಮ ಕನ್ನಡತನದ ಬಿಕ್ಕಟ್ಟು, ಸವಾಲುಗಳಿಗೆ ಪರಿಹಾರ ಕಂಡುಕೊಳ್ಳಬಹುದು ಎಂಬುದು ಇನ್ನೊಂದು ಮುಖ್ಯ ಪ್ರಮೇಯ. ಇದನ್ನೇ ಇವರು 'ಇತಿಹಾಸ ಸರಣಿಯಲ್ಲಿ ನಾವು ಯಾವ ಯಾವ ಸಮಸ್ಯೆ ಸವಾಲುಗಳನ್ನು ಎದುರಿಸುತ್ತ ಕಂಗೆಟ್ಟಿದ್ದೇವೋ ಅಂಥ ಸಮಸ್ಯೆಗಳ ಮೂಲವನ್ನು ಎಂದರೆ; ಪ್ರಾಯಃ ಕನ್ನಡತನದ ತಾತ್ವಿಕತೆ ಮತ್ತು ಅನುಷ್ಠಾನದ ಸಮಸ್ಯೆಗಳನ್ನು ಕುರಿತೇ ಇದು ಮಾತಾಡುತ್ತಿದೆ ಹಾಗೂ ಈ ಸಮಸ್ಯೆಗಳ ಜೊತೆ ಅನುಸಂಧಾನಕ್ಕೆ ಬೇಕಾದ ವಿವೇಕ, ಉಪಾಯಗಳ ಬಗ್ಗೆ ಚಿಂತಿಸಿದೆ' ಎಂಬ ಮಾತುಗಳಲ್ಲಿ ಹೇಳುತ್ತಾರೆ (ಪು. ೩೭)

ಆದರೆ ವರ್ತಮಾನದ ಈ ನೂರು ವರ್ಷಗಳಲ್ಲಿನ ಕನ್ನಡತನದ ಕುರಿತಂತೆ ನಾವು ಕಂಗೆಟ್ಟು ಕಳವಳಗೊಳ್ಳಲು ಕಾರಣವಾಗಿರುವ ಸಮಸ್ಯೆಗಳೇ ಶ್ರೀವಿಜಯನ ಅಥವಾ ಆ ಕಾಲದ ಸಮಸ್ಯೆಗಳೇನೂ ಅಲ್ಲ. ಹಾಗಾಗಿ ಅವನ ವಿವೇಕ, ಉಪಾಯಗಳಿಗೂ, ನಮ್ಮ ವಿವೇಕ, ಉಪಾಯಗಳಿಗೂ ತಾಳೆಯಾಗುವುದಿಲ್ಲ. ಅಂದರೆ ಕನ್ನಡವು ಶಿಕ್ಷಣ ಮಾಧ್ಯಮವಾಗಬೇಕಾದ, ಕನ್ನಡವು ಆಡಳಿತದಲ್ಲಿ ಅನುಷ್ಠಾನಗೊಳ್ಳಬೇಕಾದ ಮತ್ತು ವೈಶ್ವಿಕ ನೆಲೆಯಲ್ಲಿ ಉನ್ನತ ಅಂತಸ್ತನ್ನು ಪಡೆಯಬೇಕಾದ ಇಂದಿನ ಬಿಕ್ಕಟ್ಟುಗಳಿಗೂ ಕವಿರಾಜಮಾರ್ಗದ ಕನ್ನಡತನದ ತಾತ್ವಿಕತೆ ಮತ್ತು ಅನುಷ್ಠಾನದ ಸಮಸ್ಯೆಗಳಿಗೂ ಸಂಬಂಧವಿಲ್ಲ. ಹೀಗಾಗಿ ಕವಿರಾಜ ಮಾರ್ಗದ ಅನುಸಂಧಾನ ಸಮಗೆ ಇಂದಿಗೆ ಬೇಕಾದ ಕನ್ನಡತನದ ರಕ್ಷಣಾ ಸೂತ್ರಗಳು ಸಿಗುತ್ತವೆ ಎಂದು ತೋರುವುದಿಲ್ಲ. (ಹೆಚ್ಚಿನ ವಿವರಗಳಿಗೆ ನೋಡಿ : ಕಲ್ಗುಡಿ, ಕೆ.ವಿ. ನಾರಾಯಣರ ಲೇಖನಗಳು. ಕವಿರಾಜಮಾರ್ಗ ಸಾಂಸ್ಕೃತಿಕ ಮುಖಾಮುಖಿ)

ಕನ್ನಡ ಸ್ವಾಂತಿಕೆಯಾದ ಯತಿವಿಲಂಘನವನ್ನು ಹೇಳುತ್ತ ಸುಬ್ಬಣ್ಣನವರು, ''ಮೊದಲ ಸಹಸ್ರದಲ್ಲಿ ಕನ್ನಡವು ಮಹಾಕಾವ್ಯಗಳಿಂದೊಡಗೂಡಿದ ಶ್ರೀಮಂತ ಭಾಷೆಯನ್ನು ನಿರ್ಮಿಸಿಕೊಳ್ಳಬೇಕೆಂಬ ಅತ್ಯುತ್ಸಾಹದ ಭರದಲ್ಲಿ ಸಮೃದ್ಧವಾಗಿದ್ದ ಸಂಸ್ಕೃತವನ್ನು ಸುಲಿದು, ದೋಚಿಕೊಳ್ಳಲು ತವಕಿಸಿತು. ಈ ಅತ್ಯಾಕಾಂಕ್ಷೆ ಆತುರಗಳಲ್ಲಿ ಕನ್ನಡ ಭಾಷೆಯು ಸಂಸ್ಕೃತ ಭೂಯಿಷ್ಠವಾಯಿತು'' (ಪುಟ ೭೨) ಇದೇ ಕನ್ನಡ ೧೨ನೇ ಶತಮಾನದ ನಂತರ ತನ್ನ ವಿವೇಕವನ್ನು ಮರಳಿಸಿಕೊಂಡಿತು. ಆದರೆ ಸಂಸ್ಕೃತ ಶಬ್ದಗಳನ್ನು ಹಾಗೆ ದೋಚಿಕೊಂಡದ್ದರಿಂದಲೇ ಅಲ್ಲಮನಂಥ ಮಹಾ ದಾರ್ಶನಿಕನು ಕನ್ನಡದಲ್ಲೇ ಬರೆಯಲು ಮತ್ತು ಭಾರತದ ಮಹಾಚಿಂತಕರನೇಕರ ಜೊತೆಗೆ ಕನ್ನಡದಲ್ಲಿಯೇ ಸಮರ್ಥವಾಗಿ ಚರ್ಚಿಸಲು, ವಾದಿಸಲು, ಗುದ್ದಾಡಿಕೊಳ್ಳಲು ಸಾಧ್ಯವಾಯಿತು ಎಂದು ತರ್ಕಶೀಲವಾಗಿ ನಿರ್ಣಯ ಮಾಡುತ್ತಾರೆ. ಕನ್ನಡ ಶ್ರೀಮಂತವಾದದ್ದೇ ಸಂಸ್ಕೃತದಿಂದ. ಹಾಗಾಗಿಯೇ ಅಲ್ಲಮನಂಥವನು ಕನ್ನಡದಲ್ಲಿ ಬರೆಯಲು ಸಾಧ್ಯವಾಯಿತು ಎಂಬಂತೆ ತಿಳಿಯಲು ಸಾಧ್ಯವೇ ಇಲ್ಲ. (ಸುಬ್ಬಣ್ಣನವರೂ ಇದನ್ನು ಸೋದಾಹರಣವಾಗಿ ಚರ್ಚಿಸುವುದಿಲ್ಲ.) ಹಾಗೆ ನೋಡಿದರೆ 'ಬಸವಣ್ಣನಿಗಿಂತ ಹೆಚ್ಚಿನ ಅಚ್ಚ ಕನ್ನಡ ಶಬ್ದಗಳನ್ನು ಬಳಸಿದವನು ಅಲ್ಲಮ'. (ವಚನವಾಣಿ - ೨ ಪ್ರಸ್ತಾವನೆಯಲ್ಲಿ, ಓ.ಎಲ್.ಎನ್.)

ಸುಬ್ಬಣ್ಣನವರು ಮಂಡಿಸುವ ಇನ್ನೊಂದು ಪ್ರಮೇಯವೆಂದರೆ, 'ಕವಿರಾಜಮಾರ್ಗವು 'ಪೀಠಿಕಾ ಭಾಗದಲ್ಲಿ ಭಾಷೆ- ಜನ- ರಾಜ್ಯಗಳೆಂಬ ಶಕ್ತಿ ತ್ರಿಕೂಟದ ಕನ್ನಡತತ್ತ್ವವನ್ನು ನಿರೂಪಿಸುತ್ತದೆ' (ಪು. ೫೪)' ಎಂಬುದು. 'ಒಂದು ವಿಶಿಷ್ಟ ಕಾಲ ಸಂದರ್ಭದಲ್ಲಿ ಕೌಟಿಲ್ಯನು ರಚಿಸಿದ ಮಂತ್ರಿ-ಪ್ರಭು-ವಿರಕ್ತಿಯೆಂಬ ರಾಜ್ಯಸೂತ್ರಕ್ಕೆ ಪ್ರತಿಯಾಗಿ ಇನ್ನೊಂದೇ ವಿಶಿಷ್ಟ ಕಾಲ ಸಂದರ್ಭದಲ್ಲಿ ಕವಿರಾಜಮಾರ್ಗವು ಭಾಷಾಶಕ್ತಿ-ಜನಶಕ್ತಿ-ರಾಜಶಕ್ತಿ ಎಂಬ ಬೇರೆಯೇ ಹೊಸ ಸೂತ್ರವನ್ನು ಮಂಡಿಸುತ್ತಿದೆಯೋ ಅಂತ ಸೋಜಿಗವಾಗುತ್ತದೆ' (ಪು. ೫೦) ಎಂದು ಸುಬ್ಬಣ್ಣ ಆಶ್ಚರ್ಯಪಡುತ್ತಾರೆ. ಇಲ್ಲಿ ಇವರಿಗೆ ಇದು ತ್ರಿಕೂಟ ಶಕ್ತಿ ಸೂತ್ರದ ಮಂಡನೆಯಿರಬಹುದೇ ಎಂಬ ಚಕಿತ ತಿಳುವಳಿಕೆಯಾಗಿದೆ.

ನಾಡವರ್ಗಳ್, ನಾಡದಾ ಕನ್ನಡದೊಳ್ ಮುಂತಾದ ಪ್ರಯೋಗಗಳಲ್ಲಿ ಕನ್ನಡ ಜನ, ಕನ್ನಡ ನಾಡು

ಹೀಗೆ ಭಾಷೆಯನ್ನು ಆಧರಿಸಿಯೇ ಜನರನ್ನು ಪ್ರದೇಶದ ಗುರುತಿಸುವ ಪ್ರಯತ್ನವಿದೆ. ಹೀಗೆಂದ ಮಾತ್ರಕ್ಕೆ ಇವುಗಳನ್ನು ತ್ರಿಕೂಟ ಶಕ್ತಿಗಳನ್ನಾಗಿ, ತಾತ್ವಿಕವಾಗಿ ಕಟ್ಟುವ ಉದ್ದೇಶ ಕವಿರಾಜಮಾರ್ಗದಲ್ಲಿ ಖಂಡಿತಾ ಇಲ್ಲ. ಇದನ್ನು ಸುಬ್ಬಣ್ಣನವರೂ (ತಮ್ಮ ಮೇಲಿನ ಹೇಳಿಕೆಗೆ ವೈರುಧ್ಯವೆಂಬಂತೆ ಹೇಳುತ್ತಾರೆ. ''ಭಾಷಾ-ಜನ-ರಾಜತ್ರಯೀ ಎಂಬ ಸೂತ್ರವು ಕವಿರಾಜ ಮಾರ್ಗದಲ್ಲಿ ಎಲ್ಲೂ ಪ್ರಕಟವಾಗಿ ಬಂದಿಲ್ಲ. ಅಲ್ಲದೆ ಕೌಟಿಲ್ಯನಂಥ ಮಹಾಶಾಸ್ತ್ರಕಾರನಿಗೆ ಪ್ರತಿಯಾಗಿ ಹೊಸ ರಾಜ್ಯಸೂತ್ರವನ್ನು ಇಲ್ಲಿ ಮಂಡಿಸುತ್ತಿದ್ದೇವೆ ಎಂಬ ಅರಿವು ಗ್ರಂಥಕಾರ(ಣ)ರಾದ ಕವಿ-ರಾಜರಿಗೇ ಸ್ವತಃ ಸ್ಪಷ್ಟವಾಗಿತ್ತೋ ಇಲ್ಲವೋ ಆ ಬಗ್ಗೆ ನಾವು ತಲೆ ಕೆಡಿಸಿಕೊಳ್ಳಬೇಕಾಗಿಲ್ಲ... ಪ್ರಾಯಃ ಸಹಸ್ರಾರು ವರ್ಷಗಳ ಕನ್ನಡ ಇತಿಹಾಸದ ಒತ್ತಡದಲ್ಲಿ ಆ ಕಾಲಕ್ಕೆ ತಾನೇ ಹರಳುಗಟ್ಟಿಕೊಂಡ ಕನ್ನಡ ರಾಜ್ಯಸೂತ್ರ ಇದು.'' (ಪು. ೫೦)

ಸಹಸ್ರಾರು ವರ್ಷಗಳ ಕನ್ನಡ ಚರಿತ್ರೆಯಲ್ಲಿ ರೂಪ ಪಡೆದಿರುವ ಕನ್ನಡ ಜನಪದೀಯವನ್ನು ಶ್ರೀವಿಜಯ 'ಕಾವೇರಿಯಿಂದಮಾ ಗೋದಾವರಿವರೆಮ್ ಇರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ ವಸುಧಾ ವಲಯ ವಿಲೀನ ವಿಶದ ವಿಷಯ ವಿಶೇಷಂ' (೧-೩೬) ಪದ್ಯದಲ್ಲಿ ಗುರುತಿಸಿದ್ದಾನೆ. ಹೀಗೆ ಗುರುತಿಸುವ ಈ ಪದ್ಯದಿಂದಲೇ ಕವಿರಾಜಮಾರ್ಗದ ಕಾಲಕ್ಕೆ ಒಂದು ತ್ರಿಕೂಟ ರಾಜ್ಯ ಸೂತ್ರ ಹರಳುಗಟ್ಟಿಕೊಂಡಿತು ಎಂದು ಭಾವಿಸಲಾಗುವುದಿಲ್ಲ. ಕನ್ನಡ ರಾಜ್ಯವೆಂಬುದು ಪ್ರಾದೇಶಿಕವಾಗಿ ಹರಳುಗಟ್ಟಿಕೊಂಡ ಕಾಲವನ್ನು ಕೂಡ ಹಾಗೆ ನಿರ್ದಿಷ್ಟವಾಗಿ ಗುರುತಿಸಲಾಗುವುದಿಲ್ಲ. ಅದು ಅಮೂರ್ತವಾದದ್ದು. (ಇದು ಸುಬ್ಬಣ್ಣನವರಿಗೂ ತಿಳಿದದ್ದೇ. ಹಾಗಾಗಿಯೇ ಸಾವಿರ ವರ್ಷಗಳ ಕನ್ನಡ ಚರಿತ್ರೆಯ ಹಿನ್ನೆಲೆಯಲ್ಲಿ ಪಥ್ಯವನ್ನಿಟ್ಟಿದ್ದಾರೆ) ಕನ್ನಡ ಪ್ರದೇಶವೆಂಬುದು ಅಂದಿನಿಂದಲೂ, ಅದಕ್ಕೂ ಮುಂಚಿನಿಂದಲೂ, ಸದಾ ಅನಿರ್ದಿಷ್ಟ - ಅನಿಶ್ಚಿತ - ಪರಿವರ್ತನಶೀಲವಾಗಿ ಇರುತ್ತ- ಆಗುತ್ತ ಬಂದಿದೆ. ಈ ಪ್ರಕ್ರಿಯೆ ಇಂದೂ ನಿಂತಿಲ್ಲ. ಹಾಗೆ ನೋಡಿದರೆ ಅನಿಶ್ಚಿತ ರಾಜಕೀಯ ಗಡಿರೇಖೆಗಳು ಯಾವತ್ತೂ ಇತಿಹಾಸದಲ್ಲಿ ಒಂದು ಸಮಗ್ರ ಭಾಷಿಕ ರಾಜ್ಯಸೂತ್ರಕ್ಕೆ ಎಡೆಯನ್ನೇ ನೀಡಿಲ್ಲ.

'ಕನ್ನಡ ರಾಜ್ಯಸೂತ್ರವು ಹೇಗೋ ಹಾಗೇ ಸಹನ ಸೂತ್ರ ಅಥವಾ ಕಸವರ ಸೂತ್ರವು ಇಲ್ಲಿನ ನೆಲದ ಸಹಸ್ರ ವರ್ಷಗಳ ಅನುಭವದ ಒತ್ತಡದಲ್ಲಿ ಉದ್ಭವಗೊಂಡದ್ದು ಎಂಬುದನ್ನು ಗಮನಿಸಬೇಕು' (ಪು. ೫೪)' ಎಂಬುದು 'ಕಸವರನಮೆಂಬುದು ನೆರೆ ಸೈರಿಸಲಾರ್ಪೊಡೆ ಪರಧರ್ಮಮುಂ ಪರವಿಚಾರಮುಮಂ' (೩-೧೭೭) ಪದ್ಯವನ್ನಾಧರಿಸಿದ ಮಾತು. ಸುಬ್ಬಣ್ಣನವರ ಈ ಮಾತು ಯಾವತ್ತೂ- ಸದಾ ಕಾಲಕ್ಕೂ ಮಾನ್ಯ. ಅಲ್ಲದೆ ಪರಧರ್ಮ ಮತ್ತು ಪರ ವಿಚಾರಗಳನ್ನು ಸೈರಿಸಿ-ಸಹಬಾಳ್ವೆ ನಡೆಸಿಕೊಂಡು ಹೋಗುವ ಧೋರಣೆ (ಅಪವಾದಗಳಿದ್ದಾಗ್ಯೂ) ಭಾರತೀಯ ಸಂಸ್ಕೃತಿಯ ಯಾವತ್ಕಾಲದ ಧೋರಣೆಯೇ ಆಗಿದೆ.

ತ್ರಿಕೂಟ ಸೂತ್ರದ ಜೊತೆಗೇ ಇವರು ಇನ್ನೊಂದು ಸೂತ್ರವನ್ನು ಪ್ರಸ್ತಾಪಿಸುತ್ತಾರೆ. ನೃಪತುಂಗ ಶಾಂತಿಪ್ರಿಯನೂ ಜನಾನುರಾಗಿಯೂ ಆಗಿದ್ದ. ಈತ ಚಾಲುಕ್ಯ ವಿಷ್ಣುವರ್ಧನ, ಗಂಗಭೂತುಗ, ಪಲ್ಲವ ನರಸಿಂಹ ಇವರೊಂದಿಗೆ ರಾಷ್ಟ್ರಕೂಟರ ಬೀಗತನ ಏರ್ಪಡಿಸಿದ. ಹಾಗೇ ಈತ ಯುದ್ಧ ವಿರೋಧಿಯೂ ಬಾಂಧವ್ಯಾಕಾಂಕ್ಷಿಯೂ ಆಗಿದ್ದ. ಸೋಲಾಪುರದ ಲಕ್ಷ್ಮಿಗೆ ಬೆರಳು ಕತ್ತರಿಸಿಕೊಟ್ಟ ಈತ ಜನಹಿತಾಕಾಂಕ್ಷಿ. ಇಂಥ ವ್ಯಕ್ತಿತ್ವದ ನೃಪತುಂಗ ಹೊಸ ರಾಜಕೀಯ ಸೂತ್ರವೊಂದನ್ನು ಕಂಡುಕೊಂಡ. 'ಆತನು ಕನ್ನಡ ರಾಜ್ಯವನ್ನು ಕಟ್ಟಿದ. ಅಷ್ಟೇ ಅಲ್ಲ ಈ ಮೂಲಕ ಭಾರತೀಯ ರಾಜಕಾರಣದಲ್ಲಿ ಅದುವರೆಗೆ ಸಾಮಾನ್ಯ ಸೂತ್ರವಾಗಿದ್ದ 'ಪರಾಕ್ರಮದ ಸಾರ್ವಭೌಮತ್ವ'ವೆಂಬುದಕ್ಕೆ ಪ್ರತಿಯಾಗಿ 'ಭಾಷಾಜನಪದದ ಸಾರ್ವಭೌಮತ್ವ' ಎಂಬ ಹೊಸ ಸೂತ್ರವೊಂದನ್ನು ಆವಿಷ್ಕಾರಗೊಳಿಸಿದ'' (ಪು. ೩೬) ಹೀಗೆ ನೃಪತುಂಗನೇ ಅನ್ಯಾಕ್ರಮಣದ ಮೂಲಕ ರಾಜ್ಯ ನಿರ್ಮಾಣ ಮಾಡುವುದಕ್ಕೆ ಪ್ರತಿಯಾಗಿ ಭಾಷಾಧಾರಿತ ರಾಜ್ಯ ನಿರ್ಮಾಣ ಮಾಡಿದ ಎನ್ನುತ್ತಾರೆ.

ಪರಾಕ್ರಮದ ಸಾರ್ವಭೌಮತ್ವಕ್ಕೆ ಪ್ರತಿಯಾಗಿ ಭಾಷಾ ಜನಪದದ ಸಾರ್ವಭೌಮತ್ವವನ್ನು ಆತ ಆವಿಷ್ಕರಿಸಿದ ಎಂಬುದನ್ನು ಐತಿಹಾಸಿಕವಾಗಿ ನಂಬಬಹುದೇ? ಕವಿರಾಜಮಾರ್ಗದಂಥ ಕೃತಿ ರಚನೆಗೆ ಅಭಿಮತ ನೀಡುವುದೇ ಇಂಥ ಆವಿಷ್ಕಾರವೋ? ಇದಕ್ಕೂ ಇವನ ವೈವಾಹಿಕ ಬಾಂಧವ್ಯಗಳಿಗೂ ಏನು ಸಂಬಂಧ? ಅನ್ಯಾಕ್ರಮಣ ನೀತಿಗೆ ಪ್ರಾಶಸ್ತ್ಯ ಕೊಡದೆ ಬಾಂಧವ್ಯ ನೀತಿ ಅನುಸರಿಸಿದ್ದನ್ನೇ ಭಾಷಾ ಜನಪದಪ್ರಭುತ್ವ ನಿರ್ಮಾಣ ಎನ್ನಲಾದೀತೇ? (ಇವನ 'ವಿವಾಹಬಂಧು' ಪಲ್ಲವ ನರಸಿಂಹ ಕನ್ನಡಿಗನಲ್ಲ ಎಂಬುದೂ ಇಲ್ಲಿ ಉಲ್ಲೇಖಾರ್ಹ.)

ಸಾಹಿತ್ಯ ಪಠ್ಯವನ್ನು ಇತಿಹಾಸದ ಹಿನ್ನೆಲೆಯಲ್ಲಿ ನೋಡನೋಡುತ್ತಲೇ ಸುಬ್ಬಣ್ಣ ಸಾಹಿತ್ಯ ಪಠ್ಯದ ಮೂಲಕ ಇತಿಹಾಸವನ್ನು ವ್ಯಾಖ್ಯಾನಿಸುವ ಕೆಲಸಕ್ಕೆ ಜಿಗಿಯುತ್ತಾರೆ. ಇಲ್ಲಿ ಸುಬ್ಬಣ್ಣನವರ ಉದ್ದೇಶ ನೃಪತುಂಗನ ಆಳ್ವಿಕೆಯ ಸ್ವರೂಪವನ್ನು, ಅವನ ಗುಣಸ್ವಭಾವಗಳನ್ನು ಹೇಳುವುದಲ್ಲವಾದರೂ ಅವರ ಮಾತುಗಳಲ್ಲಿ (ಪ್ರಭುತ್ವವಾಹಿನಿಯಲ್ಲಿ) ಇದೇ ಘಟಿಸಿದೆ. ಸಾಹಿತ್ಯವು ವಾಸ್ತವ ಇತಿಹಾಸದ ಆಧಾರ ಪಠ್ಯ ಎಂಬ ಪರಿಗಣನೆಯಿಂದ ಹಾಗೂ ವರ್ತಮಾನವನ್ನು ಚರಿತ್ರೆಯಲ್ಲಿ ಹುಡುಕುವ ಪರಿಶ್ರಮದಿಂದ ಹುಟ್ಟುವ 'ವಿದ್ವತ್ ವ್ಯಾಯಾಮ'ವಿದು.

ಈ ಭಾಷಾ ರಾಜ್ಯ ನಿರ್ಮಾಣ ಪರಿಕಲ್ಪನೆಯನ್ನೇ ಅನುಸರಿಸಿ ಸುಬ್ಬಣ್ಣ ಇನ್ನೊಂದು ನಿರ್ಣಯಕ್ಕೆ ಬರುತ್ತಾರೆ. 'ನಮಗೂ ಕವಿರಾಜಮಾರ್ಗಕ್ಕೂ ನಡುವೆ ಬಲು ಕುತೂಹಲದ ಕೊಂಡಿಯೊಂದಿದೆ. ಆ ಕಾಲದಲ್ಲಿ ನೃಪತುಂಗನು ಕಟ್ಟಿದ ಕಾವೇರಿ-ಗೋದಾವರಿ ಮೇರೆಯ ಸಮಗ್ರ ಕನ್ನಡ ರಾಜ್ಯವೆಂಬುದು ಅವನ ಅನಂತರ ಮತ್ತೆ ಕಾಣದಂತೆ ಮಾಯವಾಗಿಬಿಟ್ಟಿತು ಮತ್ತು ಈ ಸಕಾಶೆಯ ಸಮಗ್ರ ಕನ್ನಡವು ಇನ್ನೊಮ್ಮೆ ಸುಮಾರಾಗಿಯಾದರೂ-ಗೋದಾವರಿಯಲ್ಲದಿದ್ದರೆ ಕೃಷ್ಣೆಯಿಂದ ಕಾವೇರಿಯ ತನಕ ಅದೇ ಆಕೃತಿಯ ಭಾಷಾ ರಾಜ್ಯವಾಗಿ ಅಸ್ತಿತ್ವ ಕಂಡದ್ದು ಹನ್ನೊಂದು ಶತಮಾನಗಳ ಅನಂತರ ೧೯೫೬ರಲ್ಲಿ ನಮ್ಮ ಕಾಲದಲ್ಲಿಯೇ (ಕಾಕತಾಳೀಯ)' (ಪು. ೩೭-೩೮) ಎಂದು ಹೇಳುತ್ತಾರೆ.

ನೃಪತುಂಗನು ಆಗ ಭಾಷಾಧಾರಿತವಾದ ಸಮಗ್ರ ಕನ್ನಡ ರಾಜ್ಯವನ್ನು ಕಟ್ಟಿದ ಎಂಬುದೇ ಒಂದು ಅಚಾರಿತ್ರಿಕವಾದ ಕಲ್ಪನೆ. ಶ್ರೀವಿಜಯನು ಹೇಳುವ ಕನ್ನಡ ಭಾಷಿಕರ ಪ್ರದೇಶವೇ ಸಮಗ್ರವಲ್ಲ, ಹಾಗೆ ಸಮಗ್ರ ಭಾಷಾ ರಾಜ್ಯವೆನ್ನುವುದು ಆವತ್ತೂ ಇರಲಿಲ್ಲ, ಇವತ್ತೂ ಕೂಡ ಇಲ್ಲ. ಆದರೆ ಭೌತಿಕವಾಗಿಯೂ, ಭಾವುಕವಾಗಿಯೂ ಎರಡು ಸಾವಿರ ವರ್ಷಗಳ ಹಿಂದಿನಿಂದಲೂ ಕನ್ನಡ ಪ್ರದೇಶವು ಸದಾ ಬದಲಾಗುವ ಚಲನಶೀಲ ಗಡಿಯ ನಾಡಾಗಿ ಇರುತ್ತ ಬಂದಿದೆ ಎಂಬುದು ಮಾತ್ರ ಸತ್ಯ. (ಇದನ್ನು ಇನ್ನೊಂದು ಕಡೆ ಸುಬ್ಬಣ್ಣನವರೇ ಹೇಳುತ್ತಾರೆ) ಹಾಗೆ ಸಮಗ್ರ ಕನ್ನಡ ರಾಜ್ಯವೆಂಬುದು ಆವತ್ತು ಇತ್ತು, ಆಮೇಲೆ ಅದು ಮಾಯವಾಯಿತು ಎಂಬ ಇವರ ಮಾತನ್ನು — ಅನಂತರದಲ್ಲಿ ಸಾಹಿತ್ಯ ಕೃತಿಗಳಲ್ಲಿ ಎಲ್ಲೂ ಈ ರೀತಿಯ ನಾಡಮೇರೆಗಳನ್ನು ಹೇಳುವ ಮಾತುಗಳನ್ನು ಕಾಣುವುದಿಲ್ಲ ಎಂಬ ಹಿನ್ನೆಲೆಯಲ್ಲೇ ತೆಗೆದುಕೊಳ್ಳಬೇಕು. ೧೯೫೬ರಲ್ಲಿ ಭಾಷಾವಾರು ರಾಜ್ಯಗಳ ರೂಪಣೆಗೂ ೯ನೇ ಶತಮಾನದ ಕವಿರಾಜಮಾರ್ಗದ ಕನ್ನಡ ನಾಡಿಗೂ ಹಾಗೆ ನೇರ ಸಂಪರ್ಕ ಕಲ್ಪಿಸಲು ಬರುವುದಿಲ್ಲ. ಎಂದೋ ಇದ್ದು ಮಾಯವಾಗಿ ಇದ್ದಕ್ಕಿದ್ದ ಹಾಗೆ ೧೯೫೬ರಲ್ಲಿ ಇದು ಉದ್ಭವಗೊಳ್ಳಲಿಲ್ಲ.

''ಒಂದು ರಾಜ್ಯ ಅಥವಾ ಸಾಮ್ರಾಜ್ಯದ ನಿರ್ಮಾಣಕ್ಕೆ ಮೊದಲು ಭಾಷೆಯ ನಿರ್ಮಾಣವಾಗಬೇಕು ಹಾಗೂ ಭಾಷೆಯಲ್ಲಿ ಭಾವೀರಾಜ್ಯದ ಅಸ್ತಿವಾರ ನಕ್ಷೆಯನ್ನು ಸಿದ್ಧಪಡಿಸಿಕೊಳ್ಳಬೇಕು ಎನ್ನುವಂಥ ಆಲೋಚನೆ'' ವಿಶ್ವಾತ್ಮಕವಾದದ್ದು ಮತ್ತ ಅನಾದಿ ಕಾಲದ್ದು ಎಂಬಂತೆ ಸುಬ್ಬಣ್ಣ ಹೇಳುತ್ತಾರೆ. (ಪು. ೩೭, ೩೯) ಇದಕ್ಕೆ ನೆಬ್ರಿಜಾನ ಕತೆ, ನಂದರ ಕಾಲದ ಅರ್ಥಶಾಸ್ತ್ರ ಅಶೋಕನ ಕಾಲದ ಶಾಸನಗಳು,

ಗುಪ್ತರ ಕಾಲದ ಕಾವ್ಯ ನಾಟ್ಯಾದಿ ಶಾಸ್ತ್ರಗ್ರಂಥಗಳು ಮೊದಲಾದವುಗಳನ್ನು ಉದಾಹರಿಸುತ್ತ ಇದೇ ರೀತಿ ಕವಿರಾಜಮಾರ್ಗವೂ ಸಾಮ್ರಾಜ್ಯನಿರ್ಮಾಣದ ಜೊತೆ ಜೊತೆಗೇ ಆದ ವಾಙ್ಮಯ ನಿರ್ಮಾಣ ಎನ್ನುತ್ತಾರೆ. ಪ್ರಭುತ್ವದ ಸ್ಥಿರೀಕರಣಕ್ಕೆ ಕೀರ್ತಿ-ಜನಾನುರಾಗಗಳನ್ನು ಪ್ರಭುತ್ವಕ್ಕೆ ಕಟ್ಟಿಕೊಡಲಿಕ್ಕೆ ಜ್ಞಾನವಾಙ್ಮಯವು ದುಡಿಯುತ್ತ ಬಂದಿದೆ ಎಂದು ಹೇಳಬಹುದಾದರೂ, ಹಾಗೆ ಪ್ರಭುತ್ವ ನಿರ್ಮಾಣ ಮತ್ತು ವಾಙ್ಮಯ ನಿರ್ಮಾಣಗಳನ್ನು ಸಮೀಕರಿಸಲಾಗದು. (ಫುಕೋನ ನಾಲೆಜ್ ಅಂಡ್ ಪವರ್ ಚಿಂತನೆಯ ಬೆಳಕಿನಲ್ಲಿ) ಜ್ಞಾನವಾಙ್ಮಯವು ಪ್ರಭುತ್ವಕ್ಕೆ ಸಹಕರಿಸಿದೆ ಮತ್ತು ಪ್ರಭುತ್ವವು ಜ್ಞಾನಶಾಸ್ತ್ರವನ್ನು ತನ್ನ ಏಳ್ಗೆ, ಸ್ಥಿರತೆಗಳಿಗೆ ಬಳಸಿಕೊಂಡಿದೆ ಎಂದು ಹೇಳಬಹುದೇ ಹೊರತು, ಪ್ರಭುತ್ವ ನಿರ್ಮಾಣಕ್ಕೆ ಭಾಷೆಯ ನಿರ್ಮಾಣ ಮೊದಲು ಆಗಬೇಕು ಎಂಬುದು ಅಷ್ಟು ನಿಜವಲ್ಲ.

ಅಲ್ಲದೆ ಪ್ರಭುತ್ವವನ್ನು ಎದುರು ಹಾಕಿಕೊಂಡು ನೇರವಾಗಿ – ನಿರಂಬಳವಾಗಿ ಬರೆದ ಆ ಕಾಲದ ಯಾವ ಕೃತಿಯೂ ನಮಗಿಂದು ಲಭ್ಯವಿಲ್ಲ. ಹಾಗಾಗಿಯೇ ಪ್ರಭುತ್ವವನ್ನು ಆ ಕಾಲಕ್ಕೆ ಯಾವ ಬರೆಹಗಾರನಿಂದಲೂ ಮೀರಲಾಗಲಿಲ್ಲ ಎಂಬುದೇ ಐತಿಹಾಸಿಕ ಸತ್ಯವೆಂದು ನಾವಿಂದು ತಿಳಿಯುವಂತಾಗಿದೆ.

ಸುಬ್ಬಣ್ಣನವರ ತಿಳುವಳಿಕೆಯಂತೆ ಸಾಮ್ರಾಜ್ಯ ನಿರ್ಮಾಣ ಮತ್ತು ಸಾಮ್ರಾಜ್ಯ ನೀತಿಯ ಪಲ್ಲಟಗಳಿಗೂ, ಭಾಷಾ ನಿರ್ಮಾಣಕ್ಕೂ ನೇರ ಸಂಬಂಧ ಕಲ್ಪಿಸಲಾಗುವುದಿಲ್ಲ. ಹಾಗೆ ನೋಡಿದರೆ ಬಹುತ್ವ ಸ್ಥಳೀಯತೆಯ ಭಾರತದಲ್ಲಿ ಭಾಷಾ ನಿರ್ಮಾಣ ಮತ್ತು ರಾಜ್ಯ ನಿರ್ಮಾಣವೆಂಬ ಏಕಸೂತ್ರವೇ ಒಂದು ಅಸಾಧುವಾದ ಕಲ್ಪನೆ. ಬ್ರಿಟಿಷರಿಗೆ ಭಾರತದಲ್ಲಿ ಏಕ ಚಕ್ರಾಧಿಪತ್ಯ ಸಾಧಿಸಲು ಯಾವ ಭಾಷಾ ಸೂತ್ರವಿತ್ತು ಇಂಗ್ಲಿಷ್? ಗಾಂಧಿಗೆ ಸಮಸ್ತ ಭಾರತದ ಜನಪದವನ್ನು ಸ್ವಾತಂತ್ರ್ಯ ಹೋರಾಟಕ್ಕೆ ಸಂಘಟಿಸಲು ಯಾವ ಏಕಭಾಷಾ ಸೂತ್ರ ಬೇಕಾಗಿತ್ತು? ಹಾಗಾದರೆ, ಭಾರತದ ವಿಭಜನೆಯ ರಾಜಕಾರಣದ ಹಿಂದೆ ಯಾವ ಭಾಷಾ ಸೂತ್ರ ಅಡಗಿದೆ... ಹಾಗೆ ಭಾಷಾ ನಿರ್ಮಾಣ ಮತ್ತು ಪ್ರಭುತ್ವದ ಸಂಬಂಧಗಳನ್ನೂ ಪ್ರಾಥಮಿಕ - ಅನುಷಂಗಿಕ ಎನ್ನಲಾಗುವುದಿಲ್ಲ.

''ಒಂದು ರಾಜ್ಯ ಅಥವಾ ಸಾಮ್ರಾಜ್ಯದ ನಿರ್ಮಾಣಕ್ಕೆ ಮೊದಲು ಭಾಷೆಯ ನಿರ್ಮಾಣವಾಗಬೇಕು.'' (ಪು ೩೭) ಎಂಬ ಮಾತು ಇಂಗ್ಲಿಷಿನ ಮಟ್ಟಿಗಂತೂ ನಮಗೆ ತದ್ವಿರುದ್ಧವಾಗಿದೆ. ಮೊದಲು ಪ್ರಭುತ್ವ ಆಮೇಲೆ ಭಾಷೆ ಎಂಬಂತೆ ಇಂಗ್ಲಿಷ್ ಭಾಷೆ ಬ್ರಿಟಿಷ್ ಪ್ರಭುತ್ವದಿಂದಾಗಿ ನಮಗೆ ಬಂದದ್ದು. ಇಂಗ್ಲಿಷಿನಿಂದಾಗಿ ಬ್ರಿಟಿಷ್ ಪ್ರಭುತ್ವ ಬಂದದ್ದಲ್ಲ. ಆದರೆ ಇದನ್ನೇ ಕವಿರಾಜಮಾರ್ಗ ಕಾಲಕ್ಕೆ ಅನ್ವಯಿಸಿ ನೃಪತುಂಗನ ಆಳಿಕೆಯಿಂದ ಅಥವಾ ನೃಪತುಂಗನಿಂದ ಕನ್ನಡ ನಿರ್ಮಾಣವಾಯಿತು ಎಂದು ಹೇಳಲು ಬರುವುದಿಲ್ಲ ಹಾಗೆ ಒಂದರಿಂದ ಇನ್ನೊಂದಕ್ಕೆ ಸಮಾನತೆ ಕಲ್ಪಿಸಲಾಗದು. ಚರಿತ್ರೆಯ ಭಿನ್ನ ಕಾಲಘಟ್ಟಗಳಲ್ಲಿ ಹಾಗೆ ಒಂದಕ್ಕೊಂದು ಸಮೀಕರಿಸಲಾಗದು. ಹಾಗೇ ಇವನು ತನ್ನ ಕೀರ್ತಿಗೆ ಕನ್ನಡ ಕವಿತ್ವವನ್ನು ದುಡಿಸಿಕೊಂಡಿದ್ದಾನೆ ಮತ್ತು ತಾನು ಸ್ವತಃ ಕನ್ನಡ, ಸಂಸ್ಕೃತ ಪಂಡಿತನಾಗಿದ್ದು ಸಂಸ್ಕೃತದಲ್ಲಿ ಕೃತಿ ರಚನೆ (ಟೀಕು) ಮಾಡಿದ್ದಾನೆ —ಎಂಬುದನ್ನು ಮರೆಯಲಾಗದು. ಇತಿಹಾಸದ ಇನ್ನೊಂದು ದೊಡ್ಡ ಸತ್ಯವೆಂದರೆ, ಭಿನ್ನ ಭಾಷಿಕ ಪ್ರದೇಶದ ಭೂಭಾಗಗಳೂ ಇವನ ಆಳ್ವಿಕೆಯಲ್ಲಿ ಇದ್ದವು ಎಂಬುದು. ಅಲ್ಲದೆ ಇವನು 'ಅರಬ್ಬೀ ವರ್ತಕರು ಯಾವ ತೊಂದರೆಯೂ ಇಲ್ಲದಂತೆ ವ್ಯಾಪಾರವನ್ನು ನಡೆಸಲು ಮತ್ತು ಇಲ್ಲಿ ನೆಲೆಸಲು ಅನುಮತಿ ಕೊಟ್ಟಿದ್ದ ಕೂಡ' (ಕನ್ನಡ ಸಮಗ್ರ ಚರಿತ್ರೆ. ಪು. ೯೫. ಎಚ್.ವಿ. ಶ್ರೀನಿವಾಸಮೂರ್ತಿ, ಓರಿಯಂಟ್ ಲಾಂಗ್‌ಮನ್) ಇತರ ಅನೇಕ ಜನರಂತೆ ನೃಪತುಂಗನೂ ಕನ್ನಡಕ್ಕೆ ಅಳಿಲು ಸೇವೆ ಸಲ್ಲಿಸಿದ್ದಾನೆ ಎಂಬ ಮಾತನ್ನು ಯಾರೂ ಅಲ್ಲಗಳೆಯಲಾಗದು. ಶ್ರೀವಿಜಯನಾದರೋ ರಾಜನೊಂದಿಗೆ ಸೇರಿ ಕನ್ನಡ ರಾಜ್ಯವನ್ನೇನೂ ಸೃಷ್ಟಿಸಲಿಲ್ಲ. ಅದಾಗ ಇದ್ದ ಕನ್ನಡ ಜನಪದ-ಪ್ರದೇಶವನ್ನು ತನ್ನ ಕೃತಿಯಲ್ಲಿ ಗುರುತಿಸಿದ ಅಷ್ಟೇ.

ಯಾವುದೇ ಒಂದು ಭಾಷಿಕ ಸಮುದಾಯದವನು ಪ್ರಭುವಾಗಬೇಕಾದರೆ ಅದಕ್ಕೆ ಭಾಷೆಯ ನಿರ್ಮಾಣವೇ ಆದಿ ಹಾಗೂ ಪ್ರಭುತ್ವ ಅದರ ಆನುಷಂಗಿಕ ನಿರ್ಮಿತಿ ಎಂದು ತರ್ಕಿಸುವುದು ಸ್ವಲ್ಪ ಬಾದರಾಯಣ ಚಿಂತೆಯೇ ಆದೀತು. ಭಾಷೆ ಮತ್ತು ಪ್ರಭುತ್ವಗಳ ಸಂಬಂಧ ಪರಸ್ಪರ ಯಾವುದೋ ಒಂದಕ್ಕೆ ಸೇರುವಿಕೆಯ (Belongingness) ಸಂಬಂಧವೇ ವಿನಾ ಶಕ್ತಿ ಚಾಲನೆಯ ಸಂಬಂಧವಲ್ಲ (Power driving) ಯಾರೇ ಆದರೂ ಒಂದು ದೇಶ, ಜಾತಿ, ಧರ್ಮಕ್ಕೆ ಸೇರಿದವರಾಗಿರುತ್ತಾರೆ ಎಂಬಂತೆಯೇ ನೃಪತುಂಗನು ಕನ್ನಡ ಭಾಷೆಗೆ ಸೇರಿದವನಾಗಿದ್ದ(ಕನ್ನಡ- ಸಂಸ್ಕೃತ ಪಂಡಿತ) ಎಂದು ಹೇಳಬಹುದಲ್ಲದೆ ಭಾಷಾ ನಿರ್ಮಾಣದಿಂದಾಗಿ ಪ್ರಭುತ್ವ ನಿರ್ಮಾಣ ಎನ್ನಲಾಗುವುದಿಲ್ಲ.

ಆದರೆ ಒಂದು ಮಾತ್ರ ನಿಜ. ಪ್ರಭುತ್ವಕ್ಕೆ ಭಾಷೆಯಾಗಲೀ, ಧರ್ಮ, ಜಾತಿ, ದೇವರು, ಭಕ್ತಿ ಹೀಗೆ ಏನೇ ಆಗಲಿ ಎಲ್ಲವೂ ಅದಕ್ಕೆ ಪರಿಕರಗಳಷ್ಟೇ. ಪ್ರಭುತ್ವವು ಇತರ ಪರಿಕರಗಳನ್ನು ಬಳಸುವ ಹಾಗೆ ಭಾಷೆಯನ್ನೂ ತನ್ನ ಶಕ್ತಿ, ಸ್ಥಿರತೆಗೆ ಬಳಸಿಕೊಳ್ಳುತ್ತದೆ. ಅಮೋಘವರ್ಷನ ಆಸ್ಥಾನದಲ್ಲಿ ಆದಿಪುರಾಣದ ಕರ್ತೃ ಜಿನಸೇನ, ಗಣಿತಸಾರ ಸಂಗ್ರಹದ ಕರ್ತೃ ಮಹಾವೀರಾಚಾರ್ಯ, ಅಮೋಘ ವೃತ್ತಿಯನ್ನು ಬರೆದ ಶಾಕಟಾಯನ, ಜ್ಯೋತಿಷಿ-ವಾಗ್ಮಿ ಗೋತಿಯ ಭಟ್ಟ, ಉಗ್ರಾದಿತ್ಯ, ಪ್ರಭಾಚಂದ್ರ ಇವರೆಲ್ಲರ ಜೊತೆ ಶ್ರೀವಿಜಯನೂ ಇದ್ದ ಎಂಬುದು ಇಲ್ಲಿ ಗಮನಾರ್ಹ. ಇಷ್ಟಕ್ಕೂ ರಾಜ್ಯವನ್ನು ನೃಪತುಂಗ ಕಟ್ಟಿದವನೇ ಅಲ್ಲ. ಅವನಿಗೆ ದೊರೆತನ ಬಂದದ್ದೇ ಪಿತ್ರಾರ್ಜಿತವಾಗಿ. ಅದೂ ಆತನ ೧೪ನೇ ವಯಸ್ಸಿನ ಬಾಲ್ಯದಲ್ಲಿ. ಆ ಕಾಲದ ಅವಿದ್ಯಾವಂತರಿಗೆ ಕಾವ್ಯ ಬರೆಯುವ ರೀತಿ-ನೀತಿಯನ್ನು ನಿರ್ಮಿಸಿಕೊಡುವ ಒಂದು ಪಠ್ಯವನ್ನು ಭಾಷಾ ಮೀಮಾಂಸೆಯ ಮೂಲಕ ಮಾನಕ ಭಾಷೆಯೊಂದರ ನಿರ್ಮಾಣಕ್ಕೆ ಸಹಕರಿಸುತ್ತಿರುವ ಪಠ್ಯವೊಂದನ್ನು ಅತಿ ವ್ಯಾಪ್ತವಾಗಿ ಅನ್ವಯೀಕರಿಸಿದರೆ ಹೀಗೆಲ್ಲ ಆಗುತ್ತದೆ. ಇತಿಹಾಸವನ್ನು ಏಕಔಚಿತತೆಗೆ ಕಟ್ಟಿಕೊಳ್ಳಲು ಹೋದಾಗ ಕೂಡ ಹೀಗೇ ಆಗುವುದು.

"ಆ ಕಾಲದ ಗಾಂಧಿ ಮಾರ್ಗದರ್ಶನದ ಹೋರಾಟದಲ್ಲಿ ಮುಂದೆ ಈ ರಾಷ್ಟ್ರವು ಭಾಷಾವಾರು ರಾಜ್ಯಗಳಾಗಿ ವಿಭಜನೆಗೊಳ್ಳಬೇಕೆಂಬ ಜನಾಶಯವು ಕೂಡ ದೃಢಗೊಂಡಿತ್ತು" (ಪು. ೯೪) ಎಂದೂ 'ಇವತ್ತಿನ ನಮ್ಮ ಭಾಷಾವಾರು ರಾಜ್ಯ - ರಾಷ್ಟ್ರ ರಾಜಕಾರಣದ ಬೀಜವು ಕವಿರಾಜ ಮಾರ್ಗ ಕಾಲದ ವಿಶಿಷ್ಟ ಸಂದರ್ಭದಲ್ಲಿ ಕನ್ನಡದಲ್ಲಿ ಅಂಕುರಿಸಿದ್ದು ಎನ್ನಬಹುದು" (ಪು. ೯೫) ಎಂದೂ ಇವರು ಹೇಳುತ್ತಾರೆ. ಆಮೇಲೆ ೨೦ನೇ ಶತಮಾನದಲ್ಲಿ ಭಾಷಾವಾರು ರಾಜ್ಯ ವಿಂಗಡಣೆಯಾದ ಮೇಲೆ ಅನ್ಯಾಕ್ರಮಣ (ಪರಾಕ್ರಮ) ರಾಜಕಾರಣವು ನಿರಾಕೃತವಾಗಿ ಆಧುನಿಕ ಜನತಂತ್ರ ರಾಜಕಾರಣವು ಸ್ಥಾಪಿತಗೊಂಡಿತು ಎಂತಲೂ ಹೇಳುತ್ತಾರೆ. ಈ ಮೂರೂ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಶಿಥಿಲ ಪ್ರಮೇಯಗಳೇ ಹಾಗೆ ಪರಸ್ಪರ ರಾಜ್ಯ ರಾಜ್ಯಗಳ ಅನ್ಯಾಕ್ರಮಣವಾಗಲು ಇಲ್ಲೇನು ಪ್ರತಿ ರಾಜ್ಯವೂ ಪ್ರತ್ಯೇಕ ಸೈನ್ಯ - ರಾಜರಿದ್ದ (ಪ್ರಿನ್ಸ್‌ಲಿಸ್ಟೇಟ್) ಭೂವಲಯಗಳಾಗಿದ್ದವಾ? ಅಷ್ಟಕ್ಕೂ ಭಾಷೆ, ನೆಲ, ಕುಲ, ಜಲಗಳ ನೆಪದಲ್ಲಿ ಹೊಸ ಅವತಾರವೆತ್ತಿದ ಅನ್ಯಾಕ್ರಮಣಗಳನ್ನು ಏನೆನ್ನೋಣ? ಆಮೇಲೂ ಚೈನಾ-ಭಾರತ-ಪಾಕುಗಳ ನಡುವಣ ಅನ್ಯಾಕ್ರಮಣಗಳಿಗೆ ಯಾವ ಭಾಷಾ ಸೂತ್ರದ ಗೈರುಹಾಜರಿಯನ್ನು ಅನ್ವಯಿಸಬೇಕು? ಇಂದು ಅಮೆರಿಕ ನಡೆಸುತ್ತಿರುವ ವೈಶ್ವಿಕ ಅನ್ಯಾಕ್ರಮಣಗಳನ್ನು-ಜಾಗತೀಕರಣವೆಂಬ ಅಮೆರಿಕೀಕರಣವೂ ಸೇರಿದಂತೆ ಇತರ ಅನ್ಯಾಕ್ರಮಣಗಳನ್ನು ಯಾವ ರೀತಿ ಸೂತ್ರೀಕರಿಸುವುದು? ಭಾಷೆ ಹಾಗೂ ಪರಾಕ್ರಮ(ಅನ್ಯಾಕ್ರಮಣ)ಗಳ ನಡುವೆ ಹಾಗೆ ಪಲ್ಲಟ ಸಂಬಂಧ ಕಲ್ಪಿಸಲಾಗುವುದಿಲ್ಲ.

ಪರಾಕ್ರಮ ಪ್ರಭುತ್ವ ಮತ್ತು ಭಾಷಾ ಪ್ರಭುತ್ವಗಳಿಗೆ ಸಂಬಂಧ ಕಲ್ಪಿಸುವ ಸುಬ್ಬಣ್ಣನವರೇ ಇಂದಿನ ಭಾಷಾರಾಜಕಾರಣದ ಬಹುತ್ವ-ಅಪಾಯಗಳ ಬಗ್ಗೆ ಬಹು ಸ್ಪಷ್ಟವಾಗಿ ತಿಳಿಸಿಹೇಳುತ್ತಾರೆ. (ಪು.

೯೬-೯೭). ಕವಿರಾಜ ಮಾರ್ಗ ಕಾಲಕ್ಕಿಂತ ಈ ಕಾಲ ಹೇಗೆ ಭಿನ್ನ ಎಂದು ಬಹಳ ಖಚಿತವಾಗಿ ಹೇಳುತ್ತಾರೆ. ಯಾವುದೇ 'ಇತಿಹಾಸವು ವರ್ತಮಾನದ ಚಿತ್ತ ನಿರ್ಮಿತಿ' ಎಂದೂ ಹೇಳುತ್ತಾರೆ. ಕನ್ನಡ ಚಳವಳಿಗಳು ಎಂಬ ಅಧ್ಯಾಯದಲ್ಲಿ ವರ್ತಮಾನದ ಬಗ್ಗೆ ಇವರು ನೀಡುವ ವಿದ್ವತ್ಪೂರ್ಣ ಹೊಳಹುಗಳು, ಕರ್ನಾಟಕ ಸಂಸ್ಕೃತಿ ಚರಿತ್ರೆಯ ಅಧ್ಯಾಯಗಳಲ್ಲಿನ ವಿವರಗಳು, ಕನ್ನಡವನ್ನು ಉಳಿಸುವ ಮಾತು ಅಧ್ಯಾಯದ ವಿವರಗಳು ತುಂಬ ಪ್ರಬುದ್ಧತೆ ಮತ್ತು ಸಮತೋಲನದಿಂದ ಕೂಡಿವೆ. ಕೊನೆಯಲ್ಲಿ ಕೆರೆಗೆ ಹಾರ ಮತ್ತು ಗೋವಿನಹಾಡುಗಳನ್ನು ಕವಿರಾಜ ಮಾರ್ಗದ ವಿವೇಕದ ಜೊತೆ ಸಮನ್ವಯಿಸಲು ಯತ್ನಿಸಿದ್ದಾರೆ. ಆದಾಗ್ಯೂ ಅವು ಸ್ವತಂತ್ರ ಪಠ್ಯಚಿಂತನೆಗಳಂತೆಯೇ ಕಾಣುತ್ತವೆ.

ಸುಬ್ಬಣ್ಣನವರ ಈ ಪುಸ್ತಕ ಬರೀ ಕೃತಿಕೇಂದ್ರಿತ ವಿಮರ್ಶೆಯಲ್ಲ. ಇದೊಂದು ಸಾಂಸ್ಕೃತಿಕ ಸಂಕಥನ. ಇವರು ಇಲ್ಲಿ 'ಹಿಂದಣ ಅನಂತವನೂ ಮುಂದಣ ಅನಂತನೂ ಒಂದು ದಿನ ಒಳಕೊಂಡಿತ್ತು ನೋಡಾ' ಎಂಬ ಅಲ್ಲಮನ ಮಾತಿನ ತಾತ್ವಿಕತೆಯನ್ನೇ ತಮ್ಮ ವಿಮರ್ಶಾ ವಿಧಾನದ ತಾತ್ವಿಕತೆಯನ್ನಾಗಿ ರೂಪಿಸಿಕೊಂಡಂತೆ ಕಾಣುತ್ತದೆ. ಒಂದು ಕೃತಿಯನ್ನು ಅದು ಸೃಷ್ಟಿಯಾದ ಕಾಲದ ಹಿಂದಿನ ಸಾವಿರ ವರ್ಷಗಳ ಮತ್ತು ಮುಂದಿನ ಸಾವಿರ ವರ್ಷಗಳ ಚಾರಿತ್ರಿಕ ಹಿನ್ನೆಲೆಯಲ್ಲಿಟ್ಟು ನೋಡುವ 'ಸುಬ್ಬಣ್ಣ ವಿಧಾನ'ವೊಂದು ಇಲ್ಲಿದೆ. ಸ್ಥಳೀಯ ಪರಂಪರೆ ಮತ್ತು ವರ್ತಮಾನಗಳ ಜೊತೆಗೆ ವೈಶ್ವಿಕ ಪರಂಪರೆ ಮತ್ತು ವರ್ತಮಾನಗಳ ಹಿನ್ನೆಲೆ ಎರಡರಲ್ಲೂ ಒಂದು ಕೃತಿಯನ್ನಿಟ್ಟು ನೋಡುವ ವಿಧಾನವನ್ನೂ ಸುಬ್ಬಣ್ಣ ಇಲ್ಲಿ ಕಟ್ಟಿಕೊಟ್ಟಿದ್ದಾರೆ. ಈ ಮೂಲಕ ಕನ್ನಡ ವಿಮರ್ಶೆಯ ತಮ್ಮದೇ ಆದ ತಾತ್ವಿಕ ಆಕೃತಿಯೊಂದನ್ನು ಇಲ್ಲಿ ಸುಬ್ಬಣ್ಣ ನಿರ್ಮಿಸಿದ್ದಾರೆ.


ಯಾವ ವಿಧಾನವನ್ನು ಬಳಸಿ ಕೃತಿಯೊಂದನ್ನು ನೋಡುತ್ತಿದ್ದಾರೆ ಎಂಬುದು ಎಷ್ಟು ಮುಖ್ಯವೋ ಹಾಗೇ ಆ ಮೂಲಕ ಯಾವ ಪ್ರಮೇಯಗಳನ್ನೂ ಪ್ರತಿಪಾದಿಸುತ್ತಿದ್ದಾರೆ ಎಂಬುದು ಕೂಡ ಅಷ್ಟೇ ಮುಖ್ಯ. ಈ ದೃಷ್ಟಿಯಿಂದ ನೋಡಿದರೆ ಸುಬ್ಬಣ್ಣನವರು ಮಂಡಿಸುವ ಪ್ರಮೇಯಗಳು ಮತ್ತು ಅವರು ತಲುಪುವ ಹಲವು ತೀರ್ಮಾನಗಳು ಪ್ರಶ್ನಾರ್ಹವಾದುವು, ಚರ್ಚಾರ್ಹವಾದುವು. ಧ್ಯಾನಸ್ಥ ಚಿಂತನೆಗೆ ಪ್ರಚೋದಿಸುವಂಥವು.

ಒಟ್ಟಾರೆ ಇವರ ಕೃತಿಯಲ್ಲಿ ಎದ್ದು ಕಾಣುವುದು ಕನ್ನಡದ ಬಗೆಗಿನ ಆಳವಾದ ಬದ್ಧತೆ, ಪ್ರೀತಿ. ಈ ಬದ್ಧತೆಯಿಂದಾಗಿಯೇ ಇವರ ಚಿಂತನೆಗಳು ಹೀಗೆ 'ಸಂಕೀರ್ತನ'ವೆಂಬಂತೆ ರೂಪುಗೊಂಡಿವೆ. ಕೊನೆ ಕೊನೆಗೆ ಸುಬ್ಬಣ್ಣನವರೇ 'ಕಥಾಕಾಲಕ್ಷೇಪ', ಸಂಕೀರ್ತನ ಎಂದೆಲ್ಲ ಕರೆದುಕೊಂಡಿರುವ ಈ ಕೃತಿಯನ್ನು ರಾಜಕೀಯ ವಿರೋಧ ಪಕ್ಷದವನ ಥರಾ ಓದಿಬಿಟ್ಟೆನಾ ಎಂಬ ಗುಮಾನಿ ಕಾಡತೊಡಗಿದೆ. ಇನ್ನೊಂದು ಓದಿಗೆ ತಿಳಿಯಬಹುದು. ಇವರ ಪುಸ್ತಕದ ಬಗೆಗೆ ಟಿಪ್ಪಣಿಸಲು ತೊಡಗಿದ ನಾನು ಇದನ್ನು ಲೇಖನವೆಂಬಂತೆ ಮೇಟಾ ಸಂಕೀರ್ತನವಾಗಿ ಬೆಳೆಸಿಬಿಟ್ಟಿದ್ದೇನೆ, ಕ್ಷಮಿಸಿ.

ಇಷ್ಟಾಗಿಯೂ, ಇವರ 'ಇಷ್ಟನ್ನೂ ಬರೆದಾದ ಮೇಲೂ ಇದರ ಸ್ವರೂಪವನ್ನು ಖಚಿತವಾಗಿ ನಿರ್ವಚಿಸಿ ಹೇಳಲಾರೆ' ಎಂಬ ಮಾತನ್ನು ಒಪ್ಪುವುದಾದರೆ; 'ಇನ್ನು ಮುಂದೆ ಶಬ್ದವಿಲ್ಲ'.

೪೭, ೪ನೇ ಮೇನು, ೪ನೇ ಕ್ರಾಸು, ಬಾಲಾಜಿ ಕಲ್ಯಾಣಮಂಟಪದ ಹತ್ತಿರ,
ಬನಶಕರಿ ೩ನೇ ಹಂತ, ಬೆಂಗಳೂರು - ೫೬೦ ೦೮೫

ಕನ್ನಡದ ಆತಂಕಗಳು



(ಎರಡು ಭಾಷಣಗಳು)

ಕಿ.ರಂ. ನಾಗರಾಜ

ಕನ್ನಡದ ಬಗೆಗೆ ನಾವು ಬೀಸು ಹೇಳಿಕೆಗಳ ಮಟ್ಟದಲ್ಲಿ ಮಾತನಾಡುವುದನ್ನು ಬಿಟ್ಟುಬಿಡಬೇಕು. ಮಾತನಾಡುವುದಾದರೆ ಬಹಳ ಗಂಭೀರವಾಗಿ, ಸಮಸ್ಯೆಗಳನ್ನು ಬಹಳ ನಿರ್ದಿಷ್ಟವಾಗಿ ವಿಚಾರ ಮಾಡಬೇಕು. ಕನ್ನಡದ ಆತಂಕಗಳು ಅಥವಾ ದೇಶದ ಆತಂಕಗಳು, ಜಗತ್ತಿನ ಆತಂಕಗಳು, ಅಣುಬಾಂಬಿನ ಆತಂಕಗಳು — ಹೀಗೆ ಮಾತನಾಡುತ್ತಿದ್ದರೆ ಯಾವ ಆತಂಕಗಳನ್ನೂ ಕೂಡ ಮೈಮೇಲೆ ತಾಕಿಕೊಳ್ಳುತ್ತಾ ಇರಬಹುದು.

ಆತಂಕಗಳು ಅಂತ ಯೋಚನೆ ಮಾಡಬಹುದು. ಬಹಳ ಸಾಹಿತ್ಯ ಮಿತ್ರರಿರುವುದರಿಂದ ಈ ರೀ
ಯೋಚನೆ ಮಾಡಲಿಕ್ಕೆ ಪ್ರಯತ್ನ ಪಡ್ತೀನಿ. ಆಡಳಿತಾತ್ಮಕವಾಗಿ, ರಾಜಕೀಯವಾಗಿ, ಚಳವಳಿ ಕೇಂದ್ರಿತವಾಗಿ
ಶೈಕ್ಷಣಿಕವಾಗಿ ಅಂತ ಆವಾಹನೆ ಮಾಡಿಕೊಂಡು ಎಷ್ಟು ಹೊತ್ತು ಬೇಕಾದರೂ ಮಾತನಾಡಬಹುದ
ಅಥವಾ ಈಗಾಗಲೇ ಹೇಳಿ ಹೇಳಿ ಆಯಾಸಗೊಂಡಿರುವ ವಿಚಾರಗಳನ್ನು ಮತ್ತೆ ಮತ್ತೆ ಪ್ರಸ್ತುತ ಪಡಿ
ನಿಮಗೆಲ್ಲ ಬೇಸರ ಹುಟ್ಟಿಸಬಹುದು.

ಇವತ್ತೇನಾದರೂ ಆತಂಕ ಹುಟ್ಟಿದ್ದರೆ ಒಂದು ರೀತಿಯಾಗಿ ನಮ್ಮ ಕೀಳರಿಮೆಯಿಂದ ಹುಟ್ಟಿರು
ಆತಂಕ ಇದು. ಕಳೆದ ಶತಮಾನ ಮತ್ತು ಹತ್ತೊಂಬತ್ತು, ಇಪ್ಪತ್ತನೆಯ ಶತಮಾನಗಳಲ್ಲಿ ನಮ್ಮ ನಿಜವಾ
ಕೀಳರಿಮೆಯಿಂದ ಅಥವಾ ಅದಕ್ಕೆ ತಕ್ಕುದಾದ ಕಾರಣಗಳಿಂದ : ಅನ್ಯಾಕ್ರಮಣ, ಇಂಗ್ಲಿಷ್ ಭಾಷೆ ಅಥವ
ನಮ್ಮಲ್ಲೇ ಬೇರೆ ರೀತಿಯಲ್ಲಿ ಆವರಿಸಿರುವ ಹಿಂದಿ ಭಾಷೆ, ಈ ಕಾರಣಗಳಿಂದ ಹುಟ್ಟಿರುವ ಆತಂಕಗಳು
ಆದರೆ ಪಂಪನಿಗೆ ಈ ತರಹದ ಆತಂಕ ಇತ್ತೇ ಅಂತ ಪ್ರಶ್ನೆ ನನಗೀಗ. ಬಸವಣ್ಣನಿಗೆ, ಅಲ್ಲಮನಿಗ
ಸರ್ವಜ್ಞ, ಪುರಂದರದಾಸ, ಕನಕದಾಸರಿಗೆ ಈ ಆತಂಕ ಇಲ್ಲ. ಸಂಸ್ಕೃತದೊಂದಿಗೆ ಅವರು ನಡೆಸಿ

ಬಹಳ ದೊಡ್ಡ ಅನುಸಂಧಾನ (ಬಹಳ ಆಶ್ಚರ್ಯವನ್ನು ಉಂಟುಮಾಡುತ್ತೆ) ಕೇವಲ ಸಾಹಿತ್ಯಕ ಅನುಸಂಧಾನ ಅಲ್ಲ. ಈಗ ವಚನಗಳನ್ನು ತೆಗೆದುಕೊಂಡರೆ — 'ನಾನು ಕನ್ನಡ ನಾಡಿನ ಯಾವುದೋ ಮೂಲೆಯಲ್ಲಿ ಬರೆಯುತ್ತಿದ್ದೇನೆ. ಅದಕ್ಕಿಂತ ಒಂದು ವ್ಯಾಪಕವಾದ ಜಗತ್ತಿದೆ. ಅದು ಈ ಕನ್ನಡದ ಜಗತ್ತಿಗಿಂತ ದೊಡ್ಡದಾದ ಜಗತ್ತು' ಎನ್ನುವ ಯಾವುದೇ ರೀತಿಯಾದ ಆತಂಕವಿಲ್ಲದೆ ಬಸವಣ್ಣ; ಅಲ್ಲಮ ಮಾತನಾಡಿದರು. ಅಥವಾ ಆ ಕಾಲದಲ್ಲಿ ಭಾರತದಲ್ಲಿಯೇ ಬಹಳ ದೊಡ್ಡ ಪ್ರಭಾವವೆನಿಸಿದಂತಹ ಸಂಸ್ಕೃತ ಇದ್ದಾಗಲೂ ಕೂಡ ಸಂಸ್ಕೃತದ ಎದುರುಗಡೆ ನಾನು ಈಗ ಹೇಳಿದಂತಹ ವ್ಯಕ್ತಿಗಳು; ಬಹು ಸಮರ್ಥವಾಗಿ ಬರೆದರು. ಕೇಶಿರಾಜನಿಗೆ ಚೆನ್ನಾಗಿ ಗೊತ್ತು ಪಾಣಿನಿಯಂತಹ ಮಹೋನ್ನತ ವೈಯಾಕರಣ ಇದ್ದಾನೆ ಅಂತ. ಆದರೆ, ನಾವು ಯೋಚನೆ ಮಾಡುತ್ತಿರುವ ಹಾಗೆ ಇಂಗ್ಲಿಷಿನ ಒಂದು ಪದಕ್ಕೆ ಯಾವ ಪರ್ಯಾಯ ಪದ ಇಟ್ಟುಕೊಳ್ಳಬೇಕು? ನೀವೀಗ ಕನ್ನಡ ಪದ ಹೇಳಿದ್ರಿ, ಆದರೆ ಅದು ಇಂಗ್ಲಿಷಿನ ಪದಕ್ಕೆ ಬಹಳ ಸರಿಯಾಗಲ್ಲ ಅಂತ ನನ್ನ ಜೊತೆ ಇರತಕ್ಕಂತ ಜಾಣ ವಿದ್ವಾಂಸರೇ ತಿದ್ದೋದಕ್ಕೆ ಬರುತ್ತಾರೆ. ಏಕೆಂದರೆ, ಇಂಗ್ಲಿಷಿಗೆ ಬಹಳ ಉಚಿತವಾದ ಪದ ಇರಬೇಕು ಎನ್ನುವ ಆತಂಕವನ್ನು ಇಟ್ಟುಕೊಂಡು ಸದಾಕಾಲ ನರಳುತ್ತಾ ಇರುತ್ತಾರೆ. ಇಂಗ್ಲಿಷ್ ವಿದ್ವಾಂಸರ ಸೂಕ್ಷ್ಮತೆಗಿಂತ ಭಿನ್ನವಾದ ಸೂಕ್ಷ್ಮತೆಯನ್ನು ಕನ್ನಡದ ವಿದ್ವಾಂಸರು ಪ್ರಕಟಪಡಿಸುತ್ತಿರುತ್ತಾರೆ ಎನ್ನುವುದನ್ನು ಒಪ್ಪಲಾರರು... ಆದರೆ, ಆ ಆತಂಕ ನಮ್ಮ ಬೇಂದ್ರೆಯಂಥ ಕವಿಗಿಲ್ಲ, ಸರ್ವಜ್ಞನಿಗಿಲ್ಲ. ಅದು ಯಾಕೆ ಅಂತ ನನಗೇ ಬಹಳ ಆಶ್ಚರ್ಯವಾಗುತ್ತೆ. ಏಕೆಂದರೆ, ಬಸವಣ್ಣ ಬರೀ ಸಾಹಿತ್ಯ ಬರೆದವನಲ್ಲ; ಧರ್ಮದ ಬಗ್ಗೆ ಸಮಾಜದ ಬಗ್ಗೆ; ಮನುಷ್ಯರ ಮನಸ್ಸನ್ನು, ಅರ್ಥ ಚಿಂತನೆಯನ್ನು ಗಂಡು ಹೆಣ್ಣಿನ ಸಂಬಂಧವನ್ನು ಕುರಿತು, ಸ್ವಾತಂತ್ರ್ಯ ಕುರಿತಾದ ಯೋಚನೆಯನ್ನು ಮಾಡಿದವನು. ಅಧಿಕಾರ ಅಂದರೇನು? ಮತ್ತು ದಮನಶೀಲತೆ ಅಂದರೇನು? ಎನ್ನುವುದರ ಕುರಿತು ಯೋಚನೆ ಮಾಡಿದ. ಹೀಗೆ ಒಂದು ಸರ್ವಾಂಗೀಣವಾದ ಚಿಂತನೆ ಬಸವಣ್ಣನ ಮೂಲಕ ಸಾಧ್ಯವಾಯಿತು. ಅತ್ಯಂತ ಅಮೂರ್ತವಾದ ಜಿಜ್ಞಾಸೆಗಳನ್ನು ರೂಪಿಸುವುದಕ್ಕೆ ೧೨ನೇ ಶತಮಾನದ ಅಭಿವ್ಯಕ್ತಿಕಾರರು ಆಲೋಚನೆಯನ್ನು ಮಾಡಿದರು. ಆದರೆ, ನಮ್ಮ ಸಂದರ್ಭದಲ್ಲಿ ನಾವೇನು ಮಾಡುತ್ತಿದ್ದೇವೆ ಅಂದರೆ; ಇನ್ನೊಂದು ಭಾಷೆಯೊಂದಿಗೆ ಹೋಲಿಕೆಯನ್ನು ಹಾಕಿಕೊಳ್ಳದೆ, ನನ್ನ ಅಸ್ಮಿತೆಯನ್ನು(Identity) ಪ್ರಕಟಗೊಳಿಸಲು ಸಾಧ್ಯವಿಲ್ಲ ಅನ್ನುವ ಸ್ಥಿತಿಯಲ್ಲಿದ್ದೇವೆ. ನಾವು ಅಸ್ಮಿತೆಯ ಬಗ್ಗೆ ಮಾತನಾಡುತ್ತಿದ್ದೇವೆಯೇ ಹೊರತು, ಅಂತಹ ಅಸ್ಮಿತೆಯ ಬಗೆಗೆ ನಿಜವಾದ ಅಂತಃಚೈತನ್ಯ ನಮ್ಮಲ್ಲಿ ಇಲ್ಲವಾಗಿಬಿಟ್ಟಿದೆ. ಇದೊಂದು ನಮ್ಮ ತುಂಬ ದೊಡ್ಡ ಆತಂಕ. ಅದರಿಂದಲೇ ಇವತ್ತಿನ ಟೆಲಿವಿಷನ್ ಭಾಷೆ ಎಷ್ಟು ಪೇಲವವಾಗಿಬಿಟ್ಟಿದೆಯೆಂದರೆ, ಅದಕ್ಕೆ ಇನ್ಯಾವ ರಕ್ತದಾನವೂ ಸಾಧ್ಯವಿಲ್ಲ ಎಂಬ ರೀತಿಯಾದ ಪೇಲವ ಭಾಷೆಯನ್ನು ನಮ್ಮ ಟೆಲಿವಿಷನ್ ಮತ್ತು ವೃತ್ತಪತ್ರಿಕೆಗಳು ಪ್ರಕಟಪಡಿಸುತ್ತಿರುತ್ತವೆ. ಯಾಕೆಂದರೆ, ಅದು ನಮ್ಮ ಇಡೀ ಸಾಂಸ್ಕೃತಿಕ ಸಂದರ್ಭದಿಂದ ಪುಷ್ಟವಾದುದಲ್ಲ. ಬೇಂದ್ರೆಯವರ ನುಡಿಗಟ್ಟನ್ನು ನಾವು ನಮ್ಮ ವೃತ್ತಪತ್ರಿಕೆಯ ಭಾಷೆಯಲ್ಲಿ ಕಾಣುವುದಿಲ್ಲ. ಬಹಳ ಅಪರೂಪವಾಗಿ ಕಂಡೀತೇನೋ. ಹೀಗಾಗಿ, ಏನಾಗಿದೆ ಈವತ್ತಿನ ಶಿಕ್ಷಣದಲ್ಲಿ ನಮ್ಮ ಮಕ್ಕಳು ಓದುವ ಪಠ್ಯಪುಸ್ತಕದ ಭಾಷೆ ಏಕೆ ಪೇಲವವಾಗಿದೆಯೆಂದರೆ, ನಾವು ದಿನನಿತ್ಯ ಓದುವ ದಿನಪತ್ರಿಕೆಗಳಾಗಲಿ, ಮಾಸಿಕಗಳಾಗಲಿ ಭಾಷಿಕವಾಗಿ ಜೀವಂತಿಕೆ ಹೊಂದಿಲ್ಲ. ೧೦ ರೂ. ಕೊಟ್ಟು ಕೊಂಡ ಪತ್ರಿಕೆಯನ್ನು ೧೫ ನಿಮಿಷಗಳಲ್ಲಿ ಓದಿ ಮುಗಿಸೋಕಾಗುತ್ತೆ ನಂಗೆ?

ಹಿಂದೆ ಯಾವುದಾದರೊಂದು ಮಾಸಪತ್ರಿಕೆಯನ್ನು ಇಟ್ಟುಕೊಂಡಾಗ, ಬಹಳ ದಿನ ಇಟ್ಟುಕೊಂಡು ಓದುವ ಪರಿಪಾಠ ಇತ್ತು ನನಗೆ. ಈಗ ಹಾಗಲ್ಲ. ಬೆಳಗಿನ ಪತ್ರಿಕೆ ೧೫ ನಿಮಿಷದಲ್ಲಿ ಮುಗಿಯುತ್ತೆ.

ಅಂದರೆ ನಾವು ಕನ್ನಡ ಭಾಷೆಯ ಬೆಳವಣಿಗೆಯ ಬಗ್ಗೆ ಮಾತನಾಡುತ್ತಿಲ್ಲ. ಕನ್ನಡ ಭಾಷೆ ಹೀಗೆ ಸಾರ್ವತ್ರಿಕವಾಗಿ ಬಳಕೆ ಆಗುತ್ತಿರುವಾಗ, ಒಂದು ಸತ್ವವನ್ನು ಅಥವಾ ರಕ್ತವಂತಿಕೆಯನ್ನು ಅಥವಾ ಜೀವಂತಿಕೆಯನ್ನು ಪಡೆದುಕೊಳ್ಳದೇ ಇರುವಂತೆ ಆಗಿದೆ ಅಂದರೆ ನಾನು ಹಿಂದೆ ಹೇಳಿದ ಮಾತುಗಳೇ ಕಾರಣ ನಾವು. ನಾವು ಬಸವಣ್ಣನಿಂದ ಯಾವುದೇ ರಕ್ತದಾನವನ್ನು ನಮ್ಮ ಆಧುನಿಕ ಭಾಷೆಗೆ ತಂದು ಕೊಳ್ಳುತ್ತಾ ಇಲ್ಲ. ಇಲ್ಲಿ ಹಳೆಯದು, ಹೊಸದು ಎನ್ನುವ ಮಾತು ನನಗೆ ವಿವರಣಾತ್ಮಕ ಶಬ್ದ ಅಷ್ಟೇ. ೧೨ನೇ ಶತಮಾನ ನನಗೆ ಹೊಸ ಶತಮಾನ. ಕಾಲ ಏನಿದ್ದರೂ ಅದು ಮನೋಕಲ್ಪನೆಯೇ ಹೊರತು, ಕ್ಯಾಲೆಂಡರ್‌ನ ಮೇಲೆ ನಿಂತಿರುವುದಲ್ಲ. ಕಾಲದ ಕಲ್ಪನೆಯೇ ಒಂದು ಅಮೂರ್ತ ಕಲ್ಪನೆ. ಅಮೂರ್ತ ಕಲ್ಪನೆ ಅಂದರೆ, ಗತಕಾಲ ಅಂದ ತಕ್ಷಣ ನಾನು ಮಾತನಾಡ್ತಾಯಿರೋವಾಗ ವರ್ತಮಾನ ನೆಲೆಯಲ್ಲೇ ಮಾತನಾಡುತ್ತಿದ್ದೇನೆ. ಬಸವಣ್ಣನವರು ಮಾತನಾಡಿರುವುದು ಅಷ್ಟು ಫ್ರೆಶ್ ಆಗಿ ಕೇಳಿಸುತ್ತೆ; ನಾವು ಆಧುನಿಕರು ಮಾತನಾಡಿರುವುದು ಯಾಕೆ ಅಷ್ಟು ಫ್ರೆಶ್ ಆಗಿ ಕೇಳಿಸುತ್ತಾಯಿಲ್ಲ — ಇದು ನನ್ನ ಪ್ರಶ್ನೆ.

'ಹರಿವ ನದಿಗೆ ಮೈಯೆಲ್ಲಾ ಕಾಲು' ಅಂತ ಬರೀತಾನೆ ಅಲ್ಲಮ. ಇವತ್ತು ನಾನು ಪ್ರತೀಕಗಳನ್ನು ಕಳೆದುಕೊಂಡವನಾಗಿದ್ದೇನೆ. 'ಹೆರಿಸಿರೇ ನಿಮ್ಮ ನಾರಿಯನು ಬಾಣ ಗರ್ಭಿಣಿಯ' ಅನ್ನುತ್ತಾನೆ ನಾರಣಪ್ಪ ನಿಮ್ಮ ಬತ್ತಳಿಕೆಯಲ್ಲಿರುವ ಬಾಣಗಳನ್ನು ಹೆರಿಸಿರಿ ಅನ್ನುವುದು. ಯಾಕೆ ನಮಗೆ ಈ ರೀತಿ ಪ್ರತೀಕಗಳಲ್ಲಿ ಮಾತನಾಡುತ್ತಿದ್ದರೆ, 'ನೀವು ಬಹಳ ಇಂಟಲೆಕ್ಚುಯಲ್ ಆಗಿ ಮಾತನಾಡುತ್ತಿದ್ದೀರ— ನಮಗೆಲ್ಲ ಅರ್ಥವಾಗುವ ಹಾಗೆ ಮಾತನಾಡಿ' ಅನ್ನುತ್ತಾರೆ. ಅವರೆಲ್ಲ ಕನ್ನಡ ಭಾರತಿ ಒಂದನೇ ಪುಸ್ತಕ ಓದಬೇಕು – ಅರ್ಥ ಆಗುವ ಹಾಗೆ ಕೇಳಬೇಕಾದವರು – ಮಗ್ಗಿ ಪುಸ್ತಕಗಳಿಗಾಗಿ ಅರ್ಹರಾದ ಜನರೇ ಹೊರತು, ಕನ್ನಡ ಭಾಷೆಗೆ ಅರ್ಹರಾದ ಜನ ಅಲ್ಲ ಅಂತ ನನ್ನ ತಿಳುವಳಿಕೆ.

ಅಲ್ಲಮ ಪ್ರಭು ಮಾತನಾಡುವುದು, ಪುರಂದರದಾಸರು ಮಾತನಾಡುವುದು : 'ಮಾಡು ಸಿಕ್ಕದಲ್ಲಾ। ಮಾಡಿನ ಗುಡು ಸಿಕ್ಕದಲ್ಲಾ' ಅಂತ ಮಾತನಾಡುತ್ತಾರಲ್ಲ ಪುರಂದರದಾಸರು? ಆ ನುಡಿಗಟ್ಟುಗಳನ್ನು ಎಲ್ಲಿ ಹೇಗೆ ಯೋಚನೆ ಮಾಡಬೇಕು? ಅಕ್ಕಮಹಾದೇವಿ ಮಾತನಾಡುವುದು? ಏನಾಗಿಹೋಗಿದೆ ಅಂದರೆ ನಾವು ಅನ್ಯಾಕ್ರಮಣಕ್ಕೆ ಗುರಿಯಾದಾಗ, ನಾವೇನು ಮಾಡಿದ್ದೇವೆ, ಇಂಗ್ಲಿಷ್ ಭಾಷೆಯಲ್ಲಿ ಕೂಡ ನಾವೇನೂ ಶೇಕ್ಸ್‌ಪಿಯರ್‌ನಾಗಲಿ, ವರ್ಡ್ಸ್‌ವರ್ತ್, ಬ್ಲೇಕ್‌ಗಳನ್ನಾಗಲಿ ಮಾತನಾಡುತ್ತಿಲ್ಲ — ಅಲ್ಲಿನ ಪತ್ರಿಕರ್ತನ ಭಾಷೆಯನ್ನು ನಮ್ಮ ದಿನನಿತ್ಯದ ವ್ಯವಹಾರದ ವಹಿವಾಟಿನ ಒಳಗಡೆ ಬಹಳ ಪೇಲವಗೊಳಿಸಿ, ಸರಳಗೊಳಿಸಿ ಮಾತನಾಡಬೇಕು ಅನ್ನುವುದೊಂದು ನಮ್ಮ ಮೇಲಿನ ಒಂದು ರೀತಿಯಾದ ಹೇರಿಕೆ. ಒಬ್ಬ ಸ್ವಲ್ಪ ಅಮೂರ್ತವಾಗಿ ಮಾತನಾಡಿಬಿಟ್ರೆ ಸಾಕು, ವಿಮರ್ಶೆಯ ಭಾಷೆಯಲ್ಲಿ 'ಏನಿವನು ಮಾತನಾಡ್ತಿರೋದು, ನಮಗೆ ಗೊತ್ತಾಗಲ್ಲ' ಅನ್ನುತ್ತಾರೆ. ಅವನಿಗೆ ಗೊತ್ತಾಗಿರುವ ಮಟ್ಟಕ್ಕೆ ನಾವೆಲ್ಲರೂ ಇಳಿಯಬೇಕು ಅನ್ನುವುದು. ಏಕೆಂದರೆ, ಅವನು ಇರುವ ಮಟ್ಟ ಇನ್ನೂ ಗೊತ್ತಾಗಿಲ್ಲ ನನಗೆ. ನಾವು ಮಾಸ್ತಿಯ ಬರವಣಿಗೆಯನ್ನು ಓದಬೇಕಾದರೆ ಅದಕ್ಕೆ ಬೇರೆಯದೇ ಆದಂಥ ಸಿದ್ಧತೆ ಬೇಕಾಗುತ್ತದೆ. ಅಂದರೆ, ನಾವು ದಿನೇ ದಿನೇ ಈ ರೀತಿ ಮಾತನಾಡುತ್ತ, ಮಾತನಾಡುತ್ತ ಒಂದು ಸಾಹಿತ್ಯಕ ಸಂಸ್ಕೃತಿಯನ್ನು ಕೂಡ ಸಂಪೂರ್ಣವಾಗಿ ತಿಳಿಗೊಳಿಸಿಬಿಟ್ಟಿದ್ದೇವೆ. ಸಾಹಿತ್ಯದ ಅಭಿವ್ಯಕ್ತಿ ಅಥವಾ ಸಾಹಿತ್ಯದ ಮೂಲಕ ಸಿದ್ಧವಾಗುವಂಥ ಭಾಷಾ ಸಂಪತ್ತು ಅಂತ ಏನು ಕರೆಯುತ್ತೇವೆ, ಆ ಭಾಷಾ ಸಂಪತ್ತು ಅನ್ನುವುದು ಪರಿಮಿತ ವಲಯದ ದಾಖಲಾತಿ ಮಾತ್ರ ಆಗಿಬಿಟ್ಟಿದೆ.

ನಮ್ಮಲ್ಲಿ ಏನಾಗಿದೆಯೆಂದರೆ, ನಾವು ಹೆಚ್ಚು ವಿದ್ಯಾವಂತರಾಗಿರುವುದೆಂದರೆ ಕನ್ನಡವನ್ನು ಮರೆಯುವುದು. ಏಕೆಂದರೆ ಹೆಚ್ಚು ವಿದ್ಯಾವಂತನಾದವನು ಇಂಗ್ಲಿಷ್ ಕಡೆ ಹೋಗ್ತಾ ಇರ್ತಾನೆ. ಹೆಚ್ಚು ವಿದ್ಯಾವಂತ

ಯಾರಾಗಿರುತ್ತಾನೆಂದರೆ ಕನ್ನಡವನ್ನು ಕಳೆದುಕೊಂಡವನಾಗಿರುತ್ತಾನೆ. ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಮುಂತಾದ ಉನ್ನತ ಶಿಕ್ಷಣಕ್ಕೆ ಹೋಗುವಂಥವರು ಕನ್ನಡವನ್ನು ಕಳೆದುಕೊಳ್ಳುತ್ತಿರುತ್ತಾರೆ. ಯಾಕೆಂದರೆ ನಾನು ಬಹಳ ಮುಖ್ಯವಾಗಿ ಸಮೂಹ ಮಾಧ್ಯಮದ ಭಾಷೆಯನ್ನು ಗಮನದಲ್ಲಿ ಇಟ್ಟುಕೊಂಡು ಮಾತನಾಡುತ್ತಿದ್ದೇನೆ. ಸಮೂಹ ಮಾಧ್ಯಮಗಳು ಏನು ಮಾಡುತ್ತೆ ಅಂದರೆ, ಇಡೀ ಸಂವೇದನೆಯನ್ನು ಒಂದು ರೀತಿಯಾಗಿ ಇಳಿಸಿ, ಅದರ ನಿಜವಾದ ಶಕ್ತಿಯನ್ನು ಉದ್ದೇಶಪೂರ್ವಕವಾಗಿ ಅದು ಇಳಿಗೈ ಮಾಡಿ ಮಾತನಾಡುತ್ತೆ. ಆದ್ದರಿಂದ ನಾನು ಈ ಹೊತ್ತು ಇಡೀ ಸಮೂಹ ಮಾಧ್ಯಮದವರ ವಲಯವನ್ನು ನೋಡಿದರೆ ವೃತ್ತಿಪತ್ರಿಕೆಯ ಭಾಷೆಯನ್ನು ನೋಡಿದರೆ; ಒಂದು ಜಾಹೀರಾತನ್ನು ನೋಡಿದರೆ, ಅದರ ಒಳಗಡೆ ಏನೂ ಇಲ್ಲ, ಅಪವಾದ ಇಲ್ಲ ಅಂತಿಲ್ಲ. ಆ ಕಾರಣದಿಂದಲೇ ಇರಬೇಕು. ಇಲ್ಲಿ ಸೇರಿರುವ ಸ್ನೇಹಿತರಲ್ಲಿ ಕಿರುಪತ್ರಿಕೆಯ ಸಂಘಟಕರಿದ್ದಾರೆ. ಈ ಕಿರುಪತ್ರಿಕೆ ಒಂದು ರೀತಿಯಲ್ಲಿ ಸಮೂಹ ಮಾಧ್ಯಮದ ಬಹಳ ಪೇಲವವಾದ, ಎಲ್ಲ ರೀತಿಯಲ್ಲೂ ಕೂಡ ಅಪಮೌಲ್ಯಗೊಂಡ ಕನ್ನಡ ಭಾಷೆಯ ಎದುರುಕಡೆ ಕೂಡ ಗಟ್ಟಿತನವನ್ನು ರಕ್ಷಿಸುವುದಕ್ಕೆ ಸಾಧ್ಯವಾಗುವುದು ಸಾಹಿತ್ಯದ ಕಿರುಪತ್ರಿಕೆಗಳಿಗೆ ಮಾತ್ರ ಸಾಧ್ಯ ಅನ್ನುವಂಥದ್ದು ಬಹಳ ಮುಖ್ಯವಾದ ವಿಶ್ವಾಸ ನನಗೆ. ಕಿರುಪತ್ರಿಕೆಗಳು ಒಂದು ರೀತಿ ವಿಶ್ಲೇಷಕವಾಗಿರುತ್ತೆ, ವೈಚಾರಿಕವಾಗಿರುತ್ತೆ; ಬೇರೆ ಬೇರೆ ರೀತಿಯ ತರ್ಕ, ಹುನ್ನಾರಗಳನ್ನು ಹಾಕಿ ಬರೆಯುವ ಕ್ರಮವನ್ನು ಕಿರುಪತ್ರಿಕೆಗಳು ತೋರುತ್ತಿವೆ. ಆದರೆ ಬಹಳ ದೊಡ್ಡ ವ್ಯಾಪಾರಿ ಪತ್ರಿಕೆಗಳು, ಒಬ್ಬ ಗ್ರಾಮೀಣ ಮನುಷ್ಯನಿಗೆ ಗೊತ್ತಿರುವ ಕನ್ನಡಕ್ಕಿಂತ ಪೇಲವವಾದ ಕನ್ನಡವನ್ನು ಬಳಸುತ್ತಿರುತ್ತಾರೆ. ಅರಕಲಗೂಡಿನ ತಾಲ್ಲೂಕಿನಲ್ಲಿ ಒಬ್ಬ ಬಹಳ ಗಟ್ಟಿಯಾದ ಕನ್ನಡ ಬಳಸುತ್ತಿರುತ್ತಾನೆ. ಹಾವೇರಿಯಲ್ಲಿ, ಕುಂದಾಪುರದಲ್ಲಿ ಬಹಳ ಗಟ್ಟಿಯಾದ ಕನ್ನಡ ಇದೆ. ಆದರೆ, ನಾವು ಏನು ಮಾಡುತ್ತೇವೆ ಅಂದರೆ ಸಾಮಾನ್ಯವಾದ ಎಲ್ಲರಿಗೂ ಅನ್ನುವ ರೀತಿಯಾದ ಪೂರ್ವ ನಿರ್ಧಾರಿತವಾದ ಒಂದು ಭಾಷಾ ತತ್ವವನ್ನು ಕಟ್ಟಿಕೊಂಡು, ಆ ರೀತಿಯಾದಂಥ ನುಡಿಗಟ್ಟುಗಳೂ ಕೂಡ ಸಂಪೂರ್ಣವಾಗಿ ನಮ್ಮ ಸಮೂಹ ಮಾಧ್ಯಮಗಳಲ್ಲಿ ಇಲ್ಲವಾಗಿಬಿಟ್ಟಿದೆ. ಈಗ ಸಮೂಹ ಮಾಧ್ಯಮಗಳು ಹೇಗೆ ಇರುತ್ತವೆಂದರೆ, ಗಿಳಿಪಾಠದ ರೀತಿಯಲ್ಲಿ ಇರುತ್ತವೆ. ಸುದ್ದಿಗಳನ್ನು ಕೇಳಿದರೆ ಅದರೊಳಗೆ ನಿಜವಾದ ಭಾಷೆಗೆ ಇರತಕ್ಕಂತ Tonal quality ಕಾಣಿಸುವುದಿಲ್ಲ, ಬಾಗು ಬಳಕುಗಳು ಕಾಣಿಸುವುದಿಲ್ಲ. ಹೀಗಾಗಿ ಶುರುವಾಗಿ ಮುಗಿಯುವ ತನಕ ಒಂದೇ ಕ್ರಮದಲ್ಲಿರುತ್ತದೆ. ಹಾಗಾಗಿ ನಮ್ಮ ನಿಜವಾದ ಕನ್ನಡ ಭಾಷೆಯ ಸತ್ವವನ್ನು ಅಥವಾ ಹತ್ತಾರು ಕಡೆಯ ಕನ್ನಡವನ್ನು ಎಲ್ಲರೂ ಕೇಳಬಹುದಾದ ಕನ್ನಡವನ್ನಾಗಿ ನಿರ್ಮಿಸುವಂತಹ ಪ್ರಯತ್ನವೂ ಅದರಲ್ಲಿ ಕಾಣುವುದಿಲ್ಲ. ಬೇಂದ್ರೆಯವರ 'ಗರಿ' ಮುನ್ನುಡಿಯ ಮುಖ್ಯವಾದ ಆಶಯ: 'ಕರ್ನಾಟಕದ ವಿಭಿನ್ನ ಭಾಗಗಳಲ್ಲಿ ಬಳಕೆಯಾಗುವ ಕನ್ನಡ ಎಲ್ಲರ ಕನ್ನಡವಾಗಿ ರೂಪಿಸುವುದು ಹೊಸ ಕಾವ್ಯದ ಮುಖ್ಯ ಆಶಯವಾಗಿದೆ' ಅಂತ ತಮ್ಮ 'ಗರಿ' ಮುನ್ನುಡಿಯಲ್ಲಿ ಹೇಳುತ್ತಾರೆ. ಅದು ಬೀದರ್ ಕರ್ನಾಟಕದ, ದಕ್ಷಿಣ ಕನ್ನಡದ, ಉತ್ತರ ಕರ್ನಾಟಕದ ಅಥವಾ ಕೋಲಾರದ ಕನ್ನಡವಾಗಿರಬಹುದು. ಆದರೆ ಅವು ಎಲ್ಲ ಕನ್ನಡವಾಗುವ ಹಾಗೆ ಪ್ರಯತ್ನಿಸುವುದೇ ಆಧುನಿಕ ಕವಿಯ, ಹೊಸ ಶತಮಾನದ ಕವಿಯ ಮುಖ್ಯವಾದ ಆಶಯ ಎಂದು ಹೇಳುತ್ತಾರೆ. ಅದು ನಿಜ, ಕಾವ್ಯದಲ್ಲಿ ಅದು ಆಗಿದೆ. ಕಾವ್ಯದಲ್ಲಿ ಯಾರು ಯಾವ ರೀತಿಯಲ್ಲಿ ಹೇಳಿದರೂ ಕೂಡ, ಕಾವ್ಯದ ಪದ ಪ್ರಯೋಗ ಯಾವ ರೀತಿ ನಿರ್ಮಾಣ ಆಗಿದೆಯೆಂದರೆ, ಈ ಗುಲ್ಬರ್ಗಾದಲ್ಲಿ ಬರೆಯುವಂಥ, ಮಂಗಳೂರಿನಲ್ಲಿ ಬರೆಯುವಂಥ ಕವಿ, ಒಂದು ಪದಪ್ರಯೋಗದ ಜೊತೆಗೆ ಅವನ ಒಂದು ವ್ಯಕ್ತಿ ವಿಶಿಷ್ಟವಾದ ಅಂಶಗಳ ಜೊತೆಗೆ, ಎಲ್ಲರಿಗೂ ಸಂವಹನವಾಗುವಂಥ ಕನ್ನಡವನ್ನು ಬಳಸುತ್ತಿದ್ದಾರೆ ಅನ್ನುವುದು ಬಹಳ ಮುಖ್ಯ.

ಈ ಹಿನ್ನೆಲೆಯೊಳಗೆ ೫೦ರ ದಶಕದ ನವ್ಯದ ನಿಜವಾದ ಸಾಧನೆ ಇರುವುದೂ ಕೂಡ. ಬೇಂದ್ರೆ

ಯವರಿಂದ ಆರಂಭವಾದ ಆ ಪ್ರಯತ್ನ ೫೦ರ ದಶಕದ ಹೊತ್ತಿಗೆ ಬಹಳ ಮುಖ್ಯವಾದ ಮಜಲನ್ನು ಮುಟ್ಟಿತು ಅನ್ನುವುದು ನನ್ನ ತಿಳುವಳಿಕೆ. ಇದಕ್ಕೆ ವಾದವಿವಾದ ಇರಬಹುದು, ಅದಕ್ಕೇನಂತೆ? ನಿಮ್ಮದೊಂದು ವಾದ ಇಟ್ಟುಕೊಳ್ಳಿ; ನನ್ನದೊಂದು ವಾದ ಇಟ್ಟುಕೊಳ್ತೀನಿ. ನಿಮ್ಮ ವಾದ ನಾನು ಒಪ್ಪಿಕೊಳ್ಳಬೇಕಾಗಿಲ್ಲ; ನನ್ನ ವಾದ ನೀವು ಒಪ್ಪಿಕೊಳ್ಳಬೇಕಾಗಿಲ್ಲ. ಎಲ್ಲರಿಗೂ ಒಪ್ಪಿಸತಕ್ಕಂತ ವಿಚಾರವೇನೂ ಉಳಿದಿಲ್ಲ ಇಲ್ಲಿ.

ಹೊಸ ಶಿಕ್ಷಣ ಅಂತ ನಾವು ಯಾವುದನ್ನು ಕರೀತಿದ್ದೀವಿ, ಅದು ಕನ್ನಡದಿಂದ ದೂರ ಸರಿಯುವುದು ಅಂತ. ಇವತ್ತು ನಮ್ಮ ಸ್ನೇಹಿತರಿಗೆ ಗೊತ್ತು, ಅನೇಕ ಅಧ್ಯಾಪಕರಿದ್ದಾರೆ, ನಾವೆಲ್ಲ ಅಧ್ಯಾಪಕರಾಗಿ ಕೆಲಸಕ್ಕೆ ಸೇರಿದಾಗ ಇದ್ದಂಥ ತೀವ್ರತೆ ಇವತ್ತು ಯಾಕೆ ಮಾಯವಾಗಿದೆ ಭಾಷೆಯ ಅಧ್ಯಾಪನದಲ್ಲಿ? ಅವನು ಕಂಪ್ಯೂಟರ್ ಶಿಕ್ಷಣಕ್ಕೋ, ಗಣಿತ ಶಿಕ್ಷಣಕ್ಕೋ ಕೊಡತಕ್ಕಂಥ ಆಸಕ್ತಿಯನ್ನು ಕನ್ನಡಕ್ಕೆ ಕೊಡುತ್ತಿಲ್ಲ. ನಮ್ಮನ್ನು ನಾವು ಒಂದು ರೀತಿಯಲ್ಲಿ ಶೋಧನೆ ಮಾಡಬೇಕು. ೧೦೦ಕ್ಕೆ ೯೫ ಜನ ವಿದ್ಯಾರ್ಥಿಗಳು ತರಗತಿಯಲ್ಲಿ ಇರೋರು. ಈಗ ೧೫ ವಿದ್ಯಾರ್ಥಿಗಳು ತರಗತಿಯಲ್ಲಿ ಇದ್ದರೆ ಮೇಷ್ಟರ ಪುಣ್ಯ. ಏಕೆಂದರೆ ಆಟಕ್ಕುಂಟೂ ಲೆಕ್ಕಕ್ಕಿಲ್ಲ ಅನ್ನುವ ಸ್ಥಿತಿಯನ್ನು ನಾವೇ ತಂದಿಟ್ಟಿದ್ದೇವೆ. ಅದರೊಳಗೆ ಆ ರೀತಿಯಿರುವ ಪಠ್ಯಕ್ರಮವನ್ನು ಇಡುತ್ತೇವೆ. ಆ ರೀತಿಯಾದಂಥ ಬೋಧನಾಕ್ರಮ ಇದೆ. ಆದರಿಂದ ಏನಾಯಿತು ಅಂದರೆ ಆ ರೀತಿ ವಿದ್ಯಾರ್ಥಿ ಆಕರ್ಷಿತನಾಗಿ ಬರುವುದೂ ಇಲ್ಲ. ನಾವೂ ಸಹ ಬಹಳಷ್ಟು ಸಪ್ಪೆಯಾದ ಪ್ರಶ್ನೆಗಳನ್ನು ಕೇಳುತ್ತಿರುತ್ತೇವೆ. 'ಕಮಲೆಯು ಯಾರ ನಿರೀಕ್ಷೆಯಲ್ಲಿದ್ದಳು?' ಅನ್ನುವ ಪ್ರಶ್ನೆ, ಅದು ಸಾಹಿತ್ಯದ ಪ್ರಶ್ನೆಯೋ, ಅಥವಾ ಯಾವುದೋ ಒಬ್ಬ ಕಮಲೆಯು, ಯಾವುದೋ ಒಂದು ನಿರೀಕ್ಷೆಯಲ್ಲಿರುವಂಥ ಪ್ರಶ್ನೆಯೋ ಗೊತ್ತಿಲ್ಲ. ಇವೆಲ್ಲ ನಮ್ಮನ್ನು ನಾವೇ ವಿಶ್ಲೇಷಣೆ ಮಾಡಿಕೊಂಡರೆ ಗೊತ್ತಾಗುತ್ತದೆ. ನಾವು ವರ್ಷವೆಲ್ಲ ಹೋಗಿ ಬೋಧಿಸ್ತೀವಿ. ನಾಲ್ಕು ಗಂಟೆ ಪಾಠ ಇರುತ್ತೆ. ಕೈ ತುಂಬ ಸಂಬಳ ಕೊಡುತ್ತಾರೆ. ಹೆಚ್ಚು ಬೇಕು ಅಂತ ಹೋರಾಟ ಮಾಡ್ತಿದ್ದೇವೆ. ನಮ್ಮ ವಿದ್ಯಾರ್ಥಿಯನ್ನು Useless ಮಾಡ್ತೀವಿ. ಅವನು ನಾಳೆ ಒಬ್ಬ ಮಾಸಪತ್ರಿಕೆಯ ಓದುಗ ಆಗಿ ಕೂಡ ಉಳಿಯುವುದಿಲ್ಲ. ಒಂದು ಎಂ.ಎ. ತರಗತಿಯೊಳಗೆ 'ಹೆಗ್ಗಡತಿ ಸಿನೆಮಾ ಎಷ್ಟು ಜನ ನೋಡಿದಿರಿ' ಎಂದರೆ ಒಬ್ಬ ಕೈ ಎತ್ತುತ್ತಾನೆ, ೫೦ ಜನದಲ್ಲಿ. ಅವನು ಇಡೀ ವರ್ಷ ಪ್ರಯತ್ನಪಟ್ಟರೂ ಹೆಗ್ಗಡತಿಯನ್ನು ಓದಿಸೋಕ್ಕಾಗಲ್ಲ. ಪರೀಕ್ಷೆಯನ್ನು ಬರೆಯುತ್ತಾನೆ ಮತ್ತು ತೇರ್ಗಡೆಯನ್ನೂ ಹೊಂದುತ್ತಾನೆ. ನಮ್ಮ ಆತಂಕ ಇದು. ಮೇಷ್ಟ್ರುಗಳದ್ದು. ನಮಗೆ ಬಹಳ ಬೇರೆ ರೀತಿಯಾದ ಆತಂಕಗಳಿವೆ. ಅಂದರೆ ನಮಗೆ ಹೇಗಿದೆ ಅಂದರೆ, ಸಮೂಹ ಮಾಧ್ಯಮ ಏನು ಮಾಡಿದೆಯೆಂದರೆ ಸಾಹಿತ್ಯದ ಕಡೆಗಿರುವಂಥ ಆಸಕ್ತಿಯನ್ನು ಒಂದು ರೀತಿ ಗೌಣಗೊಳಿಸಿದೆ. ಹಿಂದೆ ಸಮೂಹ ಮಾಧ್ಯಮ ಅಷ್ಟು ಗೌಣಗೊಳಿಸುತ್ತಿರಲಿಲ್ಲ. ನಾನು ತುಂಬ ಒಳ್ಳೆಯ ಕಥೆಗಳನ್ನು ಓದಿರುವುದು ವೃತ್ತಪತ್ರಿಕೆಗಳಲ್ಲೇ. ಇವತ್ತು ಒಬ್ಬ ಮಾಸ್ತಿ ಕತೆ ಓದಲ್ಲ. ಯಾಕೆಂದರೆ ಅವನಿಗೆ ಒಂದನೇ ಕ್ಲಾಸಿನಿಂದಲೇ ತರಬೇತಿ ಇಲ್ಲ. ಹಾಗಾಗಿ ಅವನು ಇಡೀ ಜೀವನದಲ್ಲೇ ಮಾಸ್ತಿ ಕತೆಯಿಂದ ವಂಚಿತನಾಗುತ್ತಾನೆ. ಹೈಸ್ಕೂಲ್ ಮಟ್ಟದ ತನಕ ಗದ್ಯ, ಪದ್ಯ ಬರೆದಿರೋದಿಲ್ಲ ಅಲ್ಲೇ ಕೂತಿರುವ Text book commiteeಯ ಸದಸ್ಯರದ್ದೇ. ಯಾರದ್ದಾದರೂ ಪದ್ಯ ಅಲ್ಲ ಅಂತ ಹೇಳಿದರೆ; 'ಹಾಗಾದರೆ ನೀವು ಹೇಳೋದು ಪದ್ಯಾನಾ?' ಅಂತ ಕೇಳುತ್ತಾರೆ. ಅವರಿಗೆ ಏನು ಉತ್ತರ ಹೇಳುವುದು? ಪ್ರಜಾಪ್ರಭುತ್ವದಲ್ಲಿ ಇಂಥ ಆಕ್ಷೇಪಣೆಗಳಿಗೆ ನಾವು ಸಿದ್ಧರಾಗಿರಬೇಕು. ಈ ಎಲ್ಲ ಕಾರಣಗಳಿಂದಲೇ ಬಹಳ ಸೀಮಿತವಾದ ಪ್ರಯೋಜನವನ್ನು ಮಾತ್ರ ಒಳಗೊಂಡಿದೆ. ಈಗ ಕನ್ನಡ ಬಹಳ ಕ್ಷಿಪ್ರವಾದ ಆಧುನೀಕರಣಗೊಳ್ಳುತ್ತಿದೆ. ಆದರೆ, ಆ ಆಧುನೀಕರಣದ ಪ್ರಯೋಜನ ಮಾತ್ರ ಬಹಳ ಪರಿಮಿತಿಯದಾಗಿದೆ. ಒಂದು ಕಡೆ ಆಧುನೀಕರಣ ನಡೆಯುತ್ತಿರುತ್ತದೆ, ಇನ್ನೊಂದು ಕಡೆ, ಸರ್ಕಾರಿ ಕನ್ನಡ ಬರುತ್ತಿರುತ್ತೆ. ಅಲ್ಲಿ ಪೋಲೀಸ್

ಅನ್ನುವ ಪದವನ್ನು ಪೋಲೀಸ್ ಅಂತ ಒಪ್ಪೋಬೇಕು ಅನ್ನುವಂಥ ಸಾಮಾನ್ಯವಾದ ಭಾಷಾ ನಿವೇದನೆ ಇಲ್ಲ, ಆ ಪದಕ್ಕೆ ಇನ್ಯಾವುದೋ ಒಂದು ಗೊತ್ತಿಲ್ಲದೇ ಇರುವಂಥ ಪದ; ಒಂದು ಹಳ್ಳಿಯೊಳಗೆ ಯಾರಿಗೂ ಗೊತ್ತಿಲ್ಲದೇ ಇಗುವಂಥ ಪದವೊಂದನ್ನು ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೋ, ಅಸಿಸ್ಟೆಂಟ್ ಇಂಜಿನಿಯರ್‌ಗೋ ಒಬ್ಬ ಪ್ರಾಧ್ಯಾಧಿಕಾರಿಗೋ ಅಂಥ ಪದವನ್ನು ಹಾಕುತ್ತಾ ಇರುತ್ತಾರೆ. 'ರಾಜಭಾಷಾ ನಿಘಂಟು' ಅಂತ ಒಂದು ಇದೆ. ಆ ರಾಜಭಾಷಾ ನಿಘಂಟು ಅನ್ನೋದು ಹಿಂದಿಯವರು ಮಾಡಿರುವ ನಿಘಂಟು. ಅದನ್ನು ನಾವೆಲ್ಲರೂ ಆರಾಮವಾಗಿ ಬಳಸುತ್ತಾ ಇದ್ದೇವೆ. ಯಾಕೆಂದರೆ ನಮಗೆ ಬೇರೆ ಭಾಷೆಯ ಸಂಪರ್ಕದಲ್ಲಿ ಬೆಳೆದಿರೋದು ಕನ್ನಡಕ್ಕೇನೂ ಹೊಸದಲ್ಲ. ಸಂಸ್ಕೃತದ ಜೊತೆ ಬಹಳ ದೊಡ್ಡದಾದ ಕೊಳುಕೊಡೆಗಳನ್ನು ಇಟ್ಟುಕೊಂಡು ತನ್ನ ಅಭಿವೃದ್ಧಿಯನ್ನು ಮಾಡಿಕೊಂಡಿತು. ಅನಂತರದಲ್ಲಿ ಉರ್ದು ಮುಂತಾದ ಭಾಷೆಯ ಸಂಪರ್ಕಕ್ಕೆ ಬಂದು ಇನ್ನೂ ದೊಡ್ಡದಾದ ಸಂಪರ್ಕವನ್ನು ಹೊಂದಿತು. ಇಂಗ್ಲಿಷ್ ಭಾಷೆಯೊಳಗಿನ ಸಂಪರ್ಕದಲ್ಲಿ ಇನ್ನೂ ಬೇರೆಯದೇ ರೀತಿಯನ್ನು ಹೊಂದಿತು. ಆದರೆ, ಹಿಂದಿ, ಮರಾಠಿಯೊಳಗೆ ಏನಾಯಿತು ಅಂದರೆ, ಈ ರೀತಿ ಅಭಿವೃದ್ಧಿ ಹೊಂದಿದಂತಹ ಯಾವುದನ್ನೂ : ನಾನು ಹೇಳುತ್ತಿರುವುದು ಸಾರ್ವತ್ರಿಕವಾಗಿ ಅಭಿವೃದ್ಧಿಹೊಂದಿರತಕ್ಕಂಥ ಕ್ರಮವಿದೆಯಲ್ಲ ಅದು ಹಿಂದಿಯ ಕಾರಣವಾಗಿ ಬಹಳ ದೊಡ್ಡ ಹೊಡೆತವನ್ನು ಅನುಭವಿಸಿತು. ಆದರೆ, ಈ ರೀತಿಯಾದಂಥ ಹಿಂದಿ ಭಾಷೆ ನಮ್ಮ ಸಾಹಿತ್ಯದ ಮೇಲೆ ಪ್ರಭಾವ ಬೀರಲಿಲ್ಲ ಅನ್ನುವುದು ಬಹಳ ಮುಖ್ಯವಾದ ವಿಚಾರ. ಹಿಂದಿ ಸಾಹಿತ್ಯ ಬೀರಿರಬಹುದು, ಹಿಂದಿ ಭಾಷೆ ಬೀರಲಿಲ್ಲ.

ನೋಡಿ ಈಗ, ಹಿಂದಿ ಭಾಷೆ - ಹಿಂದಿ ಸಿನೆಮಾ ಸಂಗೀತದಿಂದಲೇ ಒಂದು ರೀತಿಯಲ್ಲಿ ಸಾಮಾನ್ಯತೆಯನ್ನು ನಮ್ಮಲ್ಲಿ ತುಂಬಿಬಿಟ್ಟಿದೆ. ಯಾವಾಗಲೂ ಒಂದೇ ಧಾಟಿಯಲ್ಲಿ ಹಿಂದಿ ಸಿನೆಮಾ ಸಂಗೀತ ಇರುತ್ತದೆ; ಬೆಳಗಿನಿಂದ ಸಂಜೆಯವರೆಗೂ ಎಡಬಿಡದೆ. ಹಾಗಾಗಿ ನಮಗೆ ಬಹಳ ಗನಹವಾದುದನ್ನು ಹೇಳುವುದು ಆ ಭಾಷೆಗೆ ಸಾಧ್ಯವಿಲ್ಲವೇನೋ ಅನ್ನುವಂತಹ ತಿಳುವಳಿಕೆ ಬಂದುಬಿಟ್ಟಿದೆ. ನನಗೆ ವೈಯಕ್ತಿಕವಾಗಿ. ಆದರೆ, ಅದು ಎಷ್ಟರಮಟ್ಟಿಗೆ ವ್ಯಾಪಕವಾಗಿಬಿಟ್ಟಿದೆಯೆಂದರೆ, ರೇಡಿಯೋ ಸಂಗೀತ, ಕ್ಯಾಸೆಟ್ ಸಂಸ್ಕೃತಿಯಿಂದ, ಅಂದರೆ ಅದಕ್ಕೆ ಹೀಗೆ ಇರುವುದೇ ಸಾಧುವೇ ಹೊರತು, ಬೇರೆಯ ರೀತಿಯಲ್ಲಿ ಹೇಳಲು ಸಾಧ್ಯವಿಲ್ಲ. ಅನ್ನೋ ರೀತಿಯಾದ ಸಂಸ್ಕೃತಿ ಇಡೀ ಭಾರತದಾದ್ಯಂತ ವ್ಯಾಪಿಸಿಕೊಂಡಿರುವ ಸಂಸ್ಕೃತಿ. ಅದೇ ರೀತಿ ಈ ಹೊತ್ತಿನ ಸುಗಮ ಸಂಗೀತ ತುಂಬ ಸಲ ಏನಾಗುತ್ತೆ ಅಂದರೆ ಕನಸು-ಮನಸು ಅಂತ ಪ್ರಾಸ ಹಾಕಿಕೊಂಡು ಎಷ್ಟು ಬೇಕಾದರೂ ಪದ ನಿರ್ಮಾಣ ಮಾಡುತ್ತ ಇರಬಹುದು. ಹೀಗಾಗಿ ಕನ್ನಡ ಕಾವ್ಯವನ್ನು ಪ್ರಚಾರ ಮಾಡುತ್ತಿದ್ದೇವೆ, ಎಲ್ಲ ಕಡೆ ವ್ಯಾಪಿಸುತ್ತಿದ್ದೇವೆ ಎಂಬ ಭ್ರಮೆಯಿಂದ ಸಾಮಾನ್ಯವಾದ ಪದ್ಯ ರಚನೆಗೂ ಕೂಡ ಬಹಳ ದೊಡ್ಡ Orchestra ಹಾಕಿಕೊಂಡು ಅದನ್ನು ಕುಣಿಸಿ ಕುಣಿಸಿ ಇನ್ನು ಈ ಕನ್ನಡ ಕೇಳೋರು ಬೇಕಾಗಿಲ್ಲ ಅನ್ನೋ ರೀತಿ — ಮದುವೆ ಮನೆಯಲ್ಲಿ ಸಂಗೀತ ಕೇಳಿದರೆ ಯಾವ ರೀತಿಯಿರುತ್ತದೋ, ಆ ರೀತಿಯಿರುತ್ತದೆ. ಆರತಕ್ಷತೆ ಗೋಷ್ಠಿಯೊಳಗೆ ಯಾವ ರೀತಿಯಾಗುತ್ತೋ, ಆ ರೀತಿಯಲ್ಲಿ ನಮ್ಮಲ್ಲಿ ಕುಕವಿಗಳಿಂದ, ಕುಪದ್ಯ ನಿರ್ಮಾಣವಾಗುತ್ತಿದೆ

ನಾನು, ಕೇವಲ ಸಾಹಿತ್ಯದ ಹಿನ್ನೆಲೆಯೊಳಗೆ ಯೋಚನೆ ಮಾಡಿ ಇಷ್ಟನ್ನು ಮಾತನಾಡಿದ್ದೇನೆ. ಆಡಳಿತವಾಗಿ ಅಥವಾ ಶೈಕ್ಷಣಿಕವಾಗಿ, ಇನ್ನೂಬೇರೆ ವಿದ್ಯಾಮಾನಗಳ ಹಿನ್ನೆಲೆಯಲ್ಲಿ ಒಂದಷ್ಟು ಟಿಪ್ಪಣಿಗಳನ್ನು ಮಾಡಿಕೊಂಡು ಬಂದರೂ ಕೂಡ, ಅದನ್ನೆಲ್ಲ ವಿಸ್ತರಣೆ ಮಾಡುತ್ತಿಲ್ಲ. ನನಗೂ ಗೊತ್ತಿದೆ, ಇವತ್ತು ಏನೂ ಬಾರದ, ಓದಲು ಬಾರದ ಶೇಕಡಾ ೭೦ ಜನ ಕನ್ನಡನಾಡಿನಲ್ಲಿದ್ದಾರೆ. ಅವರೆಲ್ಲ ಕನ್ನಡಿಗರೇ ಹೌದು. ಧಾರ್ಮಿಕ ಅಲ್ಪಸಂಖ್ಯಾತರಿದ್ದಾರೆ. ಭಾಷಾ ಅಲ್ಪಸಂಖ್ಯಾತರಿದ್ದಾರೆ. ಹಾಗೆ ನೋಡಿದರೆ ಭಾಷಾ ಅಲ್ಪಸಂಖ್ಯಾತರೇ ಕನ್ನಡವನ್ನು ಇನ್ನೂ ಚೆನ್ನಾಗಿ ಬಳಸಿಕೊಂಡು ತಮ್ಮ ಜೀವನವನ್ನಾದರೂ ನಡೆಸುತ್ತಿದ್ದಾರೆ.

ಇನ್ನು ಧಾರ್ಮಿಕ ಅಲ್ಪಸಂಖ್ಯಾತರು ಭಾಷೆಯನ್ನು ಅಷ್ಟೋ ಇಷ್ಟೋ ಕಲಿತು ಜೀವನಸವನ್ನಾದರೂ ನಡೆಸುತ್ತಿದ್ದಾರೆ. ಆದರೆ, ನಾವೇನು ಮಾಡುತ್ತಿದ್ದೇವೆ ಅಂದರೆ, ನಮ್ಮ ಭಾಷೆಯನ್ನು ದಿನೇ ದಿನೇ ಹೆಚ್ಚು ಪೇಲವಗೊಳಿಸುವುದರ ಕ್ರಮದ ಕಡೆ ಮನಸ್ಸು ಕೊಟ್ಟಿದ್ದೇವೆ. ಶಿಕ್ಷಣದಲ್ಲಿ ಅದು ಗಟ್ಟಿಯಾಗಿ ಇರೋದಕ್ಕೆ ಕಾರಣವಾಗಿದ್ದೇವೆ ಮತ್ತು ಅದಕ್ಕೆ ಕೋಟ್ಯಂತರ ರೂಪಾಯಿ ಖರ್ಚಾದರೂ ಕೂಡ ಅದು ಅರ್ಥಹೀನವಾದರೂ ಆಗುತ್ತಾಯಿದ್ದರೂ ಕೂಡ ನಮಗೆ ಆತಂಕವಾಗದೆ ಹೋಗುತ್ತಿದೆ. ಮೇಷ್ಟರಾಗಿ ನನಗೆ ಇದು ವೈಯಕ್ತಿಕವಾಗಿ ಆತಂಕ.

✳

ಬಸವರಾಜ ಕಲ್ಗುಡಿ

ಕಿ.ರಂ.ರವರು ಮಾತನಾಡಿದ ಮೇಲೆ, ನಾನು ಮಾತನಾಡುವುದು ಸ್ವಲ್ಪ ಕಷ್ಟ. ಅವರು ಯಾವ ಆತಂಕಗಳನ್ನು ಕುರಿತು ಮಾತನಾಡಿದರೋ, ಹೆಚ್ಚು ಕಮ್ಮಿ ಅದೇ ಅಂಶಗಳ ಕುರಿತು ಮಾತನಾಡಬೇಕೆಂಬ ಯೋಚನೆಯಲ್ಲಿ ಬಂದಿದ್ದೇನೆ.

ಕನ್ನಡ ಭಾಷೆ ಮತ್ತು ಸಾಹಿತ್ಯ ಮತ್ತು ಅದರ ಆತಂಕಗಳನ್ನು ಕುರಿತಂತೆ ವಿಚಾರ ಮಾಡುವಾಗ ವಾಸ್ತವವಾಗಿ ಅದರ ಗತವನ್ನು ಕುರಿತಂತೆ ಯೋಚನೆ ಕೂಡ ಮುಖ್ಯ ಅಂತ ನನಗೆ ಅನ್ನಿಸಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಮತ್ತು ಸಾಹಿತ್ಯದ ಕೆಲವು ಲಕ್ಷಣಗಳು ಏನು ಮತ್ತು ಅದು ನಮ್ಮ ಆಧುನಿಕ ಸಂದರ್ಭದಲ್ಲಿ ಆ ಲಕ್ಷಣಗಳನ್ನು ಉಳಿಸಿಕೊಳ್ಳದೇ ಇದ್ದರೆ, ಅದರ ಸಾವು ಅನ್ನೋದು ಹೇಗೆ ಭಾವನಾತ್ಮಕವಾಗಿ ನಾವು ಆತಂಕ ಅಂತ ಕರೆಯಬಹುದಾದ ಸಾವು ಆಗಬೇಕಾಗಿಲ್ಲ. ಆದರೆ ಇನ್ನೊಂದು, ಎರಡು ಮೂರು ಸನ್ನಿವೇಶಗಳಲ್ಲಿ ಕನ್ನಡ ಭಾಷೆ ಇದೇ ಸ್ಥಿತಿಯಲ್ಲಿ ಆಧುನಿಕತೆಯ ದೊಡ್ಡ ಗಾಳಿಯೊಳಗೆ ತನ್ನ ಸಾಮಾಜಿಕ ಬಳಕೆಯ ಅಸ್ತಿತ್ವವನ್ನು ಕಳೆದುಕೊಂಡರೆ ಆಶ್ಚರ್ಯಪಡಬೇಕಾದ ಸಂಗತಿಯಲ್ಲ. ಆದರೆ, ಭಾಷೆ ಹೀಗೆ ತನ್ನ ಸಾಮಾಜಿಕ ವಾತಾವರಣದ ನಡುವೆ ಬಳಕೆಯ ವ್ಯವಹಾರದ ನೆಲೆಯನ್ನು ಕಳೆದುಕೊಳ್ಳುತ್ತಿರುವುದಕ್ಕೆ ಕೆಲವು ಸೂಕ್ಷ್ಮ ಕಾರಣಗಳು ಇದ್ದಿರಬಹುದು.

ಒಂದು ಮುಖ್ಯವಾದ ಪ್ರಮೇಯ ಏನೆಂದರೆ, ಕನ್ನಡ ಭಾಷೆಯ ಮುಖ್ಯ ಲಕ್ಷಣ ವಾಸ್ತವವಾಗಿ ಅದು ಎರಡು ಮಜಲಿನಲ್ಲಿ ವ್ಯವಹರಿಸುತ್ತಿದೆ. ಈಗಲೂ ಮತ್ತು ಹಿಂದೆಯೂ ಕೂಡ. ಏನೆಂದರೆ, ಒಂದು ಮಾತಿನ ಲಯ ಅದಕ್ಕಿದೆ. ಇನ್ನೊಂದು, ಬರಹದ ಲಯ ಕೂಡ ಕನ್ನಡ ಭಾಷೆಗಿದೆ. ಕಿ.ರಂ. ಹೇಳುತ್ತಿದ್ದ ಮಾತಿನಲ್ಲಿ ಆ ಅಂಶ ವಾಸ್ತವವಾಗಿ ಇತ್ತು. ಅಂದರೆ, ಬೇರೆ ಬೇರೆ ಪ್ರಾಂತೀಯ ಕನ್ನಡ ಆಡುಮಾತಿನ ಜನ ಅವರು ಓದುವ ಕನ್ನಡವನ್ನು ಗ್ರಹಿಸುವಾಗ ವಾಸ್ತವವಾಗಿ ತಮ್ಮ ಆಡುಮಾತಿನ ಕನ್ನಡವನ್ನು ಗ್ರಹಿಸುವಾಗ, ಅದನ್ನು ದೇಸೀ ಅಂತ ಕರೀತೇನೆ — ಈ ಹಿನ್ನೆಲೆಯಲ್ಲಿ ಗ್ರಹಿಸಿಕೊಳ್ಳುತ್ತ ಇರುತ್ತಾರೆ. ಈಗ ಬಹಳ ಸರಳವಾಗಿ ಹೇಳುವುದಾದರೆ 'ಬಸವ ಶಾಲೆಗೆ ಹೋದನು' ಎನ್ನುವ ಆಡುಮಾತಿನ ವಾಕ್ಯ ಇದ್ದರೆ — ಉತ್ತರ ಕರ್ನಾಟಕದವರು ಒಂದು ಪ್ರಶ್ನೆ ಕೇಳುತ್ತಾರೆ ಅಂತಿಟ್ಟುಕೊಳ್ಳಿ. 'ಎಲ್ಲಿ ಹೋದ್ದಾಲವ? ಸಾಲಿಗೆ ಹೋದಾಂವ' ಅನ್ನುತ್ತಾರೆ. ಬೇರೆ ಬೇರೆ ಪ್ರಾಂತೀಯ ಭಾಷೆಗಳಲ್ಲಿ ಇದು ಇದ್ದಿರಬಹುದು.

ಏನಾಗುತ್ತಿದೆಯೆಂದರೆ, ನಮ್ಮ ಕನ್ನಡಭಾಷೆಗೆ ಇರುವ ಬಹಳ ಮುಖ್ಯವಾದ ಗುಣ ಆಡುಮಾತಿನ ಕಾಪು ಮತ್ತು ಲಯ – ಯಾವುದನ್ನು ದೇಸೀ ಅಂತ ಕರೆಯಬಹುದೋ, ಜನಪದೀಯ ಅಂತ ಕರೆಯಬಹುದೋ — ಅದರ ಮೂಲಕವೇ ನಾವು ಓದಿನ ಲಯವನ್ನು ಗ್ರಹಿಸುವ ವಿನ್ಯಾಸ ಇದೆ ಮತ್ತು ಇತ್ತು. ಅಪ್ರಜ್ಞಾಪೂರ್ವಕವಾಗಿ ಓದುವ ಮೂಲಕ —ಈ ರೀತಿಯ ದೇಸಿಯ ಲಕ್ಷಣವನ್ನು

ಗ್ರಹಿಸಿಕೊಳ್ಳುವ ಸಂದರ್ಭ ಬಹಳ ಮುಖ್ಯವಾಗಿ ಇತ್ತು. ವಾಸ್ತವವಾಗಿ ವಸಾಹತು ನಮ್ಮ ಮೇಲೆ ಮಾಡಿದ ದೊಡ್ಡ ಪ್ರಭಾವ ಏನೆಂದರೆ, ಯಾವುದು ಮುಖ್ಯವಾದ ಸಾಂಸ್ಕೃತಿಕ ಅಂಗ ಅಂತ ಗ್ರಹಿಸಿಕೊಳ್ಳುತ್ತ ಇದ್ದೀವಿ, ಅಂಥಾ ಒಂದು ವಿನ್ಯಾಸವನ್ನು ಇಂಗ್ಲಿಷ್ ಭಾಷೆ ಇಲ್ಲವಾಗಿಸಿತು. 'ಓದುವಿಕೆಯನ್ನು ಕೂಡ ನಾವು ಮಾತಿನ ಲಯದಲ್ಲೇ ಗ್ರಹಿಸುತ್ತಾ ಇದ್ದವು' ಅಂತ ಕವಿರಾಜಮಾರ್ಗಕಾರ ಒಂದು ಮಾತನ್ನು ಹೇಳುತ್ತಾನೆ. ಇದು ಕಾವ್ಯ ಮೀಮಾಂಸಾಕೃತಿ ಅಂತ ಸಾಂಪ್ರದಾಯಿಕ ವಿದ್ವಾಂಸರು ಹೇಳುತ್ತಿದ್ದರೂ ಕೂಡ ವಾಸ್ತವವಾಗಿ ಅದು ಕನ್ನಡ ಭಾಷೆಯ ಪ್ರಸ್ತುತಿಯನ್ನು ಗುರುತಿಸಿದ ಮುಖ್ಯ ಭಾಗ. ಅವನು ಬಹಳ ಮುಖ್ಯವಾದ ಒಂದು ಅಂಶವನ್ನು ಹೇಳುತ್ತಾನೆ. 'ಕನ್ನಡ ಭಾಷೆ ತನ್ನ ದೇಸಿಯನ್ನು ಉಳಿಸಿಕೊಳ್ಳಬೇಕಾದರೆ ಅದಕ್ಕೆ ಒಂದು ಪ್ರಸುತ್ತತೆ ಬೇಕು' ಅಂತ.

ಭಾಷೆ ಸಮಕಾಲೀನವಾಗುವುದು ಹೇಗೆ ಅಂದರೆ, ಯಾವುದು ಪ್ರಸ್ತುತವೋ, ವರ್ತಮಾನವೋ ಅದನ್ನು ಬಳಸುವ ಮೂಲಕ. ಇದಕ್ಕೆ ಸಾಕಷ್ಟು ವ್ಯಾಖ್ಯಾನಗಳಿವೆ. ಅವನು ಬರಹದ ಮಾತನ್ನು ಹೇಳುತ್ತ ಇದ್ದಾನೆ. ಅಂದರೆ ಯಾವುದು ಕಣ್ಣಿಗೆ ಕಾಣುವುದನ್ನು ಯಾವುದು Standardise ಆಗಿರುವುದನ್ನು ಗುರುತಿಸುತ್ತಿದ್ದಾನೆ ಇಲ್ಲಿ. ನನಗೆ ಈ ವಾದ ಅಷ್ಟು ಒಪ್ಪಿಗೆಯಾಗಲಿಲ್ಲ. ಅವನು ಅನೇಕ ದೇಸಿಗಳನ್ನು ಕುರಿತು ಮಾತನಾಡುವಾಗ ಅದರ ನೇತ್ಯಾತ್ಮಕ ಅಂಶಗಳಾಗಿ ಮಾತನಾಡುವುದಿಲ್ಲ. ಅದೊಂದು ಬಹಳ ಮುಖ್ಯವಾದ ಸಮಕಾಲೀನ ಲಕ್ಷಣ ಅನ್ನಿಸುತ್ತೆ. ಕನ್ನಡದ ಒಂದು ಪ್ರಸ್ತುತ ಲಕ್ಷಣ ಅಂದರೆ ಅನೇಕ ದೇಸಿಗಳನ್ನು ಕುರಿತು ಮಾತನಾಡುವುದು. ಬಹುಶಃ ಈ ಸಮಸ್ಯೆಯೇನಿತ್ತು ಅಂದರೆ ಪಠ್ಯ ಮತ್ತು ಮೌಖಿಕ ಓದುವಿಕೆಯ ಮಧ್ಯೆ, ಇದರ ಒಂದು ವ್ಯವಸ್ಥಿತವಾದಂಥ ಅಧ್ಯಯನದ ಗ್ರಹಿಕೆಯ ಸಂಬಂಧವನ್ನು ಕನ್ನಡ ಓದುಗ ತನ್ನ ಪ್ರಜ್ಞೆಯಲ್ಲಿ ಬಹಳ ವಿಚಿತ್ರವಾಗಿ ಸಮನ್ವಯಗೊಳಿಸಿದ್ದ. ಇನ್ನೂ ಕೂಡ ಒಂದು ಪಠ್ಯವನ್ನು ಗ್ರಹಿಸುವಾಗ ಮೌಖಿಕ ಪಠ್ಯದ (Oral text) ಮಾದರಿಯಲ್ಲೇ ಗ್ರಹಿಸುತ್ತೇವೆ. ಇಂಗ್ಲಿಷ್ ಭಾಷೆ ಏನು ಮಾಡಿತೆಂದರೆ ಈ ರೀತಿಯ ಸಮನ್ವಯತೆಯ ಲಕ್ಷಣವನ್ನು ಒಡೆದುಹಾಕಿತು. ಇಂಗ್ಲಿಷ್ ಭಾಷೆಯ ಪಠ್ಯವೂ ಅದೇ, ಮಾತೂ ಅದೇ. ನಮ್ಮ ಜ್ಞಾನದ ಗ್ರಹಿಕೆಯನ್ನು ಹೆಚ್ಚು ಸುಲಭಗೊಳಿಸುವುದು ಒಂದು ಸಾಧನ ಅಂತ ಅನ್ನಿಸಿ ಶಿಕ್ಷಣದ ನೆಲೆಯಲ್ಲಿ ಏನು ಮಾಡಿದರೆಂದರೆ ಇಂಗ್ಲಿಷನ್ನು ಬಹಳ ಮುಖ್ಯವಾದ ಸಾಧನ ಅಂತ ತೀರ್ಮಾನಿಸಲಾಯಿತು. ನಾನು ಒಂದು ಸರಳವಾದ ಉಪಮೆ ಕೊಡುತ್ತ ಇರುತ್ತೇನೆ : ಒಬ್ಬ ಯಜಮಾನ ಇದ್ದಾನೆ. ಅವನಿಗೊಂದು ಸಾಕಿದ ನಾಯಿ ಇದೆ. ವಿದ್ಯಾವಂತ ವರ್ಗ ಎಂಥದ್ದು ಅಂದರೆ, ಸಾಕಿದ ನಾಯಿಗಳು. ಅದು ಏನು ಮಾಡುತ್ತದೆ ಎಂದರೆ ಬೀದಿ ನಾಯಿ ನೋಡಿದರೆ ಬೊಗಳುತ್ತದೆ. ಈ ಸ್ಥಿತಿಯಲ್ಲಿ ಯಾರು ವಸಾಹತು ಅಂತ ಹೇಳುವಾಗ ನಾವು ನಮ್ಮನ್ನು ಗುರುತಿಸಿಕೊಳ್ಳುವುದಿಲ್ಲ. ನಾವು ಇನ್ನೊಬ್ಬರ ಮೇಲೆ ಹಾಕುತ್ತಿರುತ್ತೇವೆ. ಹಾಗಾಗಿ ಕನ್ನಡದ ಬಗ್ಗೆ ಬಹಳ ಭಾವನಾತ್ಮಕವಾಗಿ ಮಾತನಾಡುವುದು ಒಂದು ಪರಿಪಾಠ ಆಗಿಬಿಟ್ಟಿದೆ. ಆತಂಕ ಅನ್ನೋ ಭಾಷೆಯಲ್ಲೇ ಒಂದು ಭಾವನಾತ್ಮಕವಾದ ನೆಲೆಯಲ್ಲಿ ನೋಡುವಂಥ ಕ್ರಮ ಇದೆ. ನನಗೆ ಹೀಗೆ ಭಾಷೆಯ ಬಗ್ಗೆ ಭಾವನಾತ್ಮಕವಾಗಿ ಮಾತನಾಡುವ ಗ್ರಹಿಸುವ ವಿನ್ಯಾಸದಲ್ಲಿ ಅಷ್ಟು ಆಸಕ್ತಿ ಇಲ್ಲ.

ಯಾಕೆಂದರೆ, ಯಾವುದೇ ಭಾಷೆ ಉಳಿಯಬೇಕಾದರೆ ಪ್ರಮುಖವಾಗಿ ಸಾಮಾಜಿಕ ವಲಯಗಳಲ್ಲಿ ತನ್ನನ್ನು ತಾನು ಅದು ಬಳಕೆಗೆ ಒಡ್ಡಿಕೊಳ್ಳುತ್ತಿರಬೇಕು. ನಮ್ಮಲ್ಲಿ ಯಾವುದು ಬಹಳ ಮುಖ್ಯವಾದ ಸಾಮಾಜಿಕ ವಲಯ ಅಂತ ಗುರುತಿಸುತ್ತೇವೆ ಅಂಥ ಸಾಮಾಜಿಕ ವಲಯಗಳಲ್ಲಿ ನಾವು ಕನ್ನಡವನ್ನು ಬಳಕೆಯ ಭಾಷೆಯಾಗಿ ಪ್ರಯೋಗಿಸುತ್ತಿಲ್ಲ. ಶಿಕ್ಷಣ ಆಗಬಹುದು, ಬಹಳ ಮುಖ್ಯವಾದ ಆಡಳಿತ ನೆಲೆಯಾಗಬಹುದು. ಹೀಗಾಗಿ ಏನಾಗುತ್ತಿದೆಯೆಂದರೆ, ಕನ್ನಡ ಅನ್ನೋದು ಸಾಮಾಜಿಕತ್ವವನ್ನು ದಿನೇ ದಿನೇ ಕಳೆದುಕೊಳ್ಳುತ್ತಿದೆ. ಹೀಗಾಗಿ ಯಾವುದನ್ನು ಬಹಳ ಸರಳೀಕರಣಗೊಳಿಸಿ ಮಾತನಾಡುವುದನ್ನು

ಈಗ ಅಪೇಕ್ಷಿಸುತ್ತಾರೆ. ಅಂಥ ವಾದದ ಬಗ್ಗೆ ಕೀರಂ ಮಾತನಾಡಿದರು ಅದು ಬಹುಶಃ ಈ ಕಾರಣಕ್ಕಾಗಿ.

ಇನ್ನೊಂದು ಮುಖ್ಯ ವಿಚಾರವೆಂದರೆ, ಈ ಭಾರತೀಯ ಭಾಷೆಗಳಿಗೆ ಒಂದು ಸಾಂಸ್ಕೃತಿಕ ಭಾಷೆ ಮತ್ತು ಅದರ ಮೂಲಕ ಹುಟ್ಟುತ್ತಿದ್ದ ಸಾಮಾಜಿಕ ಸಂದರ್ಭಗಳಿಗೆ ಒಂದು ಬಗೆಯ ಸಾಂಸ್ಕೃತಿಕ ಲಕ್ಷಣ ಕೂಡ ಇತ್ತು. ಅಂದರೆ, ಹಿಂದೆ ಕಾವ್ಯವೇ, ಸಾಹಿತ್ಯವೇ ಸಾಂಸ್ಕೃತಿಕ ಕರ್ತವ್ಯವನ್ನು ಕೂಡ ಮಾಡುತ್ತಿತ್ತು. ಅದು ಧರ್ಮದ ಬಗ್ಗೆ ಸಮಾಜದ ಬಗ್ಗೆ ಮನುಷ್ಯ ಮೌಲ್ಯಗಳ ಬಗ್ಗೆ ಆಗಿರಬಹುದು ಒಟ್ಟು ಮನುಷ್ಯನ ಸಾಂಸ್ಕೃತಿಕ ರಚನೆಯನ್ನು ಅದು ಹಿಡಿಯಬೇಕಾದ ದಾರಿಗಳನ್ನು; ಬಿಡಬೇಕಾದ ನೆಲೆಗಳನ್ನು ಮುಖ್ಯವಾಗಿ ತನ್ನ ಆಕೃತಿಯಲ್ಲಿ ಹಿಡಿಯುತ್ತಿತ್ತು. ಹೀಗಾಗಿ ಕಾವ್ಯ ರಚನೆ ಅಂದರೆ ಹಿಂದೆ ಅದು ಕೇವಲ ರಸಾಸ್ವಾದದ ರಚನೆ ಆಗಿರಲಿಲ್ಲ. ಮೇಷ್ಟ್ರು ಸಾಕಷ್ಟು ಕೃತಿಕಾರರ ಉದಾಹರಣೆ ಕೊಟ್ಟರು ಬಸವ, ಅಲ್ಲಮ, ಕುಮಾರ ವ್ಯಾಸ ಇತ್ಯಾದಿ. ಅದಕ್ಕೆ ಇನ್ನೊಂದು ಅಂಶವನ್ನು ಸೇರಿಸೋದಿಕ್ಕೆ ಇಷ್ಟಪಡುತ್ತೇನೆ. ಏನೆಂದರೆ ಈ ಚಿಂತನಾಕ್ರಮ ಏನಿತ್ತು ಸಾಹಿತ್ಯದ ಮೂಲಕ ಪ್ರಕಟಗೊಳ್ಳುವ ಚಿಂತನಾಕ್ರಮ ದೇಸೀಯ ಭಾಷೆಯ ಸ್ತರದಲ್ಲಿ ಅನ್ನೋದು ಸಂಸ್ಕೃತ ಮತ್ತು ಸಾಹಿತ್ಯದ ಬಗ್ಗೆ ಮಾತನಾಡುವಾಗ ಬಹಳ ಎಚ್ಚರದಿಂದಿರ ಬೇಕಾಗುತ್ತದೆ. ಏಕೆಂದರೆ, ಈ ರೀತಿಯ ಪ್ರಸ್ತುತ ಸಾಂಸ್ಕೃತಿಕ ಸಮಸ್ಯೆಗಳನ್ನು ಸಾಹಿತ್ಯ – ದೇಸೀ ಸಾಹಿತ್ಯದಷ್ಟು ಮಾರ್ಗ ಸಾಹಿತ್ಯ ಹೇಗೆ ತನ್ನ ತೆಕ್ಕೆಗೆ ತೆಗೆದುಕೊಂಡಿತ್ತು ಅನ್ನೋದು ವಿಮರ್ಶೆ ಮಾಡ ಬೇಕಾದ ವಿಚಾರ. ಹಾಗಿಲ್ಲ ಅನ್ನುವುದು ಬಹಳ ಮುಖ್ಯವಾದ ವಿಚಾರ. ಆದರೆ, ದೇಶೀಯ ಸಾಹಿತ್ಯ ವಾಸ್ತವವಾಗಿ ತನ್ನ ಅಭಿವ್ಯಕ್ತಿ ಕ್ರಮದಲ್ಲಿ ಬಹಳ ಮುಖ್ಯವಾದ ಸಾಂಸ್ಕೃತಿಕ ಸಮಸ್ಯೆಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿರುತ್ತದೆ. ಒಂದು ಬಗೆಯಲ್ಲಿ ದೇಶೀಯತೆ ಎನ್ನುವುದು ಸಂಸ್ಕೃತಿ, ಬದುಕು, ಅದರ ಮೌಲ್ಯ ಎಲ್ಲವನ್ನೂ ಒಳಗೊಂಡಂಥ ಒಂದು ಕಲ್ಪನೆಯಾಗಿ ಭಾಷೆಯಲ್ಲಿ ಒಳಗೊಳ್ಳುತ್ತಿತ್ತು. ಆದರೆ ವಸಾಹತು ಆಗಮನ ಮತ್ತೆ ನಮ್ಮಲ್ಲಿ ಏನು ಮಾಡಿತೆಂದರೆ ಈ ರೀತಿ ಒಂದು ಭಾಷಿಕ ಸಾಹಿತ್ಯ ಈ ಎಲ್ಲ ಕರ್ತವ್ಯಗಳನ್ನು ಮಾಡಬಹುದು ಎನ್ನುವ ಬಗ್ಗೆಯೇ ಗುಮಾನಿ ವ್ಯಕ್ತಪಡಿಸೋಕೆ ಶುರುಮಾಡಿತು. ಜ್ಞಾನವನ್ನು ಹಾಗೇ ಅನೇಕ ಭಾಗಗಳನ್ನಾಗಿ ಒಡೆದು ನೋಡಿದ ಬಗೆಯೊಂದಿದೆ ನಮ್ಮಲ್ಲಿ. ಇಂಗ್ಲಿಷ್ ಭಾಷೆ ಮತ್ತು ಅದರ ಮೂಲಕ ಬಂದಂತ ಜ್ಞಾನದ ನೆಲೆಗಳಿವೆಯಲ್ಲ ಅವುಗಳು ಪ್ರಪಂಚವನ್ನು ನೋಡುವ ವಿನ್ಯಾಸವನ್ನು ನೋಡುವುದೆಂದರೆ ಅದು ಕೇವಲ ಜ್ಞಾನ ಗ್ರಹಿಕೆಯ ವಿನ್ಯಾಸ ಅನ್ನೋದು ಬಹಳ ಸ್ಪಷ್ಟವಾಗಿ ರೂಪುಗೊಳ್ಳುತ್ತ ಹೋಯಿತು. ನಮ್ಮಲ್ಲಿ ಹೀಗಾಗಿ ಆಧುನಿಕ ಕಾಲದಲ್ಲಿ ಕನ್ನಡ ಭಾಷೆಗೆ ಬಿದ್ದ ದೊಡ್ಡ ಪೆಟ್ಟು ಏನೆಂದರೆ, ಅದು ಹಿಡಿಯಬೇಕೆನ್ನುತ್ತಿದ್ದ ಸಾಮಾಜಿಕ, ಸಾಂಸ್ಕೃತಿಕ ಸಮಸ್ಯೆಗಳ ಒಟ್ಟು ನೆಲೆಗಳು ಅಷ್ಟು ಮುಖ್ಯವಲ್ಲ ಅನ್ನುವ ಗ್ರಹಿಕೆಯೇ ಆಧುನಿಕ ಕಾಲದ ನಮ್ಮ ಚಿಂತನೆ. ಅದು ಪ್ರಾಚೀನವಾದುದು ಎನ್ನುವ ನೆಲೆಯಲ್ಲಿ ಗುರುತಿಸುವುದಕ್ಕೆ ಶುರುಮಾಡಿತು. ಹೀಗೆ ಎರಡು ಮುಖ್ಯ ಕಾರಣಗಳು ಕನ್ನಡ ಭಾಷೆ ನಮ್ಮಲ್ಲಿ ಹೆಚ್ಚು ಹೆಚ್ಚು ಕನ್ನಡ ವಾತಾವರಣದಿಂದ ದೂರ ಉಳಿಯಲಿಕ್ಕೆ ಕಾರಣವಾಗುವ ಅಂಶ.

ಈಗ ನೋಡಿ, ಶಿಕ್ಷಣ ನೀತಿ ಮತ್ತು ಪ್ರಾದೇಶಿಕತೆಯನ್ನು ಕುರಿತ ಚರ್ಚೆಯನ್ನು ಎತ್ತಿಕೊಂಡ ಸಂದರ್ಭದಲ್ಲಿ ಈ ಅಂಶ ಮತ್ತೆ ಮತ್ತೆ ಎದ್ದು ಕಾಣುತ್ತದೆ. ಎಲ್ಲೂ ಕೂಡ ನಮ್ಮ ಶಿಕ್ಷಣ ನೀತಿಯಲ್ಲಿ ಪ್ರಾದೇಶಿಕತೆ ಬಗ್ಗೆ ಬಹಳ ಮುಖ್ಯವಾದ ಒತ್ತು ಇಲ್ಲ. ಏಕೆಂದರೆ ಪ್ರಾದೇಶಿಕತೆ ಮತ್ತು ಅದಕ್ಕೆ ಸಂಬಂಧಪಟ್ಟ ಸಮಸ್ಯೆಗಳು ಮುಖ್ಯವಲ್ಲ ಅನ್ನೋದು ನಮ್ಮ ಗ್ರಹಿಕೆಯಾಗಿಬಿಟ್ಟಿದೆ. ಈಗ ನಾವು ಓದುತ್ತಿರುವ ಸಮಾಜ ವಿಜ್ಞಾನದ ಸಿಲಬಸ್ ತೆಗೆದು ನೋಡಿದಾಗ ಈ ಪ್ರಾದೇಶಿಕತೆಗೆ ಸಂಬಂಧಪಟ್ಟ ಸಮಸ್ಯೆಗಳೇನು ಅನ್ನೋದಕ್ಕೆ ಕಿಂಚಿತ್ತೂ ಕೂಡ ಗಮನ ಇರೋದು ನಮಗೆ ಗೊತ್ತಾಗುವುದಿಲ್ಲ. ಇತಿಹಾಸ ಆಗಬಹುದು, ಸಮಾಜಶಾಸ್ತ್ರ ರಾಜ್ಯಶಾಸ್ತ್ರ ಮುಂತಾದ ಯಾವುದೇ ಸಮಾಜವಿಜ್ಞಾನದ ಸಿಲಬಸ್ ತೆಗೆದು ನೋಡಿದರೆ ಕಾಣುವ ಬಹಳ ಮುಖ್ಯವಾದ ಸಮಸ್ಯೆ ಇದು. ಏಕೆಂದರೆ, ಹಾಗೆ ಪ್ರಾದೇಶಿಕತೆಯ ಬಹಳ ಮುಖ್ಯವಾದ ವಿನ್ಯಾಸಗಳನ್ನು ಕಂಡುಕೊಳ್ಳಬೇಕು ಅನ್ನುವುದರ ಕಡೆಗೆ ನಮ್ಮ ಶಿಕ್ಷಣದ ಕ್ರಮದ ರೂಪುಗ್ರಹಿಕೆಗಳು

ಬಹಳ ಮುಖ್ಯವಾಗಿ ರೂಪುಗೊಳ್ಳುತ್ತಿಲ್ಲ. ಆಗ ಏನಾಗುತ್ತದೆಯೆಂದರೆ, ನಮ್ಮಲ್ಲಿ ಜ್ಞಾನ ಅನ್ನೋದು ಈ ನನ್ನ ಬದುಕಿಗೆ ಸಂಬಂಧಪಟ್ಟಿದ್ದಲ್ಲ ಅನ್ನೋ ಒಂದು ತಾತ್ವಿಕತೆ ಬಹಳ ಮುಖ್ಯ ಆದಾಗ, ಬಹಳ ವಿಶ್ವಾಸಾತ್ಮಕ ಅಮೂರ್ತವಾದ ನೆಲೆಗಳಿಗೆ ನಾವು ಮತ್ತೆ ಮತ್ತೆ ಮಾರುಹೋಗುತ್ತಿರುತ್ತೇವೆ. ಇಂಗ್ಲಿಷ್ ಭಾಷೆಯನ್ನು ಮತ್ತು ಅದರ ಮೂಲಕ ಕೊಡುವ ಜ್ಞಾನ ಈ ರೀತಿಯದ್ದು ಹಾಗೆ ಗ್ರಹಿಸಿಕೊಂಡಿರುವುದರಿಂದ, ಕನ್ನಡ ಭಾಷೆ ಮತ್ತು ಅದು ಕೊಡುವಂಥ ಪ್ರಾದೇಶಿಕ ವೈಲಕ್ಷಣಗಳ, ಪ್ರಾದೇಶಿಕ ಸಮಸ್ಯೆಗಳ ಚಿಂತನೆ ಬಹಳ ಮುಖ್ಯ ಅಂತ ನಮಗೆ ಅನ್ನಿಸದೇ ಇರೋದರಿಂದ ಕನ್ನಡ ತನ್ನ ಪ್ರಸುತ್ತತೆಯನ್ನು ಬಹಳ ಮುಖ್ಯವಾಗಿ ಕಳೆದುಕೊಳ್ಳುತ್ತಿದೆ. ಪ್ರಾಥಮಿಕ ಶಿಕ್ಷಣದಲ್ಲಿ CBSE ಕೋರ್ಸ್ ಬಂದಿದೆ. CBSE ಸಿಲಬಸ್‌ನಲ್ಲಿ ಏನು ಮಾಡುತ್ತಾರೆಂದರೆ, ಮಕ್ಕಳಿಗೆ ಸಮಾಜವಿಜ್ಞಾನವನ್ನು ಹಿಂದಿಯಲ್ಲಿ ಕಲಿಸುತ್ತಾರೆ. ಎರಡು ಭಾಷೆಯ ನೀತಿಯನ್ನು ಅವರು ಬಳಸುತ್ತಿದ್ದಾರೆ. ವಿಜ್ಞಾನವನ್ನು ಇಂಗ್ಲಿಷಿನಲ್ಲಿ, ಸಮಾಜ ವಿಜ್ಞಾನವನ್ನು ಹಿಂದಿಯಲ್ಲಿ ಕಲಿಸುತ್ತಾರೆ. ನಮ್ಮ ಶಿಕ್ಷಣ ನೀತಿ ಕೂಡ ಅಂದರೆ ಕೇಂದ್ರ ಸರ್ಕಾರ ಮಾಡುತ್ತಿರುವ ಶಿಕ್ಷಣ ನೀತಿ ಯಾವ ತರದ್ದು ಅಂದರೆ, ಅದು ನಮ್ಮ ಮೌಲ್ಯ ಗ್ರಹಿಕೆಯಲ್ಲಿ; ಜೀವನವನ್ನು ಅರಿಯುವ ಸಂದರ್ಭದಲ್ಲಿ ರಾಷ್ಟ್ರಭಾಷೆ ಅನ್ನೋದು ಬಹಳ ಮುಖ್ಯ. ಹೀಗಾಗಿ ಹಿಂದೀ ಭಾಷೆಯಲ್ಲಿ ಎಲ್ಲ ಮಾನವಿಕ ಜ್ಞಾನವನ್ನು ಕಲಿಯುವುದು ಅಗತ್ಯ ಅಂತ ಭಾವಿಸಿ ಅದನ್ನು ಹೇಳುತ್ತಿದೆ. ಎಲ್ಲ ರಾಜ್ಯದಲ್ಲಿ ಭಿನ್ನ ಭಿನ್ನ ಭಾಷೆಯ ಮಕ್ಕಳು ಹಿಂದಿ ಭಾಷೆಯಲ್ಲಿ ನಮಗೆ ಹೆಚ್ಚು ಪ್ರಸುತ್ತವಲ್ಲದಂತ ಸಮಾಜವಿಜ್ಞಾನದ ಗ್ರಹಿಕೆಯನ್ನು ಕಲಿಯುತ್ತಿದ್ದಾರೆ. ಯಾರೂ ಕೂಡ ಇದಕ್ಕೆ ಮುಖ್ಯವಾದ ಗಮನಕೊಟ್ಟಿಲ್ಲ. ಯಾಕೆ ಕೇಂದ್ರ ಸರ್ಕಾರ ಈ ರೀತಿಯ ನೀತಿಯನ್ನು ಮಾಡುತ್ತಿದೆ ಮಕ್ಕಳ ಮೇಲೆ ಅನ್ನುವುದು ಯಾರಿಗೂ ಅಷ್ಟು ಮುಖ್ಯವಾದದ್ದು ಅನ್ನಿಸಿಲ್ಲ. ನನಗೆ ಕೇಳಿದಾಗ ಬಹಳ ಆಶ್ಚರ್ಯವಾಯಿತು. ಇದು ಶಿಕ್ಷಣ ನೀತಿಯಲ್ಲಿ ಉಂಟಾಗಿರುವ ರಾಷ್ಟ್ರೀಯ ಪ್ರಭುತ್ವವನ್ನು ಹೇರುವ ಕಲ್ಪನೆ.

ನಮ್ಮಲ್ಲಿ ೨೦ನೆಯ ಶತಮಾನದ ಪ್ರಾರಂಭದಲ್ಲಿ ಒಂದು ರೀತಿಯ ಗ್ರಹಿಕೆ ಇತ್ತು. ಈ ವಿಜ್ಞಾನ ಮತ್ತು ಕನ್ನಡ ಭಾಷೆಗೆ ಸಂಬಂಧಪಟ್ಟಂತೆ ನಮ್ಮ ಸಾಹಿತ್ಯ ಚಿಂತಕರು ಬಹಳ ಮುಖ್ಯವಾಗಿ ಆಲೋಚನೆ ಮಾಡಿದರು. ಕುವೆಂಪು ಬಹಳ ಸ್ಪಷ್ಟವಾಗಿ ತಮ್ಮ ಅನೇಕ ಲೇಖನಗಳಲ್ಲಿ ಇಂಗ್ಲಿಷ್ ಭಾಷೆ ಅನ್ನೋದು ಮೌಢ್ಯವನ್ನು ಕಳೆಯುವ ಒಂದು ನಿಶಿತಮತಿ ಅಂತ ಬರೆಯುತ್ತಾರೆ. ಅಂದರೆ, ನಮ್ಮ ಜೀವನದಲ್ಲಿ ಹೊಸ ಮೌಲ್ಯಗಳು ಉಂಟಾಗಬೇಕಾದರೆ, ಇಂಗ್ಲಿಷಿನಿಂದ ಆಗಬಹುದು ಅಂತ ಒಪ್ಪಿದ ಒಂದು ಮನಸ್ಥಿತಿ ಅದು. ಏಕೆಂದರೆ, ಇಂಗ್ಲಿಷ್ ಭಾಷೆಗೂ ಮತ್ತು ವೈಜ್ಞಾನಿಕ ಚಿಂತನೆಗೂ ಬಹಳ ಗಾಢವಾದ ಸಂಬಂಧ ಇದೆ ಎಂದು ತಿಳಿದುಕೊಂಡಂಥ ಕಾಲ ಅದು. ವೈಜ್ಞಾನಿಕತೆ ಅನ್ನೋದು ಅಲ್ಲಿ ಪರಿಶುದ್ಧ ವಿಜ್ಞಾನದ ಜ್ಞಾನ ಅಲ್ಲ; ಕೇವಲ ಯಾಂತ್ರಿಕ ವಿಜ್ಞಾನದ ಕಲ್ಪನೆ ಇರಲಿಲ್ಲ ಅವರಲ್ಲಿ. ಇಂಗ್ಲಿಷ್ ಭಾಷೆ ಮತ್ತು ಅದರ ಮೂಲಕ ಬರುವ ಜ್ಞಾನ ಅನ್ನೋದು ಒಂದು ವಿಸ್ತಾರವಾದ ಕಲ್ಪನೆಯಾಗಿತ್ತು. ಕುವೆಂಪು ಒಂದು ಮುಖ್ಯವಾದ ಮಾತನ್ನು ಹೇಳುತ್ತಾರೆ : ೨೦ನೆಯ ಶತಮಾನದ ಚಿಂತಕರೂ ಈ ಮಾತನ್ನು ಹೇಳುತ್ತಾರೆ — ಏನೆಂದರೆ ಇಂಗ್ಲಿಷ್ ಭಾಷೆ ಮತ್ತು ಅದು ಕೊಡುವ ಜ್ಞಾನ ಒಬ್ಬ ದೇಶೀ ಭಾಷಿಕನಿಗೆ ಅದು ಹಿನ್ನೆಲೆಯಾಗಿ ಇರಬೇಕು ಅಂತ. Passive ಆಗಿ ಇರಬೇಕು ಅಂತ. ಅಂದರೆ ಅವನು ಗ್ರಹಿಸುತ್ತ ಹೇಳುವುದನ್ನು ಬರೆಯುವುದನ್ನು ಅಂದರೆ Active response ಮಾಡುವಾಗ ಕನ್ನಡವನ್ನು ಬಳಸಬೇಕು ಅಂತ ಹೇಳುತ್ತಾರೆ. ಮುಖ್ಯವಾದ ಮಾತಿದು. ಆದರೆ, ನಮ್ಮಲ್ಲಿ ಈ ಗ್ರಹಿಕೆ ೨೦ನೆಯ ಶತಮಾನದ ಮಧ್ಯಂತರದ ವೇಳೆಗೆ ನಮ್ಮ ಶಿಕ್ಷಣ ನೀತಿಯ ಕ್ರಮದಿಂದಾಗಿ ಬಹಳ ಮುಖ್ಯವಾದ ಗ್ರಹಿಕೆ ಇಂಗ್ಲಿಷನ್ನು ಹಾಗೇ ಬಿಡುವುದಕ್ಕಾಗುವುದಿಲ್ಲ ಅನ್ನೋದು ಬಹಳ ಅನಿವಾರ್ಯಸ್ಥಿತಿ ಆಗಿರೋದರಿಂದ ಕನ್ನಡ Passive ಆಯ್ತು ಇಂಗ್ಲಿಷ್ Active ಆಯ್ತು. ವಾಸ್ತವವಾಗಿ ಯಾವುದನ್ನು ಬೇರೆ ರೀತಿಯಲ್ಲಿ ಆಗಬೇಕು ಅಂತ ಬಯಸುತ್ತಿದ್ದರೋ ಹಾಗೆ ಆಗದೇಹೋಯಿತು. ನಮ್ಮ ಶಿಕ್ಷಣ ನೀತಿ ಅನುಸರಿಸಿದ ಕ್ರಮದಿಂದಾಗಿ. ಇದು ಒಂದು ಬಹಳ ಮುಖ್ಯವಾದ ಅಂಶ; ಕನ್ನಡ ಭಾಷೆ

ಸಾಮಾಜಿಕ ವಲಯದಲ್ಲಿ ಪ್ರಾಥಮಿಕ ಹಂತದಲ್ಲಿ ತನ್ನ ಪ್ರಸ್ತುತತೆಯನ್ನು ಕಳೆದುಕೊಳ್ಳುವುದು. ವಾಸ್ತವವಾಗಿ ಈ ಇಂಗ್ಲಿಷ್ ಭಾಷೆ ವಿಕ್ಟೋರಿಯನ್ ಕಾಲದಲ್ಲಿ ಒಂದು ಬಗೆಯ ಸ್ಥಿತ್ಯಂತರಗಳ ಆತಂಕಗಳನ್ನು ಎದುರಿಸಿತು: ಎಂಥದ್ದು ಎಂದರೆ ವಿಕ್ಟೋರಿಯನ್ ಯುಗದಲ್ಲಿ ವಿಜ್ಞಾನ ತನ್ನ ಪ್ರಭಾವ ಉಂಟುಮಾಡುತ್ತಿದ್ದಾಗ, ಅನೇಕ ವಿಜ್ಞಾನಿಗಳು ತಾವು ಕಂಡು ಹಿಡಿದಿದ್ದ ವಿಜ್ಞಾನದ ತತ್ವಗಳನ್ನು ಬರೆಯುವಾಗ ವಿಕ್ಟೋರಿಯನ್ ಇಂಗ್ಲಿಷ್ ಭಾಷೆಯನ್ನು ಬಳಸುತ್ತಿದ್ದರು. ಆಗ ಬಂದ ಅನೇಕ ವೈಜ್ಞಾನಿಕ ಪತ್ರಿಕೆಗಳು, ೧೮೩೦ರಲ್ಲಿ ಆ ರೀತಿಯ ಬೌದ್ಧಿಕ ಭಾಷೆಯನ್ನು ವಿಜ್ಞಾನವನ್ನು ಹೇಳುವಾಗ ಬಳಸುತ್ತಾರೆ. ಅಂದರೆ, ವಿಜ್ಞಾನದ ಒಂದು ಪ್ರಯೋಗಾಧಾರಿತ ಜಗತ್ತನ್ನು ಹಿಡಿಯುತ್ತಿದೆ ಮತ್ತು ಅದು ಬಹಳ ಮುಖ್ಯವಾದುದು ಅಂತ ಅಂದುಕೊಂಡ ಕಾಲವಲ್ಲಿ, ಪ್ರಾರಂಭದ ಕಾಲದಲ್ಲಿ ಆ ಜಗತ್ತನ್ನು ಹಿಡಿಯುವಾಗ ಬೌದ್ಧಿಕ ಪ್ರತೀಕಗಳ ಭಾಷೆಯನ್ನು ಹೇಳುವ ಒಂದು ವಿನ್ಯಾಸವನ್ನು ರೂಪುಗೊಳಿಸುತ್ತಾ ಇದ್ದರು.

೧೯ನೆಯ ಶತಮಾನದ ಕೊನೆಯಲ್ಲಿ ವಿಜ್ಞಾನದಲ್ಲಿ ಮೂರ್ತತೆಯಿಂದ ಅಮೂರ್ತತೆಗೆ ಸಿದ್ಧಾಂತಗಳು ಬೆಳವಣಿಗೆ ಹೊಂದಲು ಪ್ರಾರಂಭವಾದಾಗ ... ಉದಾಹರಣೆಗೆ, Wave Theory, Thermo dynamics theory ಮುಂತಾದವು. ಕಣ್ಣಿಗೆ ಕಾಣದ ಒಂದು ಶಕ್ತಿ ಇದೆ ಅಂತ ಅನ್ನಿಸುವ ಅಮೂರ್ತವಾದ ತತ್ವವನ್ನು ವಿಜ್ಞಾನ ಹೇಳುತ್ತಿದ್ದಾಗ ಈ ಸಾಹಿತ್ಯದ ಭಾಷೆಗೆ ಬಹಳ ವಿಚಿತ್ರವಾದ ಆತಂಕ ಪ್ರಾರಂಭವಾಯಿತು. ಎಲ್ಲರೂ ಅಮೂರ್ತವಾದ ವಾಸ್ತವತೆಯನ್ನು ಹಿಡಿಯಬೇಕು ಅಂತ ಬಯಸುತ್ತಿದ್ದಾರೆ; 'ವಿಜ್ಞಾನ ಬಹಳ ವಿಚಿತ್ರವಾದ ಇನ್ನೊಂದು ಭಾಷೆಯನ್ನು ಹಿಡಿಯುತ್ತಿದೆಯಲ್ಲ' ಅಂತ. ವಾಸ್ತವವಾಗಿ ಸಾಹಿತ್ಯದ ಭಾಷೆ ಮತ್ತು ವಿಜ್ಞಾನದ ಭಾಷೆ ಮುಖಾಮುಖಿಯನ್ನು ಮಾಡಿಕೊಂಡಿತು.

ನಾನು ತತ್‌ಕ್ಷಣ ಗುರುತಿಸುವ ಒಂದು ಮಾತು ಎಂದರೆ ೧೮೭೮ರಲ್ಲಿ ಹರ್ಬರ್ಟ್ ಸ್ಪೆನ್ಸರ್ ಎಂಬ ದೊಡ್ಡ ವಿದ್ವಾಂಸನಿದ್ದ. ಅದೇ ಕಾಲದಲ್ಲಿ ಉಷ್ಣಗತಿ ಶಾಸ್ತ್ರದ (Thermo dynamics) ಎರಡನೆಯ ನಿಯಮವನ್ನು ಕೆಲ್‌ವಿನ್(Kelvin) ಎಂಬ ವಿಜ್ಞಾನಿ ಕಂಡುಹಿಡಿದ. ಅದರ ಪ್ರಕಾರ ಸಮತೋಲನ 'ಈಕ್ವಲಿಬ್ರಿಯಂ' ಏನು ಅಂದರೆ ಅದು ಸಾವು ಎನ್ನುವುದು. ಹರ್ಬರ್ಟ್ ಸ್ಪೆನ್ಸರ್‌ಗೆ ಎಷ್ಟು ಆಘಾತವಾಯಿತು ಎಂದರೆ, ಅವನು ತತ್ವಶಾಸ್ತ್ರದ ದೊಡ್ಡ ವಿದ್ವಾಂಸ. ಈ ರೀತಿ ಸಾಹಿತ್ಯವನ್ನು ತತ್ವಶಾಸ್ತ್ರದಲ್ಲಿ ಬಳಕೆ ಮಾಡುತ್ತಿದ್ದ ಕಾಲ ಅದು. ಅವನು ಆ ವಿಜ್ಞಾನಿಗೊಂದು ಪತ್ರ ಬರೆಯುತ್ತಾನೆ. 'ಎಂಥ ಹೊಸ ಜಗತ್ತಿನ ತತ್ವವನ್ನು ಹೇಳಿದೆ ನೀನು i was shattered' ಅಂತ. ನಾನು ಇದುವರೆಗೂ ಸಮತೋಲನದ position ಜೀವನದಲ್ಲಿ ಶ್ರೇಷ್ಠವಾದದ್ದು ಅಂತ ತಿಳಿದುಕೊಂಡಿದ್ದೆ; ಆದರೆ ನೀನು equilibrium is death ಅಂತ ಹೇಳುತ್ತಿದ್ದೀಯಲ್ಲ ಬಹುಶಃ ಜೀವನವನ್ನು ಅರಿಯಲಿಕ್ಕೆ ಹೊಸ ಭಾಷೆ ಬೇಕಾಗಬಹುದು' ಅಂತ. ಎಷ್ಟರಮಟ್ಟಿಗೆ ಆ ಸಾಹಿತ್ಯದ ಭಾಷೆ, ಲೋಕವನ್ನು ನೋಡುವ ಭಾಷೆ ಮತ್ತು ವಿಜ್ಞಾನದ ಭಾಷೆ ತನ್ನ ಪ್ರಯೋಗಗಳ ಮೂಲಕ ಒಂದಕ್ಕೊಂದು ಪರಸ್ಪರ ಹೊಸತನ್ನು ಕಟ್ಟಿಕೊಳ್ಳುತ್ತ ಹೋದವೆಂದರೆ ಒಂದು ಭಾಷೆ ಬೆಳೆಯುವ ವಿನ್ಯಾಸದಲ್ಲಿ ಈ ಮುಖಾಮುಖಿ ಆಗತ್ತೆ. ಆದರೆ, ಭಾರತೀಯ ಭಾಷೆಯ ಸಂದರ್ಭದಲ್ಲಿ ಇದು ಅನಿವಾರ್ಯವಾಗಿ ಆಗದೇಹೋಯ್ತು ಅನ್ನೋದು. ಏಕೆಂದರೆ, ನಮಗೆ ಆ ರೀತಿಯಲ್ಲಿ ಈ ಭಾಷೆಗಳು ಒಂದು ಹೊಸತತ್ವವನ್ನು ಕಟ್ಟುವ ಶಕ್ತಿಯನ್ನು ಕಳೆದುಕೊಂಡಿತು. ಏಕೆಂದರೆ ವಸಾಹತು ಜ್ಞಾನ ಮತ್ತು ವಸಾಹತು ಭಾಷೆ ಎಷ್ಟರಮಟ್ಟಿಗೆ ಒಂದು ಅನುಕರಣೆಗೆ ಅದು ದಾರಿಮಾಡಿಕೊಟ್ಟಿತು ಅಂದರೆ, ಭಾಷೆಯ ಮೂಲಕ ಒಂದು ಲೋಕವನ್ನು ನೋಡುವ ಗ್ರಹಿಕೆ ಅವರಿಗೆ ಹೊಸ ಜ್ಞಾನ, ಹೊಸ ಲೋಕದ ದೃಷ್ಟಿಕೋನ ಯಾವ ತರಹ ಬೆಳೆಯಿತು ಎಂದರೆ, ಎಲ್ಲ ಲೋಕದ ದೃಷ್ಟಿಕೋನ ಮನುಷ್ಯನನ್ನು ಕುರಿತದ್ದು ಅನ್ನೋದು. ಹಾಗಾಗಿ ನಮ್ಮ ಪಾರಂಪರಿಕ ಸಾಹಿತ್ಯ ಧರ್ಮದ ವಸ್ತುವನ್ನು ತನ್ನ ಕಾವ್ಯದ ತೆಕ್ಕೆಯಲ್ಲಿ ತೆಗೆದುಕೊಂಡು ಸಾಂಸ್ಕೃತಿಕ ಚಿಂತನೆಯನ್ನು ಮಾಡುವಾಗ, ಬದುಕಿನ ಮೌಲ್ಯಕ್ಕೆ – ಅದಕ್ಕೆ ಸಂಬಂಧಪಟ್ಟಂತೆ ಮುಖಾಮುಖಿಯಾಗಿರಿಸಿಕೊಂಡು ನೋಡುವಂಥ ಚಿಂತೆಯನ್ನು ಹೇಗೆ

ಗ್ರಹಿಸಬೇಕು ಅಂತ ಕೂಡ ಅನ್ನಿಸಲಿಲ್ಲ ಅವರಿಗೆ. 'ಆ ಭಾಷೆಯಲ್ಲಿ ಬರೀ ಧರ್ಮ ಇದೆ, ಧಾರ್ಮಿಕ ತತ್ವಗಳು ತುಂಬಿವೆ. ಅದರಲ್ಲಿ ಮನುಷ್ಯನ ಬದುಕಿನ ಬಗ್ಗೆ ಯಾವುದೇ ಚಿಂತನೆಯಿಲ್ಲ' ಅನ್ನುವ ಪುಂಗಿಯನ್ನು ಊದಿದರು ಅವರು, ಆ ಮಾತೇ ಹೆಚ್ಚು ಕಡಿಮೆ ನಮ್ಮ ಸುಮಾರು ೨೦ನೆಯ ಶತಮಾನದ ೫೦ ವರ್ಷಗಳವರೆಗೆ ನಮ್ಮ ಜ್ಞಾನದ ಆಲೋಚನೆಯಲ್ಲಿ; ಹೆಚ್ಚು ಕಡಿಮೆ ದೇಶೀ ಜ್ಞಾನದ ಆಲೋಚನೆಯಲ್ಲಿ ಈ ಮಾದರಿಯನ್ನು ಹುಡುಕುವುದಕ್ಕೆ ಪ್ರಾರಂಭ ಮಾಡಿದರೆ. ಹೋಗಿ,ಹೋಗಿ ನಮ್ಮ ಇತಿಹಾಸ ತಜ್ಞರು, ಅನೇಕ ಮಾನವಿಕ ಚಿಂತಕರು ಹೋಗಿಬಿದ್ದದ್ದು ಎಲ್ಲಿಗೆ ಅಂದರೆ ಅದಕ್ಕೊಂದು ಉತ್ತರ ಕೊಡೋ ನೆಲೆಯಲ್ಲಿ ಹುಡುಕುವುದಕ್ಕೆ ಹೋಗಿದ್ದು – ಯಾವುದು ಜೀವನದ ಅನ್ವೇಷಣೆಯನ್ನು ಬಹಳ ಮುಖ್ಯ ಅಂತ ಭಾವಿಸಿರಲಿಲ್ಲವೋ ಅಂತಹ ಮೂಲಗಳಿಗೆ ಉದಾಹರಣೆಗೆ, ಚರಿತ್ರೆಯ ಸಂದರ್ಭದಲ್ಲಿ ಶಾಸನಗಳ ಕುರಿತು ಹೇಳಿದರು: 'ನೋಡಿ, ಈ ಶಾಸನದಲ್ಲಿ ಮನುಷ್ಯನ ಬಗ್ಗೆ ಹೇಳುವ ದಾಖಲೆಗಳಿವೆ; ಆ ಮೂಲಕ ಮನುಷ್ಯನ ಚರಿತ್ರೆ ಸಿಗುತ್ತೆ' ಅಂತ. ಅಂಥ ದಾಖಲೆಗಳಲ್ಲಿ ತಮ್ಮ ಪರಾಕ್ರಮದ ಘೋಷಣೆಯಲ್ಲಿ ಎಷ್ಟು ಸುಳ್ಳು ತುಂಬಿರುತ್ತಾರೆ ರಾಜರು ಎನ್ನುವ ಚಾರಿತ್ರಿಕ ಗ್ರಹಿಕೆ ಇವರ ವಿಶ್ಲೇಷಣೆಯಲ್ಲಿ ಬರದೆಯೇ ಎಷ್ಟರಮಟ್ಟಿಗೆ ಓರಿಯಂಟಲಿಸ್ಟರ ತತ್ವವನ್ನು ಗಟ್ಟಿಯಾಗಿ ಹಿಡಿದರೆಂದರೆ, ಇವರ ಬದುಕನ್ನು ನೋಡುವ ಕ್ರಮದಲ್ಲೇ ಮೂಲಭೂತವಾದ ವ್ಯತ್ಯಾಸ ಆಗಬೇಕು – ಅದಕ್ಕಿಂತ ಭಿನ್ನವಾಗಬೇಕು ಅಂತ ಇವರಿಗೆ ಅನ್ನಿಸಲೇ ಇಲ್ಲ. ಇತ್ತೀಚಿನವರೆಗೂ ಅಥವಾ ಇನ್ನೂ ಮುಖ್ಯ ಚಿಂತನೆಗಳಲ್ಲಿ ಇದೇ ರೀತಿಯಾಯಿತು. ಯಾಕೆ ಹೀಗೆ ಆಗುತ್ತಿದೆಯೆಂದರೆ, ನಮಗೆ ಹೇಗೆ ಇಲ್ಲಿನ ಬದುಕು ಮತ್ತು ಚಿಂತನೆಯ ಕ್ರಮ ಬಹಳ ಮೂಲಭೂತವಾದ ಅನುಭವ ಮತ್ತು ಅದು ಎದುರಿಸುವ ಮುಖಾಮುಖಿ ದೇಶೀಯ ನೆಲೆಯ ಅನೇಕ ರೀತಿಯ ಸಮಸ್ಯೆಗಳನ್ನು ಎದುರಿಸಬೇಕಾಗಿದೆ ಎಂಬ ಪರಿಕಲ್ಪನೆ ಬಹುಶಃ ನಮ್ಮಲ್ಲಿ ಮರೆಯಾಗುತ್ತಿದೆ. ಎಲ್ಲವೂ ಕೂಡ ಏಕಮುಖಿಯಾದ, ಏಕಘನಾಕೃತಿಯಾದ ಆಲೋಚನೆಗಳಿಗೆ ಬಿದ್ದುಬಿಟ್ಟಿರುವುದರಿಂದ, ಅಂಥ ಚಿಂತನೆಗಳ ಗ್ರಹಿಕೆಗಳೇ ನಮಗೆ ಬರದೇ ಹೋಗುತ್ತಿದೆ. ಹೀಗಾಗಿ ನಮ್ಮಲ್ಲಿ ನಮ್ಮ ಚಹರೆಯನ್ನು ಕಳೆದುಕೊಳ್ಳುವುದೇ ಬಹಳ ಮುಖ್ಯವಾದ ಗುಣವಾಗಿಬಿಟ್ಟಿದೆ. ನಮ್ಮ ಬದುಕಿನಲ್ಲಿ ನಾವು ಎನ್ನುವ ಚಹರೆಯನ್ನು ಅನೇಕ ರೀತಿಯಲ್ಲಿ ಕಳೆದುಕೊಳ್ಳುತ್ತಿದ್ದೇವೆ. ಭಾಷೆಯ ಮೂಲಕ ಕಳೆದುಕೊಳ್ಳುತ್ತಿದ್ದೇವೆ. ಬದುಕಿನಲ್ಲಿ ಸಮಾಜದ ಜೊತೆಗೆ ನಮ್ಮ ಸಂಬಂಧ ಯಾವ ರೀತಿಯದ್ದು ಎನ್ನುವ ನೆಲೆಯಲ್ಲೂ ನಮ್ಮ ಚಹರೆಯನ್ನು ಕಳೆದುಕೊಳ್ಳುತ್ತಿದ್ದೇವೆ; ದೂರವಾಗುತ್ತಿದ್ದೇವೆ.

ಹೀಗೆ ಒಂದು ಬಗೆಯಲ್ಲಿ ಬಹಳ ದುರಂತದ ಮತ್ತು ಅನಿವಾರ್ಯದ ಬೆಳವಣಿಗೆ ಇದು. ಏಕೆಂದರೆ, ಒಂದು ಭಾಷೆ ಮತ್ತು ಅದಕ್ಕೆ ಸಂಬಂಧಪಟ್ಟಂಥ ಅನೇಕ ಸಾಮಾಜಿಕ ವೈಲಕ್ಷಣಗಳು ಉಳಿಯಬೇಕಾದರೆ ಆ ಭಾಷೆ ಸಾಮಾಜಿಕರ ನಡುವೆ ಬಹಳ ಮುಖ್ಯವಾಗಿ ಒಂದು ಜೀವಧಾತುವಾಗಿ ಇರಬೇಕು. ಅದನ್ನು ಹಾಗೆ ಉಳಿಸಬೇಕು ಅಂತ ನಿಶ್ಚಯ ಮಾಡುವವರು ನಾವು. ನಾವು ಅಂದರೆ ಹಾಗೆ ಬಳಸಬೇಕು ಅಂತ ನಿರ್ಧಾರಮಾಡುವುದು ನಮ್ಮ ದೇಶೀಯ ಜನರ ಒಂದು ಪ್ರಭುತ್ವ. ಎಲ್ಲ ಪ್ರಭುತ್ವಗಳೂ ಒಂದು ಬಗೆಯಲ್ಲಿ ಆಧುನಿಕತೆ ಮತ್ತು ಅದಕ್ಕೆ ಸಂಬಂಧಪಟ್ಟಂತ ಜಾಗತೀಕತೆ ಇವುಗಳಿಗೆ ಸಂಪೂರ್ಣ ತಲೆಬಾಗಿ ಒಪ್ಪಿಕೊಂಡಿರುವುದರಿಂದ ನಾನು ಯಾವುದನ್ನು ಹೇಳುತ್ತಿದ್ದೇನೆ ಈ ಬಗೆಯ ಆಶಯ ಬಹಳ ವೈವಿಧ್ಯತೆಯಿಂದ ಬೆಳೆಯುತ್ತದೆ ಅನ್ನುವುದರ ಬಗೆಗೆ ನನಗೆ ಸಂದೇಹವಿದೆ. ಹಾಗಾಗಿ ದೇಶೀಯ ಭಾಷೆಗಳು ತಮ್ಮ ಸತ್ವವನ್ನು ಕಳೆದುಕೊಂಡರೆ ಆಶ್ಚರ್ಯವಾಗಬೇಕಾಗಿಲ್ಲ. ಅದು ಹಾಗೇ ಅನಿವಾರ್ಯವಾಗಿ ಸಾಯುವ ಕ್ರಿಯೆ ಆಗಬಹುದು ಅನ್ನುವ ಆತಂಕ – ಭಾವನಾತ್ಮಕವಾದ ಆತಂಕ ಅಲ್ಲ ಅದು. ವಾಸ್ತವವಾಗಿ ಆದು ಆಗಬಹುದು ಅನ್ನುವ ಪರಿಸ್ಥಿತಿಯ ವಿಶ್ಲೇಷಣೆಯ ಆತಂಕ ಅಷ್ಟೇ.

■ ಕ್ಯಾಸೆಟ್ಟಿನಿಂದ ಕಾಗದಕ್ಕೆ : **ಎಂ. ಆರ್. ಭಗವತಿ**

ವಕ್ರೀಭವನ


■ ಲಲಿತಾ ಸಿದ್ಧಬಸವಯ್ಯ

ಮನೆಯಲ್ಲಿದ್ದುದು ಒಂದೇ ಕನ್ನಡಿ
ಪರಿಷೆಯಲ್ಲಿ ತಂದದ್ದು
ಬೆಲ್ಜಿಯಮ್ ಗಾಜು ಬೀಟೆ ಮರದ ಫ್ರೇಮು, ಗದೆ ಭಾರ
ದೇವರಗೂಡಿನ ಮಗ್ಗುಲಿಗೇ ಈ ದರ್ಪಣ ಸ್ಥಾವರ
ಈಬತ್ತಿ ಎಳೆಯುವವರು, ಗಂಧದ ಬೊಟ್ಟಿಕ್ಕುವವರು
ಕಂಚಿಕುಂಕುಮ ಸರಿ ಮಾಡಿಕೊಳ್ಳುವವರು
ಎಲ್ಲರೂ ಅಲ್ಲೇ, ಅದು ಇದ್ದಲ್ಲೇ, ಎಟುಗದಿದ್ದರೂ ಮೆಟ್ಟಿಲುಗಾಲೇರಿಸಿ
ಸಕುಟುಂಬ ಸಪರಿವಾರ ಬಳಕೆ ; ಲಗತ್ತು ಸ್ಥಿರ ಎಚ್ಚರಿಕೆ
''ಕೈಯಲ್ಲಿ ಹಿಡಿಯಬ್ಯಾಡ್ರೇ, ಗೋಡೆ ಮೇಲಿದ್ದಂಗೇ ನೋಡಿಕೊಳ್ರೇ''

ನಾವು ಅಕ್ಕ ತಂಗೇರು ಕದ್ದು ಮುಚ್ಚಿ
ಅಮ್ಮನಿಲ್ಲದ ಹೊತ್ತು ಮೊಳೆಯಿಂದ ಇಳಿಸಿ
ನಡುಮನೇ ಬೆಳಕಿಗೆ ಹುಷಾರಾಗಿ ಸಾಗಿಸಿ
ಒಬ್ಬರಾದ ಮೇಲೊಬ್ಬರು ನೋಡಿಕೊಂಡು...,
ಇದ್ದುದ್ದ ಇದ್ದಂಗೇ ತೋರಿಸುತ್ತಿತ್ತು
ದಪ್ಪಗಿದ್ದರೆ ದಪ್ಪಗೆ ಕಪ್ಪಗಿದ್ದರೆ ಕಪ್ಪಗೆ
ಮೂಗಿನ ಹೊರಳೆ ಎತ್ತಿದ್ದವಳಿಗೆ ಎತ್ತಿ
ಎಸೂಳು ಮೂಗನ್ನು ಎಸೂಳಾಗೇ ಇರಿಸಿ

೨

ಹಾಸ್ಟೆಲ್ಲಿನಲ್ಲಿ ಎಷ್ಟೊಂದು ಕನ್ನಡಿಗಳೆಂದರೆ
ಬಾಗಿಲಿಗೊಂದು, ಕದಕ್ಕೊಂದು,
ಟ್ರಂಕೊಳಗೊಂದು, ವ್ಯಾನಿಟಿ ಜಿಪ್ಪಿಗೊಂದು
ಒಂದೇ ರೂಮಲ್ಲಿ ಕಿಕ್ಕಿರಿದಂತೆ
ಹನ್ನೆರಡು ತುಪ್ಪೇರದ ದರ್ಪಣ



ತಿಪಟೂರಿನ ಕೊಬ್ಬರಿ ಮಂಡೀ ಹುಡುಗಿ
ಒಂದು ಮಗ್ಗುಲು ಕಿಟಕಿಯನ್ನೇ ಮುಚ್ಚಿಬಿಟ್ಟಿದ್ದಳು
ಮೂರೂವರೆ ಅಡಿಯ ಅರೆನಿಲುವುಗನ್ನಡಿ ತೂಗಿ
ಮಲೆಯಾಳಿಯದು ಐದು ಮೂಲೆಯ ಆಯನ
ಮೇಲೊಂದು ಮಾಯಾ ಮುಚ್ಚಳ ಬೇರೆ
ವಿಜಯವಾಡದ ಕನ್ನಡಿಯ ಸುತ್ತ
ಪರ್ಪಸ್ಸೇ ಮರೆಸುವಂತ ಕುಸುರಿಗೆಲಸ

ನಾವುಗಳು ನಂಮ್ಮತ್ತರಕ್ಕನುಕೂಲವಾದ ಕಡೆ
ಅವಳಿಗಿಂತ ಇವಳಿಗಿಂತ ನಾನೇ ಚೆಂದ ಎನಿಸುವಡೆ
ಬ್ಯಾಕ್‌ಬಟನ್ನಿನ ಹುಕ್ಕು ಭದ್ರವೇ
'ಬಿ' ಪಟ್ಟಿ ಹದ್ದುಬಸ್ತಿನೊಳಗಿದೆಯೇ
ನೈಲೆಕ್ಸ್ ಸೀರೆಯ ಸುರುಗಿ ಹಿಮ್ಮಡಿಯನು ಮುಚ್ಚಿದೆಯೇ
ಇತ್ಯಾದಿ...,
ಭೂಗೋಳಿಕ ವಿವರಗಳ ತಪಶೀಲಾದ ಮೇಲೆ
ಹಗೂರ ಪ್ಲಾಸ್ಟಿಕ್ಕಿನ ಕಟ್ಟಿನಲ್ಲಿ ಹುದುಗಿದ್ದ
ಹ್ಯಾಂಡ್ ಮಿರರ್ರಿನಲಿ
ಮುಖಚರಿತ್ರೆ

೩

ಕೆಲಸಕ್ಕೆ ಸೇರಿದೆ; ಎಪ್ಪತ್ತರ ದಶಕದ ಕೊನೆಯರ್ಧ
ರಿಪೋರ್ಟ್ಮಾದ ದಿನವೇ ಸಾಹೇಬರು ಆದೇಶಿಸಿದರು
'ಎಮರ್ಜೆನ್ಸಿ ಜಾರಿಯಲ್ಲಿದೆ ಗೊತ್ತೇನ್ರೀ
ಕಾಲಕ್ಕೆ ಸರಿಯಾಗಿ ಡ್ಯೂಟಿಗೆ ಬರ್‍ರಿ
ಹೊತ್ತು ಪಕ್ಕಾದ ಮೇಲೇ ಕಛೇರಿ ಬಿಡ್ರಿ'

ಮೊಟ್ಟಮೊದಲ ಸಂಬಳದಲ್ಲೊಂದು ಸ್ವಂತ ಕನ್ನಡಿ ಕೊಂಡಿದ್ದೆ
ಬಸ್ಸು ಹತ್ತಿ ಇಳಿದು
ಮುಂದಿನದು ಬಂದೀತೋ ಇಲ್ಲವೋ
ಸದಾ ಭಯದಲ್ಲೇ ಕಾಯ್ದು ಕಾಯ್ದು ಕಾಯ್ದು
ತುಥ್ ಇದರವ್ವನ...
ಕನ್ನಡಿಯ ಸದುಪಯೋಗವಿರಲಿ
ದುರುಪಯೋಗವೂ ಆಗಲಿಲ್ಲ ಕಣ್ರೀ

೪

ಅತ್ತೆಯಿಲ್ಲದ ಅತ್ತೆ ಮನೆ ಸೇರಿದೆ
ಪಡಸಾಲೆಯಲ್ಲಿ ನರಸಿಂಹದೇವರು ಏಕಕಾಲಕ್ಕೆರಡು ಸಲ
ಉದ್ಭವಿಸಬಹುದಾದ ದೊಡ್ಡ ಅಲಮಾರು

ಅದಕ್ಕಂಟಿಸಿದ್ದ ಆಳೆತ್ತರದ ಕನ್ನಡಿ
ಇತ್ತ ಬಂದರೆ ಅತ್ತ ಹೋದರೆ ಅನಾಮತ್ತಾಗಿ
ಚಲನವಲನಗಳ ಮಹಜರು
ವಕ್ರೀಭವನ ನಿಯಮಾನುಸಾರ ಈ ಸಪಾಟು ಮಸೂರ
ಅಡುಗೆ ಮನೆಯಲ್ಲಿದ್ದರೂ ಬಿಂಬಿಸುತ್ತಿತ್ತು
ನನ್ನನ್ನು ಇಡೀ ಮನೆಗೆ
ಈ ಮುಂಡೇದನ್ನ ಕಳಚಿಬಿಡೋಣವೆಂದು
ಸ್ಕ್ರೂಗಳನ್ನೊಂದೊಂದೇ ಸಡಿಲಿಸುತ್ತ ಬಂದೆ
ಅಷ್ಟೊತ್ತಿಗೆ ಬಸುರಿ
ಬಾಣಂತಿ ಕೋಣೆಗೆ ಕನ್ನಡಿ ನಿಷಿದ್ಧ
ಒಂದು ದಿನ ಯಾವುದೋ ಮಾಸ್ ಕ್ಯಾಂಪಲ್ಲಿ
ಯಶಸ್ವಿ ಸಂತಾನಹರಣ ಶಸ್ತ್ರಚಿಕಿತ್ಸೆ

೫

ಹೊಸಮನೆಯಲ್ಲಿ
ರೂಮಿನ ಅಳತೆ ಮೊದಲೇ ಅಳೆದು
ಕ್ಯೂಟಾಗಿಯೂ ಟಫ್ ಆಗಿಯೂ, ನೈಸಾಗಿಯೂ ಇರುವ
ಡ್ರೆಸ್ಸಿಂಗ್ ಟೇಬಲ್ ತಂದಿರಿಸಲಾಗಿದೆ
ಮುಂದೊಂದು ಕುಂಡೆಯೂರಲು ಗಿಡ್ಡಮಣೆ
ಅಂಗರಾಗಗಳಿಗೆಲ್ಲ ಕ್ರಮಾನುಸಾರಿ ಮುಚ್ಚುಖಾನೆ
ಕೂತಂತೆಯೇ ಎಲ್ಲ ಪಾರ್ಶ್ವಗಳೂ ತೆರೆದು
ವದನಾರವಿಂದಕ್ಕೇ ಸೀದಾ ಬೆಳಕುಬಿದ್ದು
ವಾಹ್!... ಅದ್ಭುತ
ಕೆಲಸ ಮುಗಿಸಿ ಬಂದು ನಿಲ್ಲುತ್ತೇನೆ
ಅದರ ಮುಚ್ಚಳ, ಅವರ ಬಿರಡೆ, ಅದರ ತಲೆ ಇದರ ಕಾಲು,
ಸ್ಟಿಕ್ಕು, ಪಿನ್ನು ಬ್ಯಾಂಡು, ಕ್ಲಿಪ್ಪು... ಸಂತೇ ಗೋಜಲು
ಈಡಾಡಿರುವುದನ್ನೆಲ್ಲ ಒಕ್ಕಲೂಡಿ
ಒರಸು ಸಿಗದಿದ್ದರೆ ಸೆರಗಲ್ಲೇ ಗಾಜಿನ ಧೂಳೊರೆಸಿ
ಆ ನಡುವೆ ಮುಖ ಕಂಡರೆ
ನಂದೇನಾ ಎಂದುಕೊಳ್ಳುತ್ತ...,

೬

ಅಕ್ಕಾ ಕೇಳೇ,
ನಾನೆಷ್ಟೊಂದು ಕನ್ನಡಿ ಕಂಡೆ!

ನಂ. ೫೨೧೭, ಗುರುಸನ್ನಿಧಿ, ೨ನೇ ತಿರುವು,
ಅಶೋಕನಗರ, ತುಮಕೂರು - ೫೭೨ ೧೦೩

ಪಯಣ

■ ಜಯಶ್ರೀ ಕೆ.ಸಿ.

ಸೂರ್ಯನ ಬಿಸಿಲ ತಾಪ
ತಡೆಯಲಾರೆ ಈ ಶಾಪ
ಮೋಡಗಳಲಿ ಮೂಡಲಾರದ ಮಳೆ
ಸೋತ ಹೃದಯಗಳ
ತಣಿಸಲು ಬಾರದು ಮಳೆಬಿಲ್ಲು
ತಡವರಿಸುತ್ತಿವೆ ಋತುಗಳು

ಕಾಡಿನ ಕುರುಹು ಇದು
ಆರಿಲ್ಲ ಕಾಂಡಗಳ ಕೆಂಡವಿನ್ನೂ
ಬೂದಿಯ ಸಾಗರ ದೂರದವರೆಗೆ
ಶಿವನ ನೆನಪು ಆರೆಗಳಿಗೆ
ಬೂದಿಯಿಂದೆದ್ದ ಆಕೃತಿಗಳು
ತಡಕಾಡುತ್ತಿವೆ ಏನನ್ನೋ?

ಬಂಡೆಗಳು ಮಲಗಿವೆ ಅಲ್ಲಿ ಮೈಹರವಿ
ಗತ ವೈಭವ ಎದೆಯೊಳಗೆ ಬಚ್ಚಿಟ್ಟು
ಮುಷ್ಟಿಯಷ್ಟು ಮಣ್ಣು ಕಲ್ಲು
ನಾನೇನು ಕಟ್ಟುವೆ ಇತಿಹಾಸ?



ಪಯಣವಿದು ಬಹು ದೂರ
ತಲುಪಲೇಬೇಕು ಆ ತೀರ
ಸೇತುವೆ ಇದೊಂದೇ
ನಿನಗೂ,ನನಗೂ, ಎಲ್ಲರಿಗೂ
ಹರಿವುದೊಂದೇ ನೀರು
ಅಂಬಾರದೊಂದೇ ಸೂರಿನ ಅಡಿ
ಒಂದೇ ನೀಲಿ ಮೇಲೂ ಕೆಳಗೂ
ಸಕಲ ರಾಗಗಳು ಮೇಳೈಸಿವೆ ಅಲ್ಲಿ
ಸರ್ವಾತ್ಮನ ಸುಖದ ಹಾಡಿನಲ್ಲಿ
ನಾ ನೀನೆಂಬೊ ಹಂಗು ತೊರೆದು
ಲೀನವಾಗೋಣ ಅಲ್ಲಿ
ಜಾ ದಾರಿಯಿರುವುದು ಇಲ್ಲಿ

ಸಿರಿಸಂಪಿಗೆ, ೪೪, ೧ನೇ ಮೇನ್, ೫ನೇ ಬ್ಲಾಕ್
ಬನಶಂಕರಿ ೩ನೇ ಹಂತ, ಬೆಂಗಳೂರು - ೫೬೦ ೦೮೫

ಡಾ. ಎಚ್.ಎಸ್. ಶಿವಪ್ರಕಾಶರಿಗೆ

■ ವೀಚಿ

ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ
ತಿರುಗಿದೆ
ತಿರುತಿರುಗಿ ತಿರುಗಾಡಿ ಬಂದೆ
ಶಿವಪ್ರಕಾಶ
ಸಾಧು ಸಂತರ ಕಂಡೆ ಶರಣ ಧರ್ಮವನುಂಡೆ
ಕವಿಯಾದೆ ಋಷಿಯಾದೆ ಕಾಲಜ್ಞಾನಿ
ಅಲೆದೆ
ಪ್ರಪಂಚವನ್ನು ಸುತ್ತಿ
ಅದರ ಬೆನ್ನನು ಹತ್ತಿ
ಓದಿದೆ ಓದಿದೆ ಓದುತ್ತಲೇ ಹೋದೆ
ಓದುತ್ತ ತಿರುಗುತ್ತ ಕಣ್ಮರೆಯಾದೆ ಎಂದು
ಮರೆತುಬಿಡುವಷ್ಟರಲಿ ಮತ್ತೆ
ಎಲ್ಲಿಂದಲೋ ಪ್ರತ್ಯಕ್ಷನಾದೆ
ಸಮಗಾರ ಭೀಮವ್ವನೆಡೆಗೆ
ಬಂದ ನಾಗಲಿಂಗನ ಹಾಗೆ
ಇದು ಯಾವ ಋಣಾನುಬಂಧವೊ ಬಂಧು!

ನಿನ್ನಷ್ಟು ಬಲ್ಲವರ ನಾನು ಕಂಡಿಲ್ಲ
ಪ್ರಾಜ್ಞನಾಗಿ ವಿವೇಕ ಹೇಳುವರು ಇಲ್ಲ
ಎಳೆ ಮಗುವಿನಂತೆ ಹುಡುಕಿ ಬರುವ
ನಿನ್ನ ನಿರ್ವ್ಯಾಜ ಪ್ರೇಮಕ್ಕೆ ನಾನು ಮರುಳಾದೆ
ಪಾರ ಲೌಕಿಕನಂತೆ ಮೊದಲು ಗೋಚರಿಸಿದ್ದೆ
ಈಗ ನೋಡಿದರೆ ಅಪಾರ ಲೌಕಿಕನಾದ
ಜೀವನ ಪ್ರೇಮಿ
ಹುಚ್ಚನಾಗದೆ ಹೆಚ್ಚುಗಾರಿಕೆಯ ತರಲಾರೆ
ನೆಂಬ ಆಸಾಮಿ



ಸಂಜೆ ಹೊಂಗಿರಣಗಳು ಕಿರಣ ಜಾಗರವಾಡಿ
ಲೋಕಕ್ಕೆ ಲೋಕವೇ ನಲಿಯುತ್ತಿರುವಾಗ
ಇದಕೆ ಎದುರಾಗಿ ಪುಚ್ಚಗಳ ಗರಿ ಬಿಚ್ಚಿ
ಕೆದರಿ ಜಾಗರವಾಡಿ ನವಿಲು ನಲಿದಿದ್ದೊ
ತಂಡೋಪತಂಡ
ನಾವು ಪ್ರೇಕ್ಷಕರಲ್ಲಿ ಆತ್ಮಸಾಕ್ಷಿ

ಹಳೆಯಲಯಗಳನಳಿಸಿ ಹೊಸಲಯದ
ತಾಂಡವದ ಕವಿತೆಯೋದಿದೆ ನೀನು, ಅಂದು
ಹೊಸ ಉಕ್ಕು ಹೊಸತು ಹೊಸ ಚೈತನ್ಯ
ಸಾಲು ಸಾಲಲಿ ಚಿಮ್ಮಿ ಚಕಿತವಾಯಿತು
ಸೃಷ್ಟಿ 'ಮಳೆಯ ಮಂಟಪದಲ್ಲಿ'
ತಾಂಡವದ ದಟ್ಟಲಯದೊಟ್ಟು ಕುಣಿತವ ಕಂಡು
ನಾನು ದಂಗಾದೆ
ಆಗ

ಇರುಳ ಲೋಕದ ವಿಸ್ಮಯಗಳುದಿಸಿದವು
ನಕ್ಷತ್ರ ರಾಶಿ ರಾಶಿ
ಇನ್ನರೆಕ್ಷಣದಲ್ಲಿ ಬೆಳುದಿಂಗಳಿನ ಕೆರೆಯು
ಬಾನಲ್ಲಿ ಕೋಡಿ ಬಿದ್ದಿತು
ಧರೆಗೆ
ಇಳೆಯ ಮೂಲೆ ಮುಡುಕಗಳೆಲ್ಲ
ಹಾಲು ಹಾಲೇ ಆಗಿ ಎತ್ತಲೋ ಕಣ್ಮರೆಯು
ಹಾಲಾಹಲ
ಒಳಗೆ ದುಗುಡ ಕಳೆದಿತ್ತೊಳಗೆ
ಹೊರಗಿತ್ತು ಹೊರೆಯಾಗಿ ಇನ್ನಷ್ಟು ಮತ್ತಷ್ಟು
ನೀನು ಜೀವ ಜಲವಾಗಿ ಹರಿದರೆ ಸಾಕು
ಮನದಲ್ಲೆ ಮನದನ್ನೆ ಪ್ರತ್ಯಕ್ಷವಾಗುವಳು
ಇವಳೆ ಅಲ್ಲವೆ 'ಚಿಂತಾಮಣಿಯಲ್ಲಿ ಕಂಡ ಮುಖ'
ಕಾಣು ಗೆಳೆಯಾ ನೀನು ಅವಳಲ್ಲಿ ಸಕಲ ಸುಖ.

ಚಿಕ್ಕವೀರಯ್ಯನ ಪಾಳ್ಯ, ತುಮಕೂರು - ೫೭೨ ೧೦೬


ಸಂಕಿರಣ–೪

'ಮಾತಿಗೆ ಮೈಯ್ಯಾನುವುದೆಂದರೆ ಮೌನದ ಮಹಾಗುಡಿಯಲ್ಲಿ ದೀಪವಾಗುವುದೆಂಬ' ನಂಬಿಕೆ ಉಳ್ಳ ಸಿಂಗಾಪುರ ಗುರುಭಕ್ತಯ್ಯ (ಎಸ್.ಜಿ.) ಸಿದ್ಧರಾಮಯ್ಯ(೧೯೪೬) ಅವರು ಪದ್ಯದ ಕಾವ್ಯಾತ್ಮಕ ಏಕಾಗ್ರತೆ ಮೆಚ್ಚಿ ಕಲಿಯುತ್ತಲೇ ಈ ಮಣ್ಣು ನೆಲದ ಕಾವ್ಯ ಭಾಷೆಯನ್ನು, ಅದರ ಎಲ್ಲ ಸೊಗಡಿನ ಜೊತೆಗೆ ಜೋಗಿ ಜಂಗಮರ ಪ್ರೇರಣೆಯ ದಾರಿಗಳನ್ನು ತಮ್ಮ ಕಾವ್ಯದ ಅಭಿವ್ಯಕ್ತಿಗೆ ಭಿತ್ತಿಯಾಗಿ ರೂಪಿಸಿಕೊಂಡಿದ್ದಾರೆ. ಜಾಗತೀಕರಣದ ಹೊರ ದಾಳಿಗೆ ತತ್ತರರಾಗುವ ಬದಲು ನಮ್ಮ ನೆಲದ ಜಲ ಮೂಲಗಳತ್ತ ಕಣ್ಣು ನೆಟ್ಟ ದೇಸೀ ಮೂಲಗಳಿಂದ ರೂಪುಗೊಂಡ ಹೊಸ ಹುನ್ನಾರುಗಳ ಪ್ರತಿಕ್ರಿಯೆ ಇವರ ಕಾವ್ಯದ್ದು.


'ಗಾಲಿ ಉಬ್ಬಿನ ಮೇಲೆ'(೧೯೮೦), 'ಕಾಡುವ ಬೇಲಿ ಹೂ' (೧೯೮೫), ಅವರ ಮೊದಲ ಎರಡು ಕವನ ಸಂಕಲನಗಳು, ಸಿದ್ಧರಾಮಯ್ಯನವರ ಕಾವ್ಯ ಜೀವನದ ಉದ್ದಯನಕ್ಕೆ ವೇದಿಕೆಯಾದದ್ದು 'ಅವಳೆದೆಯ ಜಂಗಮ' (೧೯೯೩) ನಂತರ 'ಸೊಲ್ಲು ಫಲವಾಗಿ' (೧೯೯೭) 'ಮರುಜೀವಣಿ' (೨೦೦೦), 'ಕರೆ ಬಳಗ' (೨೦೦೩) ಅವರ ಕವನ ಸಂಕಲನಗಳ ನಾಲು ಬಳಗ. ವಿಮರ್ಶೆಯ ನಾಲ್ಕು ಸಂಕಲನಗಳನ್ನೂ ಎಸ್.ಜಿ. ಸಿದ್ಧರಾಮಯ್ಯ ಪ್ರಕಟಿಸಿದ್ದಾರೆ. ಮತ್ತೊಂದು ಅಚ್ಚಿನಲ್ಲಿದೆ. ಜೊತೆಗೆ ದಂಡೆ, ನೆತ್ತಮನಾಡಿ ನಾಟಕಗಳನ್ನು ರಚಿಸಿದ್ದಾರೆ.


ನಿಯಮಿತ ಕಾಲಾವಧಿಯಲ್ಲಿ ಪ್ರಕಟಗೊಂಡಿರುವ ಸಿದ್ಧರಾಮಯ್ಯನವರ ಕಾವ್ಯ ಸಂಕಲನಗಳಿಗೆ ನಮ್ಮ ನಾಡಿನ ಅನೇಕ ಸೂಕ್ಷ್ಮ ಓದುಗರ ಪ್ರತಿಕ್ರಿಯೆ ಮುನ್ನುಡಿ, ಬೆನ್ನುಡಿಗಳಲ್ಲೂ ರೂಪುಗೊಂಡಿದೆ. 'ಅವಳೆದೆಯ ಜಂಗಮ' (೧೯೯೩), 'ಮರುಜೀವಣಿ' (೨೦೦೦) ಇವುಗಳು ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದರೆ 'ಸೊಲ್ಲು ಫಲವಾಗಿ' (೧೯೯೭) ಪು.ತಿ.ನ. ಕಾವ್ಯ ಪ್ರಶಸ್ತಿ ಪಡೆದಿದೆ. ಇತ್ತೀಚೆಗೆ 'ಕರೆಬಳಗ' ೨೦೦೩ರ ಜಿ.ಎಸ್.ಎಸ್. ಪ್ರಶಸ್ತಿ ಗಳಿಸಿದೆ.

ಸದ್ಯ ತುಮಕೂರಿನಲ್ಲಿ ನೆಲೆಸಿ, ಕಾಲೇಜು ಕನ್ನಡ ಅಧ್ಯಾಪಕರಾಗಿ ತಮ್ಮ ಉದ್ಯೋಗದ ನಿವೃತ್ತಿಯ ಅಂಚಿನಲ್ಲಿರುವ ಸಿದ್ಧರಾಮಯ್ಯನವರಿಗೆ ಕೃಷಿಯೂ ಬಲು ಪ್ರಿಯವಾದದ್ದು. ತಮ್ಮ ಹೊಲದ ನೆಲದಲ್ಲಿ ಅನೇಕ ಪ್ರಯೋಗಗಳಿಗೆ ಅವರು ತೊಡಗಿಕೊಂಡಿದ್ದಾರೆ. ಕಾವ್ಯ ಮತ್ತು ಕೃಷಿ ಸಿದ್ಧರಾಮಯ್ಯನವರ ಮುಂದಿನ ಮುಖ್ಯ ದಾರಿಗಳು.
















ಜಂಗಮನ ಪ್ರೀತಿ ಮಳೆ ಸಾಲು


ಹುಬ್ಬಳ್ಳಿ ಕೆರೆಬಾವಿ ಜಂಗಮ
ನಾನೊಬ್ಬಳೆ ಇರಲಾರೆ ಜಂಗಮ
ಹಾಸಿಗೆ ತಕ್ಕಂತೆ ಪುರುಷರಿಲ್ಲದ ಮೇಲೆ
ನಾನಿದ್ದು ಫಲವೇನು ಜಂಗಮ

– ಜನಪದ ಗೀತೆ

ಉತ್ಕೃಷ್ಟ ಕಾವ್ಯ ಯಾವುದೇ ಹಣೆಪಟ್ಟಿಗಳನ್ನು ಹಚ್ಚಿಕೊಳ್ಳದೆ ತನ್ನ ಸಾರ್ಥಕತೆಯ ದಿಕ್ಕನ್ನೇ ಅರಸಿ ಹುಟ್ಟಿಕೊಳ್ಳುತ್ತದೆ, ಅಷ್ಟೇ ಅಲ್ಲ ಅಂತಹ ಸಹೃದಯರನ್ನು ಹುಟ್ಟಿಸಿ, ದಿಟ್ಟಿಸಿಯೇ ಹೊರಡುತ್ತದೆ. ಜನದಿಂದ ಜನಕ್ಕೆ ತನ್ನ ವ್ಯಾಪಕತೆಯನ್ನು ಪಡೆಯುತ್ತಲೇ ಹೋಗುವ ಇದು ಜನಪದ ಕೃತಿ. ಮೂಲತಃ ಜಗತ್ತಿನ ಮಹಾ ಕಾವ್ಯಗಳೇ ಜನಪದ ಸೃಷ್ಟಿ ಅನ್ನಬೇಕಾದರೆ ಜನಪದ ಸ್ಪರ್ಶಮಣಿಯನ್ನು ತಾಕಿಸಿಕೊಂಡ ಯಾವುದೇ ಕವಿ ಮನಸ್ಸಿನಿಂದ ಸಾರ್ಥಕ ಕಾವ್ಯದ ಹೊಳಪು ಬರುವುದರಲ್ಲಿ ಅಚ್ಚರಿ ಇಲ್ಲ. ಜನಪದ ಸಂಸ್ಕೃತಿಯಲ್ಲೇ ಹುಟ್ಟಿ ಬೆಳೆದು ಫಲವಾದ ಕವಿತೆಗಳು ನೇರ ಜನ-ಮನದಲ್ಲಿ ನೆಲೆನಿಲ್ಲುತ್ತವೆ. ಶ್ರೀ ಎಸ್.ಜಿ. ಸಿದ್ದರಾಮಯ್ಯ ಅವರ ಕವನಗಳು ಜನಪದ ಸೊಬಗು ಸೋಬಾನೆಗಳಿಂದ ಪುಷ್ಟಿಗೊಂಡವು.

ಪಂಥ ಮುಖಿಯಾದ ಕೃತಿಯ ಆಯಸ್ಸು ಅತ್ಯಲ್ಪ, ಸಂಸ್ಕೃತಿಮುಖಿಯಾದ ಕೃತಿ ಎಲ್ಲ ಕಾಲದಲ್ಲೂ ತನ್ನ ಸತ್ವವನ್ನು ಪ್ರಕಾಶಿಸುತ್ತಲೇ ಇರುತ್ತದೆ. ಎಲ್ಲ ಕಾಲದ ಕಾವ್ಯಕ್ಕೂ ತಾಯಿ ಬೇರಾಗಿ ಜಲದ ಕಣ್ಣಾಗಿ ನಿಂತಿರುತ್ತದೆ.

ರೈತ ಮಗನಾದ ಸಿದ್ದರಾಮಯ್ಯ ಇವರ 'ಅವಳೆದೆಯ ಜಂಗಮ' ಸಂಕಲನದಲ್ಲಿನ ಕವಿತೆಗಳು ತನ್ನನ್ನು ಕಾವ್ಯವಾಗಿಸಿದ ಪರಿಸರ ಸಂಸ್ಕೃತಿಯ ಬಗ್ಗೆ ಆತ್ಮಕಥನವೆನ್ನುವ ರೀತಿಯವು. ಇವರು ತಮ್ಮ ಕವಿತೆಗಳಲ್ಲಿ ಜಾನಪದ ಕಾವ್ಯ ಕಥೆಗಾರಿಕೆಯ ತಂತ್ರದಿಂದಾಗಿ ಓದುಗರಿಗೆ ತೀರಾ ಆಪ್ತವಾಗುತ್ತಾರೆ.



ಡಿ.ಆರ್. ಚಂದ್ರ ಮಾಗಡಿ

'ಯಾವೂರ ದೊರೆಯಪ್ಪ ಎಲ್ಲಿಗಯ್ಯೆಗಮನ' ಎನ್ನುವ ಸಾಲುಗಳು ಓದುಗರಿಗೆ ತೀರಾ ಹತ್ತಿರವಾಗುತ್ತವೆ. ಇಲ್ಲ ಇವನೇ ಹತ್ತಿರವಾಗುತ್ತಾನೆ. ಸಿರಿ ಪ್ರಕೃತಿ ವರ ಪಡೆದ ಒಕ್ಕಲು ಮಗನ ಸಂಬಂಧ ಸಮೃದ್ಧಿಯನ್ನು ಕವನಗಳು ಎಳೆ ಎಳೆಯಾಗಿ ಬಿಡಿಸುತ್ತ ಹೋಗುತ್ತವೆ. 'ಅಂಗಾಂಗದೊಳಗೆಲ್ಲ ಜೀವತರು ಜಲರಾಶಿ', 'ಸುತ್ತಲೂರಿನ ನೆಲವ ನಕ್ಕು ನಗಿಸೋ ಮಾಯೆ', 'ಬವಕೆ ಬಾವುಣಿಕೆಯ ರಸದೂಟ', 'ಮಣ್ಣೊಳಗೆ ಕಣ್ಣಾಗಿ ಕಣಕಣವ ಬೆಳಗುವಳೆ', 'ಗೊಬ್ಬರದ ಹೊಲದೊಳಗೆ ಉಬ್ಬೆ ಮಳೆ ಕೂಗಿತು', 'ತಬ್ಬಿಕೊಂಡಿತು ಕರುಳು' ಕವನದ ಸಾರ್ಥಕ ಸಾಲುಗಳು.

ಸಮಾಜ ಮುಖಿಯಾದ ಜನಪದ ಸಂಸ್ಕೃತಿಯಲ್ಲಿ ಸ್ವಾರ್ಥದ ಹೊರತಾಗಿ ಕಾಣುವ ಸಮಾಜ ಪ್ರೀತಿ ಜೀವಂತ ಸಮಾಜದ ವ್ಯವಸ್ಥೆಯನ್ನು ಹೇಳುತ್ತಲೇ, ಅನುಭವ ಅಭಿವ್ಯಕ್ತಿಯಾಗುವಲ್ಲಿ ತನ್ನ ಸಾಂದ್ರತೆಯನ್ನು ಪಡೆದ ಪ್ರಮುಖ ಅಂಶವಾಗಿ 'ನೆರಿಕೆಯೊಳಗಿನ ಜೀವ' ಕವನದಲ್ಲಿ ಬಿಡುವಿನಿಂದ ನಿರಂತರ ಕಾಯಕ ಪ್ರಜ್ಞೆ ತನ್ನ ಬೆಳೆಯ ಪ್ರತಿ ಕಾಳಿನ ಸಮರ್ಥ ಹಂಚಿಕೆಯನ್ನೇ ಹೇಳುತ್ತಾ –

ಜಂಗಮ ಗೊರವಯ್ಯ ತೋಟಿ ತಳವಾರ ದಾಸಯ್ಯ
ಅಪ್ಪನ್ನ ಮಾಗ್ಗವ್ವರ ಜೋಳಿಗೆ ತುಂಬ ಜಲು ಮಾತು
ಮಿಕ್ಕ ಮಾನ್ನವುದ ಕಾಸಿ ಒಕ್ಕಲದಣಿಯ ಮನೆ ತುಂಬಿ
ನಕ್ಕಿತು ನೋಡ ನೆಲಪೀಗ ಮತ್ತೆ ಸಿಕ್ಕಿತ್ತು ಸೊಗಸಾಲ ಹೆಗಲೀಗೆ'

ಸಾಲುಗಳು ಆಯಗಾರ ಪದ್ಧತಿ, ಪ್ರೀತಿ, ಬಂಧನ ಇವುಗಳನ್ನು ಕಲಾತ್ಮಕವಾಗಿ ಹೇಳುತ್ತವೆ. ಕರುಳ ಸಂಬಂಧದ ಸವಿ ಸವಿಯುವಾಗ ಗೊತ್ತಾಗುವುದಿಲ್ಲ. ಬೇರೆಯೊಂದು ಬದುಕಿನ ನಿರೀಕ್ಷೆ ಇರುವ ಯಾವುದೇ ಮನಸ್ಸಿಗೆ ಸವಿ ತತ್ಕಾಲದಲ್ಲಿ ಅರಿವಾಗದೆ ತೆರೆ ಬಿದ್ದಿರುತ್ತದೆ. ಆ ಒಂದು ಚಣದಿಂದ ವಂಚಿತನಾದ ಮೇಲೆ ಮತ್ತೆ ಸಿಗಲಾರದು ಅಂದಾಗ ಕಳೆದ ದಿನಗಳು ಪಟ್ಟಿರುವ ಸವಿ ಕೊಡುವ ನೆನಪುಗಳು ಅಪೂರ್ವವಾದವು. 'ಹೊನ್ನ ಬಾವುಣಿ'ಯಲ್ಲಿ ಕವಿ ಹೋದ ದಿನಗಳಿಗಾಗಿ ಹಲಬುತ್ತ ತನ್ನ ಸದ್ಯದ ಸ್ಥಿತಿಯ ಕುರಿತು 'ಟಾರು ಕಾಡಿನ ಒಳಗೆ ನಯಕೆ ಜಾರಿದ ಕೊಳಲು', 'ನಾಜೂಕು ನಡೆಗಳ ಹೆಜ್ಜೆ ತಿಂದ ಕೊಳಲು, ಕಳಕೊಂಡೆನವ್ವಾ ನನ್ನ ಕೊಳಲ' ಅನ್ನುತ್ತಾರೆ.

ರಸಘಟ್ಟದ ಬದುಕಿನ ಕಟುಗಂಧದ ಮಧುರ ನೆನಪುಗಳು ಮುಪ್ಪಿನಲ್ಲೂ ಮುದಕೊಡುವ ಅದ್ಭುತ ಕ್ಷಣಗಳು, ಅದರೊಟ್ಟಿಗೇ ಆತ್ಮಕತೆಯೂ ಸೇರಿಕೊಂಡಾಗಿ 'ಕಾಡುವ ಬೇಲಿ ಹೂ' ಕವಿದ ಬಹುಮಹಡಿ ಬುರಕ ತೆಗೆದಾಗ ಗ್ರಂಥ ಉದ್ಗ್ರಂಥ ಹೊದಿಕೆಯಲ್ಲಿ ಖರ್ಷಿದಾ. ಇತಿಹಾಸವಾದ 'ಕಟ್ಟಡ ಕುಸಿತದಲ್ಲೂ ಸ್ವಾರ್ಥ ಮೂಲದ ಪ್ರೀತಿಯ ಅಭಿವ್ಯಕ್ತಿ.'

ಜನಪದ ಸಂಸ್ಕೃತಿಯಲ್ಲಿ ಸಂಬಂಧಗಳ ಕಲ್ಪನೆ ತಾಯಿಯನ್ನು ತಾಯಿಯಾಗಿ ಕರೆಯದೆ ಇತರೆ ಸಂಬಂಧ ಸೂಚಕದಲ್ಲಿ ತಂದೆಯನ್ನೂ ಇತರರನ್ನೂ ಹೀಗೆ ಕರೆಯುವ ಸಾಧ್ಯತೆಯಲ್ಲಿ 'ನಡೆದುಕೊಂಡು ಬಂದ ಪದ್ಧತಿ'ಯಾಗಿ ಕೆಲಸ ಮಾಡುತ್ತಿರುತ್ತದೆ. 'ಅಂಬಿಗನ ಮಿಂಡ' ಕವನದಲ್ಲಿನ ಅಜ್ಜಿ-ಅವ್ವನಾಗೇ ವರದಿಯಾಗುತ್ತಾಳೆ. ದತ್ತು ಮಗನಿಂದ ಪಡೆಯಲಾಗದ ಸುಖವನ್ನು ಮೊಮ್ಮಗನಿಂದ ನಿರೀಕ್ಷಿಸಿದ ಈ ಅವ್ವ 'ಕೀಲು ಸಮುದ್ರಕ್ಕೂ ದೋಣಿ ಬಿಟ್ಟು ಮೊಮ್ಮಗನನ್ನು ಬೆಳೆಸಿದಳು. ಈ ಕವನದಲ್ಲಿ ಅಜ್ಜಿ-ಅಪ್ಪ ಮೊಮ್ಮಗ ಇವರ ಚಿತ್ರ ಸುಂದರವಾಗಿ ಮೂಡಿದೆ.

'ಪ್ರೀತಿ ಸೀಮೆಯ ದಾಖಲಾತಿಗಳು ನೆನಪಿನಷ್ಟು ಪವಿತ್ರವಲ್ಲ'ವೆನ್ನುವ ಎರಡೂ ಸಂಕಲನಗಳ ಕಡೆಯ ಬಾನದಲ್ಲಿನ ಆಶಯ –

ಉರಿದು ಸೀಯದೆ ಇರಲಿ
ವರ್ತಮಾನದ ಹಾಳೆ
ಕಮರಿ ಹೋಗದೆ ಬರಲಿ
ಎದೆಯ ತುಂಬಿದ ಬಿತ್ತ.

★

'ಸೊಲ್ಲು ಫಲವಾಗಿ' ಸಂಕಲನದ ಮೊದಲ ಭಾಗ 'ಜೋಗಿ' ಸಾಧನೆಯ ಹಾದಿಯನ್ನು ವಿವರಿಸುತ್ತ ಹೋದರೆ, 'ಜೋಳಿಗೆ ತುಂಬಿ' ಭಾಗ ಸಿದ್ಧಿಯೆ ವಿವಿಧ ಮೊಗ್ಗಲು 'ಆತ್ಮಕಥನ'ದೊಂದಿಗೆ ಹದವಾದ ಕಾವ್ಯ ಕ್ರಿಯೆಯನ್ನು ವಿವರಿಸುತ್ತ ಹೋಗುತ್ತದೆ. 'ಒಲವೆಂಬುದೇ ವಿಸ್ಮಯ, ಬೆದಕಿದರೆ ಬೆಟ್ಟ ಬಯಲು', 'ಉತ್ತುಬಿತ್ತದ ಹೊಲದಲ್ಲಿ ಪ್ರೀತಿ ಮೊಳೆದತುದ್ದು ಸಹಜ'


ಹೆಜ್ಜೆ ಗೆಜ್ಜೆಯ ಗತಿಗೆ
ಜೀವ ನಾದದ ನವಿರು
ಸಂತೆ ಬದುಕಿನ ಜತೆಗೆ
ಏಕತಾರಿಯೆ ತವರು

ವ್ಯಕ್ತಿ ಚಿತ್ರಣದಲ್ಲಿ ಸಮಷ್ಟಿ ಸಂಬಂಧ ಕಾಣುವ ತಂತ್ರಗಾರಿಕೆ ಸಾಹಿತ್ಯದಂತಹ ಸೃಷ್ಟಿ ಕ್ರಿಯೆಯಿಂದ ಮಾತ್ರ ಸಾಧ್ಯ ಅನ್ನಿಸುತ್ತದೆ. ಶ್ರೀ ಸಿದ್ದರಾಮಯ್ಯ ಅವರ ಕಾವ್ಯದಲ್ಲಿ ವ್ಯಕ್ತಿಚಿತ್ರಣ ಒಂದು ಪ್ರಮುಖವಾಗಿ ಕಂಡ ಅಂಶವಾಗಿದೆ.


'ಅಜ್ಜ'ಯನ್ನು ಓದುತ್ತಿದ್ದ ಹಾಗೆ ಲಂಕೇಶರ ಅವ್ವ ನೆನಪಾಗುತ್ತಾಳೆ. 'ವೀಚಿ ಅರವತ್ತು'ದಲ್ಲಿ ಕವಿ, ಸಾಹಿತ್ಯವಲಯದ ಅಪೂರ್ವ ಚಾರಕರಾಗಿ ಕಾವ್ಯ ಯೋಗದ ವಿವಿಧ ಮಜಲುಗಳನ್ನು ಸ್ನೇಹಪೂರ್ವಕವಾಗಿ ಪರಿಚಯಿಸುತ್ತಾರೆ.

'ಹಾಲು ಕರೆಯುವ ತಳಿಗೆ ಸಾವಿರದ ರಸ ಬಯಕೆ, ಬಂದುಣುವ ಬಂಡುಣಿಗೆ ಪರವನಿಳೆ ಗೆಳೆತರುವ ಬಾವುಣಿಕೆ' ವೀಚಿಯವರ ವ್ಯಕ್ತಿತ್ವ ಕಡೆಯುವ ಸಾಲುಗಳು. ಕವಿಯ 'ಅಪ್ಪ' ವಿವಿಧ ಕವನಗಳಲ್ಲಿ ವಿವಿಧ ರೂಪ ಪಡೆದ ಕವನಗಳು ಎರಡೂ ಸಂಕಲನಗಳಲ್ಲೂ ಇವೆಯಲ್ಲದೆ, ಅಪ್ಪ ಜೋಗಿ ಬಾ, ಸೊಲ್ಲು ಫಲವಾಗಿ, ಕಾಡುವ ಜೋಗಿ, ಉಯಿಲು, ಆಸ್ಪತ್ರೆ ಕನಸಿನಲ್ಲಿ ಜೋಗಿ, ಪ್ರೀತಿ ನೇತ್ರ – ಇವಲ್ಲದೆ ಇತರ ಕವನಗಳಲ್ಲೂ ಎಂ.ಎಫ್. ಹುಸೇನ್‌ರ ಎಲ್ಲ ಚಿತ್ರಗಳಲ್ಲೂ ತಲೆಹಾಕುವ ಕುದುರೆಯ ಹಾಗೆ ಕಾಣುತ್ತಿರುತ್ತಾನೆ.

ತತ್ವಪದಗಳ ಸೊಲ್ಲು, ಮಧುರ ಚನ್ನರ ಮಾಧುರ್ಯ ಕಾವ್ಯದ ಸಹಜ ತುಡಿಗಳಿಂದಾಗಿ ಶ್ರೀ ಎಸ್.ಜಿ. ಸಿದ್ದರಾಮಯ್ಯ ಅವರು ಸದ್ಯದ ಸಂದರ್ಭದಲ್ಲಿ ಅಭ್ಯಾಸ ಮಾಡಬೇಕಾದ ಮುಖ್ಯ ಕವಿಯಾಗುತ್ತಾರೆ.



ಹೊಂಬಾಳಮ್ಮನ ಪೇಟೆ, ಮಾಗಡಿ - ೫೬೨ ೧೨೦
ದೂರವಾಣಿ : ೭೭೪೫೬೨೩



ಶಬ್ದ ಸೂತಕಕ್ಕೆ ಸಂಜೀವಿನಿ

ಎಸ್.ಜಿ. ಸಿದ್ದರಾಮಯ್ಯನವರ 'ಅವಳೆದೆಯ ಜಂಗಮ' ಕೃತಿಯನ್ನು ಗೆಳೆಯರೊಟ್ಟಿಗೆ ಓದಿ ಸುಖಿಸಿದ ಹೊತ್ತಲ್ಲೇ ಅವರ ಒಂದಿಷ್ಟು ಕವಿತೆಗಳನ್ನು ಪತ್ರಿಕೆಗಳಲ್ಲಿ ಓದಿ ಚರ್ಚಿಸಿದ್ದುಂಟು. ಈಗ ಅವರ ಎರಡು ಕೃತಿಗಳಾದ ಮರುಜೇವಣೆ ಮತ್ತು 'ಕರೆ ಬಳಗ' ಕವನ ಸಂಕಲನದ ಬಗ್ಗೆ ಬರೆಯುವ ಜವಾಬ್ದಾರಿಯನ್ನು ಸಂಚಯದ ಡಿ.ವಿ. ಪ್ರಹ್ಲಾದ್ ನನಗೆ ವಹಿಸಿದ್ದಾರೆ.

ಎರಡೂ ಸಂಕಲನಗಳನ್ನು ಇಡಿಯಾಗಿ ಓದಿದ ಮೇಲೆ ಸಿದ್ಧರಾಮಯ್ಯನವರ ಕಾವ್ಯ ಪ್ರತಿಭೆ ಮತ್ತು ಅವರು ಬಳಸುವ ಭಾಷೆ ನನಗೆ ಬಹಳವಾಗಿ ಕಾಡಿತು. ಒಂದೆಡೆ ಅನುಭಾವದ ನೆಲೆಗಟ್ಟು, ಇನ್ನೊಂದೆಡೆ ವಚನಗಳ ಬಳುವಳಿ, ಮತ್ತೊಂದೆಡೆ ಜಾನಪದ ಸೊಗಡನ್ನು ಸಂಕಲನದುದ್ದಕ್ಕೂ ಹರಿಬಿಟ್ಟಿದ್ದಾರೆ.

ಕಾವ್ಯದಲ್ಲಿ ಜಾನಪದ ಗುಣಗಳನ್ನು ಕಂಬಾರರ ನಂತರ ಶಕ್ತಿಯುತವಾಗಿ ಬಳಸುತ್ತಿರುವವರಲ್ಲಿ ಸಿದ್ದರಾಮಯ್ಯನವರು ಪ್ರಮುಖರು. ಸಂಕಲನದ ಮತ್ತೊಂದು ಗಮನಿಸಬೇಕಾದ ಅಂಶವೆಂದರೆ ಭಾಷೆಯದ್ದು. ಅದಕ್ಕೆ ಕಥನ ಗುಣವಿದೆ.

ಗೊತ್ತಿರುವ ಒಂದಷ್ಟು ಶಬ್ದಗಳಲ್ಲಿ ಕಾವ್ಯ ಕಟ್ಟಿ ಶಬ್ದ ಸೂತಕ ಮಾಡುತ್ತಿರುವವರ ಮಧ್ಯೆ ಸಿದ್ಧರಾಮಯ್ಯನವರ ಕಾವ್ಯ ನಿಜಕ್ಕೂ ಫಲವತ್ತಾದ ಕಪ್ಪು ನೆಲ.

ಸಂಕಲನಗಳ ಉದ್ದಕ್ಕೂ ಪುನರಾವರ್ತನೆಯಾಗುವ ಶಬ್ದಗಳು ಎರಡೇ 'ಜೋಗಿ-ಜಂಗಮ'. ಸಾಹಿತ್ಯ ಚರಿತ್ರೆಯಲ್ಲಿ ಇವೆರಡೂ ಮಾನವೀಯ ಪಾತ್ರಗಳು. ಹಾಗೆ ನೋಡಿದರೆ, ಅವರ ಸಂಕಲನದ ಹೆಸರುಗಳಾದ 'ಕರೆಬಳಗ', 'ಮರುಜೇವಣೆ' (ಸಂಜೀವಿನಿ), 'ಅವಳೆದೆ ಜಂಗಮ', 'ಸೊಲ್ಲುಫಲ', ಅಷ್ಟೇಕೆ ಅವರ ವಿಮರ್ಶಾ ಸಂಕಲನದ ಹೆಸರು ಕೂಡ 'ಕೋಡಿಲ್ಲವಾಗಿ' ಇವೆಲ್ಲವೂ ಶುದ್ಧ ಮಾನವೀಯ ಹೆಸರುಗಳು.



ಉಗಮ ಶ್ರೀನಿವಾಸ

ಈ ಮಾನವೀಯ ಅಂಶಗಳನ್ನು ಸಾಕ್ಷೀಕರಿಸುವ ಕವಿತೆಗಳು ಸಂಕಲನದುದ್ದಕ್ಕೂ ಇದೆ. ಅವರ ಕಾವ್ಯ ಅಂತಃಕರಣ ತಟ್ಟುವ ಸಮಾಧಾನಪಡಿಸುವ, ಜೋಗುಳ ಹಾಡುವ ಗುಣವನ್ನು ಹೊಂದಿದೆ.

'ಕರೆಬಳಗ' ಸಂಕಲನದ ಮಹತ್ವದ ಕವಿತೆ 'ನತ್ತು'. ಸಂಗೀತದ ಗುಣವಿರುವ ಈ ಕವಿತೆ ಏನನ್ನೂ ಮುಚ್ಚಿಡುವುದಿಲ್ಲ, ಏನನ್ನೂ ಬಿಚ್ಚಿಡುವುದಿಲ್ಲ.

ನತ್ತು ನತ್ತು ನತ್ತು ಶಂಕರಿ ಮೋಹದ ನತ್ತು
ಹಾರುವರ ಕೇರ್‍ಯಾಗೆ ಕೇಳುವರಿಲ್ಲದೆ ಇತ್ತು
ನಾಗಲಿಂಗನ ಕೂಡೆ ಹುಚ್ಚು ಗೊಟ್ಟ ತಾನಾಡಿ
ಗುಡಿ ಗುಡಿ ಗುಂಡಿಗೆ ಬಡಿದಾಡುತ್ತಿತ್ತು
ಸಾಬಿಯ ಕೈಯಾಗೆ ಸುಖನಿದ್ರೆಯೊಳಗಿತ್ತು
ನತ್ತು ನತ್ತು ನತ್ತು ಅಭಯಂಕರಿ ತಾನೆನಿಸಿತ್ತು.

ಝೆನ್‌ನ ಗುಣವಿರುವ ಈ ಕವಿತೆಗೆ ಅರ್ಥ ಕೊಟ್ಟಷ್ಟೂ ಸೀಮಿತವಾಗುತ್ತದೆ. ಅಲ್ಲದೆ, ಶಬ್ದವೇ ಸೂತಕವಾಗುತ್ತದೆ. ಖಾಸಗಿಯಾಗಿ, ಏಕಾಂತವಾಗಿ ಓದಿ ನಮ್ಮ ಮನಸ್ಸಿನಲ್ಲಾಗುವ ಪರಿಣಿತವನ್ನು ಗಮನಿಸಬೇಕು. ಲೌಕಿಕದಲ್ಲಿ ಅಲೌಕಿಕ ಸಂವೇದನೆ ಮೂಡಿಸುವ ಕವಿತೆಯಿದು.

ಹಿಂದೊಮ್ಮೆ ಹಂಪಿಯಲ್ಲಿ ಸ್ವತಃ ಕವಿಯಿಂದಲೇ ಕೇಳಿಸಿಕೊಂಡಿದ್ದ ಈ ಕವಿತೆ ನನಗೆ ಈಗ ಐದಾರು ಬಾರಿ ಓದಿದರೂ ಹೊಸ ಸ್ಪರ್ಶ ನೀಡುತ್ತಲೇ ಇದೆ.

ಈ ಸಂಕಲನದ ಮತ್ತೆರಡು ಪ್ರಮುಖ ಕವಿತೆ 'ಹಸ್ತ ಮಸ್ತಕ ಯೋಗ' ಮತ್ತು 'ಅಂಗಳ ಬೆಳಗಿತ್ತು'. ಈ ಎರಡೂ ಕವಿತೆಗಳಲ್ಲಿ 'ಗುರುವೇ' ಕೇಂದ್ರ. ಹಾಗೆ ನೋಡಿದರೆ ಎರಡೂ ಕವಿತೆಗಳಿಗೂ ಸಾಕಷ್ಟು ಸಾಮ್ಯ ಇದೆ.

ಮನೆಯಂಗಳಕ್ಕೆ ಎಂದೂ ಬಾರದ ಗುರುವು
ಕೆರೆಯಂಗಳಕ್ಕೆ ಹುಡುಕಿ ಬಂದನೆ ಗುರುವು
ಮುಂಡಾಸು ತಲೆಗಿಲ್ಲ ಮೈಯ್ಯಾಗೆ ಅರಿಬಿಲ್ಲ
ದಿಗಂಬರವನಲ್ಲ ದರವೇಶಿ ನನ ಗುರುವು

ಹಿಡಿಮಣ್ಣು ತಕ್ಕೊಂಡು ಬರಿಮೈಗೆ ಬಳಕೊಂಡ
ಸುತ್ತೆಲ್ಲ ಸುರಿದಿತ್ತು ಬಂಗಾರ ಭಸುಮ
ಕತ್ತಾಲ ಒಡಲಿಂದ ನೊಣ ನೊರಜು ಹಾರಿತ್ತು
ಬಂಗಾರ ಸಿಗನಿಲ್ಲ ಬಡಿವಾರ ಮರೆದಿತ್ತು

(ಹಸ್ತಮಸ್ತಕ ಯೋಗ)

ಬೆಳಕು ಹೊತ್ತವರ ಕಾಲು ಯಾವಾಗಲೂ ಕತ್ತಲು ಎಂಬಂತೆ ಬರಿ ಮೈಗೆ ಹಿಡಿಮಣ್ಣು ಬಳಕೊಂಡ ಗುರುವಿನ ಸುತ್ತೆಲ್ಲ ಇರುವುದು ಬಂಗಾರ ಭಸುಮ. ಮುಂಡಾಸು ತಲೆಗಿಲ್ಲ, ಮೈಯ್ಯಾಗೆ ರವಷ್ಟು ಬಟ್ಟೆಯಿಲ್ಲದ ಇಂಥ ಗುರುವನ್ನುದಿಗಂಬರ ಎಂಬ ಧರ್ಮದ ಚೌಕಟ್ಟಿಗೆ ಬಂಧಿಸದ ಸಿದ್ದರಾಮಯ್ಯ ಗುರುವನ್ನು 'ದರವೇಶಿ' ಎಂದು ಸಂಬೋಧಿಸುತ್ತಾರೆ.

ಹಾಗಾಗಿ 'ಗುರು' ಎಂಬ ಪಾತ್ರ ಇಲ್ಲಿ ಯಾವುದೋ ಧರ್ಮದ ಅಧಿಪತಿಯಾಗಲಿ ಅಥವಾ

ಸಂತನೂ ಆಗದೆ ನಮ್ಮ ನಿಮ್ಮೊಳಗೊಬ್ಬನಿರುವ ಸರಳ ಮಾನವೀಯ ಪಾತ್ರವಾಗಿ ಕಾಣುತ್ತದೆ. ಹೀಗೆ ಕಾಣಿಸುವುದು ಕೂಡ ಅವರ ಕಾವ್ಯದ ವಿಶೇಷ

ಈ ಮೇಲೆ ಪ್ರಸ್ತಾಪಿಸಿದ ಹಾಗೆ ಇಹದಲ್ಲಿ ಪರವನ್ನು ಆವಾಹಿಸಿಕೊಳ್ಳುವ ಕ್ರಿಯೆ ಈ ಕವಿತೆಯಲ್ಲಿದೆ. ನಿಜದ ಗುರುವಿಗೆ ಧರ್ಮದ ಗೊಡವೆ ಏಕೆ? ಎಂಬ ಪ್ರಶ್ನೆಯನ್ನು ಈ ಕವಿತೆ ಹುಟ್ಟುಹಾಕುತ್ತದೆ.

'ಹಸ್ತಮಸ್ತಕ ಯೋಗ' ಕವಿತೆಯ ಮುಂದಿನ ಘಟ್ಟ ಅಂಗಳ ಬೆಳಗಿತ್ತು. ಇಲ್ಲಿ ಗುರುವನ್ನು ಎರಡು ಸ್ಥಿತಿಯಲ್ಲಿ ಕಾಣಬಹುದಾಗಿದೆ.

(೧)

ಗುರುವಿನ ಮನೆಗೆ
ಗುರುವ ನೋಡ ಬಂದ ॥ ಪ ॥

(೨)

ಗುರುವಿನ ಮನೆಗೆ
ಅರಿವು ನೋಡ ಬಂದ ॥ ಅಪ ॥ (ಅಂಗಳ ಬೆಳಗಿತ್ತು)

ಗುರುವಿನ ಮನೆಗೆ ಬರುವ ನೋಡಲು ಬಂದಾಗ ನಿತ್ಯ ನಾರಕದ ಬೇಗುದಿಯಲ್ಲಿ ಗುರುವಿನ ಜೀವ ಕಲಮಲಿಸಿತ್ತು. ಅದೇ ಗುರುವಿನ ಮನೆಗೆ ಅರಿವು ನೋಡ ಬಂದಾಗ ಗುರುವಿನ ನೋಟ ಕೂಟವಾಯ್ತು. ಗೊತ್ತು ಹರಿದು ಬಂತು ಅರಿವಿನ ಹಸ್ತಾಸ್ಪರ್ಶವಾಯ್ತು.

'ಕರೆ ಬಳಗ' ಸಂಕಲನ ಓದುತ್ತಿದ್ದಂತೆ ನನಗೆ ಮೇಲಿಂದ ಮೇಲೆ ಅನ್ನಿಸುವುದು ಒಂದೇ. 'ಝೆನ್' ಗುಣವಿರುವ ಕವಿತೆಗಳು. ಈ ಮೇಲಿನ ಕವಿತೆಯೂ ಅದಕ್ಕೆ ಹೊರತಾಗಿಲ್ಲ. ಇಲ್ಲಿ 'ಗುರುವು' ಪರಂಪರೆಯಲ್ಲಿ ಪುರಾಣದಲ್ಲಿ ಪ್ರಭೆ ಸೂಸುವ ಗುರು ಖಂಡಿತಾ ಅಲ್ಲ. ಅವನು ಯೋಗಿಯೂ ಅಲ್ಲ ಭೋಗಿಯೂ ಅಲ್ಲ. ದಿಗಂಬರನೂ ಅಲ್ಲ. ಅಪ್ಪಟ ದರವೇಶಿ ನನ ಗುರುವು ಎಂಬುದೇ ಸ್ಪಷ್ಟವಾಗುತ್ತದೆ.

ಕವಿ ಲಕ್ಷ್ಮೀಪತಿ ಕೋಲಾರ ಪ್ರಸ್ತಾಪಿಸಿರುವ ಹಾಗೆ ಸಿದ್ಧರಾಮಯ್ಯನವರ ಕವಿತೆಗಳನ್ನು 'ತುಂಬಿ' ಕೊಂಡು ಓದಬೇಕು ಹಾಗೂ 'ಖಾಲಿಯಾಗಿಯೂ ಓದಬೇಕು.'

ಅಹಲ್ಯೆಯ ಸ್ವಗತ, ಬುದ್ಧ ನಗು, ಬಯಲ ಜೋಗಿ, ದೀಪ, ಗಿಡುಗ ಮತ್ತು ಎರೆ ಹುಳು ಹೀಗೆ ಸಂಕಲನದುದ್ದಕ್ಕೂ ಕಾಡುವ ಕವಿತೆಗಳಿವೆ.

'ಕರೆ ಬಳಗ' ಸಂಕಲನದ ಹಾಗೆ ಮರುಜೇವಣೆಯಲ್ಲೂ ಮೇಳೈಸಿರುವುದು ಭಾಷೆ ಮತ್ತು ಹಾಸುಹೊಕ್ಕಿರುವುದು ಜಾನಪದ ನುಡಿಗಟ್ಟು. ಮೂಲತಃ ಸಿದ್ಧರಾಮಯ್ಯನವರು ಧ್ಯಾನಸ್ಥ ಕವಿಯಾದರೂ ಅವರ ಕವಿತೆಗಳು ಯಾವ ಚೌಕಟ್ಟಿಗೂ ಬಂಧಿಯಾಗುವುದಿಲ್ಲ. ಆಧುನಿಕತೆ, ಆಧ್ಯಾತ್ಮ ಹಾಗೂ ಕರುಳಸಂಬಂಧಗಳು ಕವಿಗೆ ಕಾಡುತ್ತದೆ, ಕಾಣುತ್ತದೆ. ಸಂಕಲನದ ಬಹು ಮುಖ್ಯ ಕವಿತೆ 'ಕುಲದೇವಿ' ಏಕಲವ್ಯನ ಕುರಿತಾದ ಈ ಕವಿತೆ ಗಾಢವಾಗಿ ನಮ್ಮನ್ನು ತಟ್ಟುತ್ತದೆ.

ಕರಿಕಲ್ಲು ದೊಣೆ ಸಾಲು ಹುಲಿಗವಿಯ
ತ್ರಬಸಿ ಗುಡ್ಡಗಳಲ್ಲಿ ಎಲ್ಲೆಂದರಲ್ಲಲ್ಲಿ (ಕುಲದೇವಿ)

ಹೀಗೆ ದೊಡ್ಡ ಕ್ಯಾನ್ವಾಸ್‌ನಿಂದ ಹೊರಡುವ ಕವಿತೆ —

ಎಂತದ್ದೋ ಗೊಂಬೆ ಮಾಡಿ
ಓಚಯ್ಯ ಓಚಯ್ಯ ಎಂದು ಹಾಡಿ
ಹಗಲೂ ಇರಳೂ ತಿನ್ನುಣ್ಣೋದು ಮರೆತು
ಏನು ಕಲಿಕೆಯೊ ಶಿವನೆ

ಎಂಬಲ್ಲಿಗೆ ಖಾಸಗಿ ಚೌಕಟ್ಟನ್ನು ನಿರ್ಮಾಣ ಮಾಡುತ್ತದೆ. ದೀರ್ಘವಾದ ಈ ಕವಿತೆ ಪುರಾಣದ ಏಕಲವ್ಯನ ಮಾದರಿಯ ಜತೆಗೆ ಆಧುನಿಕ ಯುಗದಲ್ಲೂ ಇರುವ ಏಕಲವ್ಯ ಮಾದರಿ ಪಾತ್ರಗಳನ್ನು ಗುರುತಿಸಬಹುದು.

ಏಕಲವ್ಯ ಇಲ್ಲಿ ವ್ಯಕ್ತಿಯೂ ಹೌದು, ಸಮಾಜವೂ ಹೌದು, ಅಷ್ಟೇಕೆ ಇಡೀ ಭೂಮಂಡಲಕ್ಕೇ ಏಕಲವ್ಯನೇ ಪ್ರತಿನಿಧಿ.

ಕಿಚ್ಚಾಗಿ ಕನಸು ಸುಡುತಿರುವುದೆನ್ನ
ಎದೆಯಾಳ ತುಂಬ ಕರಿನೆರಳ ಭಯವೋ

ಇದು ಏಕಲವ್ಯನ ಸಮಸ್ಯೆಯೂ, ಕವಿಯ ಸಮಸ್ಯೆಯೂ ಅಷ್ಟೇಕೆ ಇಡೀ ಸಮುದಾಯದ ಸಮಸ್ಯೆಯೂ ಅಡಗಿದೆ. ಆಧುನಿಕತೆಯ ಆಕ್ರಮಣಗಳು ಪದ್ಯದುದ್ದಕ್ಕೂ ಇದೆ. ಎಲ್ಲದರಿಂದ ರೋಸಿದ ಕವಿಯು ಪದ್ಯದ ಕೊನೆಯಲ್ಲಿ—

ಎಲ್ಲಿರುವೆ ನನ್ನವ್ವೆ
ಮರುಜೀವಣೀ ಅಡ್ಡಿಕೆಯೇ
ಅಡ್ಡದಾರಿಗೆ ಬಿದ್ದ ಕರುಳ
ಕಾಯುವ ಅರಿವೇ

ಎಂಬ ಉದ್ಘೋಷದೊಂದಿಗೆ ಮುಗಿಯುವ ಈ ಸಾಲುಗಳಲ್ಲಿ ಪ್ರಾರ್ಥನೆಗಿಂತ ದೈನ ಭಾವ ಇದೆ. ಇದು ಸಂಜೀವಿನಿಗೂ ಮಿಗಿಲಾದ ಗುಣ. ಕರೆಬಳಗ ಸಂಕಲನದಲ್ಲಿ ಜೋಗಿ-ಜಂಗಮರು ಪುನರಾವರ್ತನೆಯಾದರೆ ಮರುಜೀವಣೆಯಲ್ಲಿ 'ಕರುಳಬಳ್ಳಿ' ಎನ್ನುವ ಶಬ್ದ ಮೇಲಿಂದ ಮೇಲೆ ಬರುತ್ತದೆ. ಶಬ್ದ ಬೇರೆಯಾಧರೂ ಭಾವ ಮಾತ್ರ ಒಂದೇ.

ಸಂಕಲನದಲ್ಲಿ ನನಗೆ ಬಹು ಮುಖ್ಯವಾಗಿ ಕಾಡಿದ್ದು 'ಅಮೃತಮತಿ', 'ಕುಂತಿ' ಮತ್ತು 'ಅಂಬಿಕೆ' ಕವಿತೆಗಳು. ಪುರಾಣದಲ್ಲಿ ಈ ಮೂರು ಪಾತ್ರಗಳು ಸಾಕಷ್ಟು ನೊಂದಿವೆ.

ರಾಜ ತೇಜದ ಬೀಜ ಮೂಲವು
ತಂಗೀ ಗೊತ್ತಿತ್ತೇ ನನಗೆ ಗೊತ್ತಿತ್ತು
ಗುರುವಿನ ಮಂತ್ರ ರಾಜನ ತಂತ್ರ
ಕಳ್ಳುಬಳ್ಳಿಯ ವಂಚನೆ ಸೂತ್ರ
ಹೆತ್ತ ಒಡಲಿಗೆ ಮಡಿಲೇ ಬರಿದು
ಬರಿದಾ ಎದೆಗೆ ಬಣ ಬಣ ನೋವು
ಹೊಕ್ಕುಳ ಬಳ್ಳಿಯ ಸೂತಕ ಸಂಕಟ
ಹೇಳಿ ಕಳೆಯದ ಮಾಯದ ಬಾವು (ಕುಂತಿ)

ಎಸ್.ಜಿ. ಸಿದ್ಧರಾಮಯ್ಯನವರು ಪಾತ್ರದ ಆಳಕ್ಕಿಳಿದು ಅರ್ಥ ಹೊರಡಿಸುತ್ತಾರೆ. ಇಲ್ಲಿ 'ತಂಗಿ' ಎನ್ನುವ ಶಬ್ದ ಪ್ರಯೋಗ ಅಂತಃಕರಣ ತಟ್ಟಿಬಿಡುತ್ತದೆ.

ಪುರಾಣದ ಈ ಪಾತ್ರಗಳಿಗೆ ಒಂದು ರೀತಿಯ ಚೌಕಟ್ಟಿದೆ. ಅಂಥ ಪಾತ್ರವನ್ನು ತಾನೇ ನೋಡಿದ ತಂಗಿಯಾಗಿ ಸಂತೈಸುತ್ತಾರೆ. ಇದು ಜೋಗಿಯ ಗುಣ. ಹಾಗೆಯೇ 'ಶಬ್ದ ಸೂತಕ', 'ಬೀಳು' ಮುಂತಾದ ಕವಿತೆಗಳು ತಟ್ಟಿದರೂ ಅದಕ್ಕೆ ಅರ್ಥದ ಬಂಧ ಹಾಕುವ ಮನಸ್ಸು ಮೂಡುವುದಿಲ್ಲ.


ಮೇಲೆ ಹೇಳಿರುವ ಹಾಗೆ ಸಿದ್ಧರಾಮಯ್ಯನವರ ಕವಿತೆಗಳಲ್ಲಿ ಮೇಳೈಸುವುದು ಭಾಷೆಯೇ. ಒಮ್ಮೊಮ್ಮೆ ಇದು ನವ್ಯ ಮಾದರಿ ಪಳೆಯುಳಿಕೆಗಳು ಎಂಬ ಅನುಮಾನ ಮೂಡಿದರೂ ಭಾವ ಮಾತ್ರಸಂಪೂರ್ಣ ಬೇರೆಯೇ.

ಕೊನೆಯದಾಗಿ ಸಿದ್ಧರಾಮಯ್ಯನವರ ಕವಿತೆಗಳು ಏಕತಾರಿ ನುಡಿಸುತ್ತ ಹೊರಡುವ ಜೋಗಿಯ ಹಾಗೆ. ಒಂದಿಡಿ ವಾರ ಅವರ ಕವಿತೆಗಳ ಜತೆಗಿದ್ದ ನನಗೆ ನನ್ನೊಳಗೂ ಒಂದಿಷ್ಟು 'ಜೋಗಿ'ಯ ಗುಣ ದಕ್ಕಿದ್ದಕ್ಕಾಗಿ ಕವಿಗೆ ನಮಸ್ಕರಿಸುತ್ತೇನೆ.

ಉಪ ಸಂಪಾದಕ, 'ಕನ್ನಡಪ್ರಭ', ನಂ. ೧, ಕ್ವೀನ್ಸ್ ರಸ್ತೆ
ಇಂಡಿಯನ್ ಎಕ್ಸ್‌ಪ್ರೆಸ್ ಬಿಲ್ಡಿಂಗ್, ಬೆಂಗಳೂರು - ೧



ದೇಸಿ ಎಂಬ ಅಪ್ರಮಾಣು



ಜಾನಪದ ಮತ್ತು ವಚನ ಸಂಸ್ಕೃತಿಯ ನೆಲಮೂಲದಲ್ಲಿ ಬೇರು ಬಿಟ್ಟಂತೆ ಕಾವ್ಯರಚನೆಗೆ ತೊಡಗಿರುವ ನನಗೆ 'ಅಡಿಗರ ಕಾವ್ಯ' ಒಂದು ಕಾಲಘಟ್ಟದವರೆಗೆ ಕಗ್ಗಂಟಾಗಿತ್ತು. ಕಷ್ಟಸಾಧ್ಯವೆನ್ನಿಸಿಕೊಂಡ ನಂತರದಲ್ಲಿ ಆ ಅನುಭವ ಪ್ರಪಂಚದ ಅನುಸಂಧಾನ ಬೌದ್ಧಿಕ ವಿಸ್ತರಣೆಯ ಆಯಾಮದಲ್ಲಿ ಆಪ್ತವಾಯಿತು. ಈ ಕಗ್ಗಂಟುತನಕ್ಕೆ ಅಲ್ಲಿನ ಪೌರಾಣಿಕ ಪ್ರತಿಮೆಗಳು ಕಾರಣವಲ್ಲ; ವೈದಿಕ ಯಜ್ಞವೇದೀ ಮೂಲದ ಶಾಸ್ತ್ರಸಂಬಂಧೀ ಪರಿಭಾಷೆ, ಆಚರಣೆ, ಚಿಂತನೆ ಇತ್ಯಾದಿ ಅಂಶಗಳು ಕಾರಣವಾಗಿದ್ದವು. ಈ ಹೊತ್ತು ನನ್ನ ಕಾವ್ಯವನ್ನು 'ಸೀಗೆ ಮಳೆ' ಎಂದು ಕರೆಯುವ ಒಂದು ಓದುಗ ವರ್ಗವೂ ಇದೆ. ನನಗೆ ಅಥವಾ ನನ್ನಂಥ ಗ್ರಾಮ್ಯ ಜಗತ್ತಿನ ದೇಸೀ ಸಂಸ್ಕೃತಿಯ ಓದುಗ ವರ್ಗಕ್ಕೆ ಅಡಿಗರಂಥವರು ಕಗ್ಗಂಟಾದರೆ ಇದೇ ದೇಸೀ ಸಂಸ್ಕೃತಿಯ ನೆಲಮೂಲದ ಪರಿಭಾಷೆಯ ನನ್ನಂಥವರ ಕಾವ್ಯ ಕೂಡ ನಗರ ಪ್ರಜ್ಞೆಗಳಿಗೆ 'ಸೀಗೆ ಮಳೆ'ಯಾಗುವುದು ಸಹಜವಿದೆ. ನಾನು ಇದನ್ನು ದೋಷವೆಂದು ಕರೆಯುವುದಕ್ಕಿಂತ ನಮ್ಮ ಕನ್ನಡ ಭಾಷೆಯ ಕನ್ನಡಂಗಳ ಗುಣಬಾಹುಳ್ಯವೆಂದು ಪರಿಭಾವಿಸುತ್ತೇನೆ. ಪ್ರಮಾಣು ಭಾಷೆಯ ಏಕಮಾದರಿ ಯಾಂತ್ರಿಕತೆಗಿಂತ ಅಪ್ರಮಾಣು ಗುಣದ ಉಪಭಾಷಿಕ ಅನೇಕತೆಯ ವೈವಿಧ್ಯದಲ್ಲಿ ವಿಪುಲಗೊಳ್ಳುವ ಕನ್ನಡ ಸರಸ್ವತಿಯ ಶಕ್ತಿ ವಿಶೇಷವೆಂದು ಸಂಭ್ರಮಿಸುತ್ತೇನೆ. ಆದರೆ ಮುಖ್ಯಪ್ರಶ್ನೆ ಇರುವುದು ಸಂವಹನದ ತೊಡಕನ್ನು ಕುರಿತಾಗಿ. ಈ ಸಂವಹನದ ತೊಡಕಿಗೆ ಕಾರಣವಾಗಿರುವುದು ಅನುಭವ ಜಗತ್ತೋ ಅಥವಾ ಅಭಿವ್ಯಕ್ತಿ ತಂತ್ರವೋ? ಬೇಂದ್ರೆ, ಕುವೆಂಪು ಅಂಥವರು ಎದುರಿಸಿರದ ಈ ಸಂವಹನದ ತೊಡಕು ಕೆ.ಎಸ್.ನ., ಜಿ.ಎಸ್.ಎಸ್. ಅಂಥವರು ಎದುರಿಸಿದ ಈ ಪ್ರಶ್ನೆ ಅಡಿಗರು ಹಾಗೂ ನನ್ನಂಥವರಿಗೆ ಏಕೆ ಎದುರಾಯಿತು? ಈ ತೊಡಕು ಕುಸುಬಾಲೆಯನ್ನೂ ಬಿಡಲಿಲ್ಲ. ಕುಸುಮಬಾಲೆಯನ್ನು ಕನ್ನಡಕ್ಕೆ ಅನುವಾದಿಸಬೇಕೆಂಬ ಅತಿರೇಕದ ಹೇಳಿಕೆಗಳವರೆಗೆ ಈ ಸಂವಹನದ ತೊಡಕು ಬೆಳೆದಿದೆ.

ಎಸ್.ಜಿ. ಸಿದ್ಧರಾಮಯ್ಯ

ಅಡಿಗರನ್ನು ಕುರಿತಾಗಿ ನಾನು ಎತ್ತುವ ಈ ತೊಡಕಿನ ಪ್ರಶ್ನೆಯನ್ನು ಸಾರಾಸಗಟಾಗಿ ತಿರಸ್ಕರಿಸುವ ವಿಮರ್ಶಕ ವರ್ಗವೂ ಇದೆ. ಆದರೆ ವಸ್ತುಸತ್ಯ ಒಂದು ವರ್ಗದ ಕಾರಣದಿಂದಾಗಿ ಸುಳ್ಳಾಗುವುದಿಲ್ಲ. ಏನೇ ಇರಲಿ, ಈ ಪ್ರಶ್ನೆ ಗಂಭೀರವಾಗಿ ಆಲೋಚಿಸಬೇಕಾದದ್ದು. ಕಾವ್ಯದ ಅನುಭವ ಕೇವಲ ಅರ್ಥಕ್ಕೆ ಸಿಕ್ಕುವುದಲ್ಲ.

ಹಲವು ಓದಿನ ಅನುಸಂಧಾನದಲ್ಲಿ ಪರಿಭಾವನೆಗೆ ದಕ್ಕುವುದು ಎಂಬ ಉತ್ತರ ಮುಖಿಯನ್ನು ಒಪ್ಪಿಕೊಂಡೂ ಮೇಲಿನ ಪ್ರಶ್ನೆಯನ್ನು ನಾನು ಮತ್ತೆ ಮತ್ತೆ ಹಾಕಿಕೊಳ್ಳುತ್ತೇನೆ. ಆತ್ಮಾವಲೋಕನಕ್ಕಾಗಿ. ಇಷ್ಟಾಗಿಯೂ ಕಾವ್ಯ ರಚನೆ ಎಂಬ ಸೃಜನಕರ್ಮ ನನ್ನೊಳಗೆ ಬೇರೂರಿರುವ ಪರಂಪರೆಯ ಉಸಿರಾಗಿ ಹರಿಯುವುದರಿಂದ ನನ್ನ ನಿಯಂತ್ರಣದಲ್ಲಿದ್ದೂ ನನ್ನನ್ನು ಮೀರಿ ತಾನೇ ತಾನಾಗುತ್ತದೆ. ಈ ಆಗುವಿಕೆ ನಿಸರ್ಗ ಸಹಜ ಪ್ರಜ್ಞಾ ಸೃಷ್ಟಿಯಾಗಿರುವುದರಿಂದ ಇಲ್ಲಿ 'ನಾನು' ಇದ್ದೇನೆ ತ್ರಿಕಾಲಬಂಧಿತ ಸನ್ನೆಯಾಗಿ. ನನ್ನನ್ನು ನಿಮಿತ್ತ ಮಾಡಿಕೊಂಡು ಈ ಪ್ರಜ್ಞಾ ವಿಶೇಷ ತನಗೆ ಬೇಕಾದ ಭಾಷಿಕ ಆಕೃತಿಯನ್ನು ಪಡೆದುಕೊಳ್ಳುತ್ತದೆ. ಇದು ಕಾವ್ಯರಚನೆಯ ಹಿಂದಿನ ನನ್ನ ಅನುಭಾವಿಕ ಅರಿವು.

ನನಗೆ ಕಾವ್ಯದ ತಾಲೀಮು ಕಲಿಸಿದ ಎರಡು ಗರಡಿಗಳ ಬಗ್ಗೆ ಇಲ್ಲಿ ಹೇಳಲೇಬೇಕು. ಒಂದು ನವೋದಯ ಪ್ರಜ್ಞೆಯ ಜಿ.ಎಸ್.ಎಸ್. ಗರಡಿ. ಇನ್ನೊಂದು ಅವಧೂತ ಪ್ರಜ್ಞೆಯ ಶೀರಂ ಗರಡಿ. ಈ ಎರಡೂ ಪ್ರಜ್ಞಾ ಕೇಂದ್ರಗಳು ತಮ್ಮ ಅಂತಃಪ್ರಮಾಣುವಿನಲ್ಲಿ ಅಭಿನ್ನವಾದುವುಗಳೇ. ಅದ್ವೈತಭಾವದಲ್ಲಿ ಋತುಧರ್ಮ ಹಾಗೂ ಜೀವನಧರ್ಮವನ್ನು ಪರಿಭಾವಿಸಿದ್ದವು. ಈ ಎರಡೂ ಪ್ರಜ್ಞಾ ಕೇಂದ್ರಗಳು ನನ್ನನ್ನು ಆಳವಾಗಿ ಪ್ರಭಾವಿಸಿದ ತವರು ನೆಲಗಳು. ಇವುಗಳ ನಡುವೆ ನನ್ನನ್ನು ಹೆಚ್ಚು Disturb ಮಾಡಿದ ಮತ್ತೊಂದು ಕಾವ್ಯ ಜಗತ್ತಿದೆ. ಅದು ನವ್ಯ ಕಾವ್ಯ. ಅಡಿಗರ ಮುಖಂಡತ್ವದಲ್ಲಿ ತನ್ನ ಹಾಸುಬೀಸನ್ನು ಹಬ್ಬಿ ಹರಡಿದಂತೆ ಮಡುವಿನಾಳಕ್ಕೆ ನನ್ನನ್ನು ಸೆಳೆದುಕೊಂಡು ತನ್ನ ಒಳಸುಳಿಯ ಭರಾಟೆ ಭೋರ್ಗರೆತವನ್ನು ನನ್ನ ಅರಿವಿಗೆ ತಂದುಕೊಡುತ್ತಲೇ ಹಲವು ಹೊಸ ಶಕ್ತಿ ಸಂಚಯಗಳನ್ನು ನನಗೆ ಪ್ರಧಾನಿಸಿದ್ದು ಈ ನವ್ಯ ಜಗತ್ತು. ಈ ಅರಿವು ಬೌದ್ಧಿಕ ಬೆಳವಣಿಗೆಯ ಧಾತುವಾಗಿ ಬಂದಿತೇ ಹೊರತು ನನ್ನ ಅನುಭವ ಪ್ರಪಂಚದ ಮೂಲದ್ರವ್ಯವನ್ನು ಇಲ್ಲವಾಗಿಸುವ ಪಾರ್ಥೇನಿಯಂ ಕಳೆಯಾಗಿ ನನ್ನ ಮೇಲೆರಗಲಿಲ್ಲ. ಇದು ಮುಖ್ಯ ವಿಚಾರ. ಏಕೆಂದರೆ ನವ್ಯದ ಭರಾಟೆ ಇದ್ದ ಕಾಲದಲ್ಲಿ ಅದರ ಪ್ರಮುಖ ಮೆಸೇಜ್‌ಗಳ ಮೇಲ್ತೆರೆಯಲ್ಲೇ ಉಳಿದು ಕಾವ್ಯ ರಚಿಸಿ, ಆಗ ಅಬ್ಬರದ ಹೆಸರಾಗಿದ್ದವರು ಹಲವರು ಈಗ ಹೇಳ ಹೆಸರಿಲ್ಲವಾಗಿದ್ದಾರೆ. ಇಂಥವರ ಪಾಲಿಗೆ ನವ್ಯದ ಪ್ರಭಾವ ಪಾರ್ಥೇನಿಯಂ ಕಳೆಯಂತೆ ಆಕ್ರಾಮಕವಾಯಿತು; ಅವರ ನೆಲ ಮೂಲ ಸಂಸ್ಕೃತಿಯ ದ್ರವ್ಯ ವಿಶೇಷವನ್ನೇ ನಾಶಮಾಡಿ ತಾನೇ ತಾನಾಗಿ ವಿಜೃಂಭಿಸಿದ ಪಾರ್ಥೇನಿಯಂ ಮಾರಿಯಾಯಿತು. ಆದರೆ ನನ್ನಂಥವರಿಗೆ ನವ್ಯ ದಿಗ್ಭ್ರಮೆ ಹುಟ್ಟಿಸಿದರೂ ದಿಕ್ಕು ತಪ್ಪಿಸಲಿಲ್ಲ. ನಾನು ನಿಂತ ನೆಲವನ್ನು ಆ ನೆಲದ ಸಂಸ್ಕೃತಿಯನ್ನು ಮರೆಯದ ರೀತಿಯಲ್ಲಿ ನನ್ನ ಮೇಲೆ ಅವಧೂತ ಹಾಗೂ ನವೋದಯ ಪರಂಪರೆಗಳ ಆರೋಗ್ಯಕರ ಪ್ರಭಾವ ಪ್ರೇರಣೆಗಳಾಗಿದ್ದರಿಂದ ನಾನು ದಿಕ್ಕುತಪ್ಪುವ ಪ್ರಮೇಯವೇ ಬರಲಿಲ್ಲ. ಅದಕ್ಕಿಂತ ಭಿನ್ನವಾಗಿ ನವ್ಯದ ಎಲ್ಲ ಧನಾತ್ಮಕ ಅಂಶಗಳಿಗೆ ನನ್ನ ಪ್ರಜ್ಞೆ ಪ್ರತಿಸ್ಪಂದಿಸಿತು. ನನ್ನ ಕಾವ್ಯ ರಚನೆಯ ಮೇಲೆ ಇದು ವಿಶಿಷ್ಟ ಪ್ರಭಾವವನ್ನು ಬೀರಿತು.

ಮತ್ತೊಂದು ಪ್ರಶ್ನೆಯನ್ನು ಇಲ್ಲಿ ಪ್ರಸ್ತಾಪಿಸಲೇಬೇಕು. ಇತ್ತೀಚೆಗೆ ಕನ್ನಡದ ಕೆಲವು ಗಮನಾರ್ಹ ದನಿಗಳ ಕಾವ್ಯದಲ್ಲಿ ಅನುಭಾವದ ಕಡೆಗೆ ತುಡಿಯುವುದು ಹೆಚ್ಚಾಗಿದೆ. ಈ ಕುರಿತು ಕೆಲವರು ಒಂದು ಪ್ರಶ್ನೆ ಎತ್ತುತ್ತಾರೆ. ಇಂದು ಹಿಂದೆಂದಿಗಿಂತ ಹಿಂಸೆ ಭಯೋತ್ಪಾದನೆ, ಶೋಷಣೆ ಜಗತ್ತಿನಲ್ಲಿ ತಾಂಡವ ವಾಡುತ್ತಿದೆ. ಈ ಉರಿಯುವ ಸವಾಲುಗಳಿಗೆ ಬೆನ್ನು ತಿರುಗಿಸಿ, ಅನುಭಾವದ ಬೆನ್ನು ಹತ್ತುವುದು ಎಷ್ಟು ಸರಿ? ಮೇಲ್ನೋಟಕ್ಕೆ ಈ ಪ್ರಶ್ನೆ ಹೌದಲ್ಲವೇ ಅನ್ನಿಸಿದರೂ ಇಂಥ ಕಾವ್ಯವನ್ನು ಸೂಕ್ಷ್ಮವಾಗಿ ಪರಿಭಾವಿಸಿ

ನೋಡಿದಾಗ ವಸ್ತು ಸತ್ಯ ಇಷ್ಟು ಸರಳವಾಗಿಲ್ಲ. ಇಹಕ್ಕೆ ವಿರುದ್ಧವಾದ ಪರದ ಬಯಕೆಯೇ ಅನುಭಾವವೆಂದು ತಿಳಿದು ಅನುಭಾವವನ್ನು ನೆಲದ ಬದುಕಿನಿಂದ ಬೇರೆಯೇ ಆಗಿ ನೋಡುವವರಿಗೆ ಈ ಮೇಲಿನ ಪ್ರಶ್ನೆ ಹುಟ್ಟುವುದು ಸಹಜ. ಆದರೆ ಅನುಭಾವವೆಂಬುದು ಅರಿವಿನ ಪರಿಣಾಮೀ ಸ್ವರೂಪ.

ಅರಿದಿಹೆ ಅರಿದಿಹೆ ನೆಂದಡೆ
ಮರೆವು ಘನವಾಗಿತ್ತು
ಅರಿವಿನ ಪರಿಯೆಂಬುದು
ನಾದದೊಳಗಿನ ಭಾವ
ಭಾವದೊಳಗಿನ ಅನುಭಾವ
ಅನುಭಾವವೆಂಬುದು ಕುಸುಮಗಂಧ

ಇಂಥ ಅನುಭಾವ ಪದಾರ್ಥ ರೂಪದಲ್ಲಿದ್ದರೂ ಪದಾರ್ಥ ಸ್ವರೂಪಿಯಲ್ಲ. ಅದಕ್ಕೇ ಪದವನರ್ಪಿಸಬಹುದಲ್ಲದೆ ಪದಾರ್ಥವನರ್ಪಿಸಬಾರದು ಎನ್ನುತ್ತಾನೆ ಪ್ರಭು.

ಅನುಭಾವದಿಂದ ಹುಟ್ಟಿತ್ತು ಲಿಂಗ
ಅನುಭಾವದಿಂದ ಹುಟ್ಟಿತ್ತು ಜಂಗಮ
ಅನುಭಾವದಿಂದ ಹುಟ್ಟಿತ್ತು ಪ್ರಸಾದ
ಅನುಭಾವದನುವಿನಲ್ಲಿ ಗುಹೇಶ್ವರ ಲಿಂಗವನುಪಮ ಸುಖಿ.

ಹೀಗಾಗಿ ಅನುಭಾವವೆಂಬುದು ಲಿಂಗ, ಜಂಗಮ, ಪ್ರಸಾದಗಳ ಪರಿಣಾಮ ದ್ರವ್ಯ.

ಈ ಪರಿಣಾಮಗಳು ಲೋಕದ ಡೊಂಕ ತಿದ್ದಲು ಬಾಳಿನ ದುರ್ಗಂಧವನ್ನು ಕಳೆಯಲು ರೂಪುಗೊಂಡ ಜೀವನಧರ್ಮ. ಇದು ಇಹಕ್ಕೆ ಬೆನ್ನು ತಿರುಗಿಸಿದ್ದಲ್ಲ. ಇಹದ ಕತ್ತಲೆಗೆ ಬೆಳಕಿನ ದಾರಿ ತೋರಲು ಬಂದ ಕೈದೀವಿಗೆ. ಕನ್ನಡ ನಾಡಿನ ಚರಿತ್ರೆಯ ಕಡೆಗೇ ಒಮ್ಮೆ ಕಣ್ಣು ಹಾಯಿಸಿದರೆ ಕಾಣುವ ಸತ್ಯವೊಂದಿದೆ; ಬದುಕು ತೀರ ವಿಕ್ಷುಬ್ಧವಾಗಿದ್ದಾಗ ಜನಮುಖಿಯಾದ ಕಾವ್ಯ ಅನುಭಾವವನ್ನು ಪರ್ಯಾಯ ವಾಸ್ತವವಾಗಿ ಹಂಬಲಿಸಿರುವುದು ಕಂಡುಬರುತ್ತದೆ. ಆ ನೆಲೆಯಲ್ಲಿ ಇಡೀ ಮಾನವ ಸಮುದಾಯದ ಸುಖ-ಶಾಂತಿಗಾಗಿ ಪ್ರೀತಿ-ಪ್ರೇಮಗಳ ಸಂಬಂಧಾತ್ಮಕ ಬದುಕಿಗಾಗಿ ನೈತಿಕ ಎಚ್ಚರದಲ್ಲಿ ದನಿ ಮಾಡಿರುವುದು ಎದ್ದು ಕಾಣುತ್ತದೆ. ವಚನಕ್ರಾಂತಿ, ಭಕ್ತಿ ಪಂಥ ತತ್ವಪದಕಾರರು ಇದಕ್ಕೆ ಉತ್ತಮ ಉದಾಹರಣೆಗಳಾಗುತ್ತಾರೆ. ಇವರೆಲ್ಲರಲ್ಲಿ ಹರಿದ ಅನುಭಾವ ಎಲ್ಲ ಕಾಲದ ಬದುಕಿನಲ್ಲಿ ಎಲ್ಲರೂ ಬಯಸುವ ಕಲ್ಯಾಣ ರಾಜ್ಯದ ಆಶಯವನ್ನು ವಾಸ್ತವವಾಗಿಸುವ ಹಂಬಲಿಕೆಯ ಅನುಭಾವ. ಇಂದಿನ ಯುದ್ಧಕೋರತನವನ್ನು ಹಿಂಸೆ, ಕ್ರೌರ್ಯಗಳ ಕೋಮುವಾದಿ ಅಟ್ಟಹಾಸವನ್ನು ತೀವ್ರವಾಗಿ ವಿರೋಧಿಸುವ 'ಇಂದು' ನೋಡಿ ಮುಂದುಗಾಣುವ ನಿಶ್ಶಬ್ದದ ಧ್ವನಿ ಪರಂಪರೆ ಈಗಿನ ನಿಜವಾದ ಅನುಭಾವಿ ಕವಿಗಳಲ್ಲಿ ಕೇಳುತ್ತಿದೆ. ಆದರೆ ಅದು ಅಬ್ಬರದ ಶಬ್ದ ರೂಪದಲ್ಲಲ್ಲ, ವಿಷಾದದ ಬಿಸಿಯುಸಿರಿನಲ್ಲಿ ನಿಶ್ಶಬ್ದದ ಅನುರಣನ ಅರ್ಪಿತ ಭಾವದಲ್ಲಿ.

ಹೇಳಲೇಬೇಕಾದ ಮಾತು : ಸಂಚಯದ ಗೆಳೆಯರು ಸಂಕಿರಣದಲ್ಲಿ ಒಬ್ಬೊಬ್ಬ ಬರಹಗಾರನನ್ನು ಒಂದೊಂದು ಸಂಚಿಕೆಯಲ್ಲಿ ಪರಿಚಯಿಸಿದಂತೆ ಸಂವಾದಕ್ಕೆ ವೇದಿಕೆ ಕಲ್ಪಿಸಿರುವುದು ಆರೋಗ್ಯಕರವಾದುದು, ಸ್ವಾಗತಾರ್ಹವಾದುದು. ಈ ಬಾರಿ ನನ್ನ ಕಾವ್ಯ-ವಿಮರ್ಶೆಗಳ ಬಗ್ಗೆ ಅವರು ಪ್ರೀತಿ ತೋರಿದ್ದಾರೆ. ಅವರ ಪ್ರೀತಿಗೆ ನಾನು ಆಭಾರಿ ಎಂದರೆ ಅದು ಶಬ್ದ ಸೂತಕವಲ್ಲ



ಎರಡು ಕವಿತೆಗಳು

ಎಸ್.ಜಿ. ಸಿದ್ಧರಾಮಯ್ಯ


ಜೀವತರು ಭಾವ ತುಂಬಿ

ಜೀವತರುವಿನ ಅನುವು ಭಾವ ತುಂಬಿದ ಹೊತ್ತು
ನಾಭಿಮೂಲದ ಉಸಿರು ಶಿವಗೋಳು ಸಂತಾಪ
ಯಾರು ಕರೆದರು ಇದನು ಪಡಿಪದಾರ್ಥವೆಂದು?

ಗುಡಿಬಿಟ್ಟು ಗಡಿದಾಟಿ ಮೌನ ಗುಮ್ಮಟ ಸಾಲು
ಬಳುವಳಿಯ ಬಗಲಲ್ಲೆ ಕೆಂಡದುಂಡೆಯ ಮಡಿಲು
ಯಾರು ಒರೆದರು ಇದನು ಘನ ಕಾಯಾತ್ಮವೆಂದು?

ಅದ್ವೈತದನ್ನದಲಿ ಅಗಣಿತದ ಅಣುಜಾಲ
ಕ್ಷಣಗಣನೆ ಸಖ್ಯದಲಿ ಅಕ್ಷರದ ಜೀವಜಲ
ಯಾರು ಬರೆದರು ಇದನು ಮಾಯಾಗುಮ್ಮಟವೆಂದು?

ಎರಡು ಒಂದಾಗಿ ಬರಡು ಹಯನಾಗಿ ಕರಡಿಗೆಯ ಭಣಿತ
ಕಾಣಬಾರದ ತಳವ ಕಂಡೆನೆನ್ನುವ ಸೋಲು
ಯಾರು ಅರಿದರು ಇದನು ಅನುಭಾವವೆಂದು?



ಬಿಂದು ಮೂಲದ ಯಾನ ಬಿಂದು ಮೂಲಕೆ ಹರಿದು
ಸಿಂಧುವಾಯಿತು ಸಕಲ ಪಡಿಪದಾರ್ಥಗಳೆಂದು
ಪದಕಟ್ಟಿ ಹಾಡುವರೆ ಅನುವೆಲ್ಲಿ ಘನವೆಲ್ಲಿ?

ಹಾಡು ಅರಕೆಯ ತೃಪ್ತಿ ಅರಕೆ ಕಾಲನ ಜಪ್ತಿ
ಕಂಡುಂಡ ಕಾಣ್ಕೆಯಲಿ ಜೀವಜೀವದ ದೀಪ್ತಿ
ಜೀವತರುವಿನ ನೆನಪು ಭಾವ ತುಂಬಿದ ಹೊತ್ತು

ಹಿಂಗೊಬ್ಬಳು ಸಂಗಾತಿ



ಒತ್ತರಿಸಿ ಬಂದವಳು ನಿತ್ತರಿಸಿ ನಿಂದವಳು
ಉತ್ತರಿಸದೇ ಹೊರಟುಹೋದಳಲ್ಲ
ಹತ್ತಿರವಿದ್ದವಳು ಬತ್ತಲೆ ಬಳೆದವಳು
ಕತ್ತಲಗೂಡಾಗಿ ಕಳೆದಳಲ್ಲ

ಮಾಡು ಹಿಡಿಯಲು ಹೋಗಿ ಜಾಡು ತಪ್ಪಿದ ವೇಳೆ
ಜಲುಮ ಜಾಲಾಡಿದಳು ಜಾರೆ ನೀರೆ
ಜೋಗಿ ಜಂಗಮನಾಗಿ ತಾಳ ತಂತಿಯ ಮಿಡಿಯೆ
ಕಾಲೂರಿದಿಳೆವಾಸ ಕಣ್ಣಾಯಿತಲ್ಲ


ಅಂತಾಗಿ ಇಂತಾಗಿ ಸಂತೇಯ ಸೊಲ್ಲಾಗಿ
ಸಾವಳಿಗಿ ಗುರುಕಾಮಿ ಸಿಂಗಾರವಾದ
ಅಂಗಾರ ಬಂಗಾರ ಅಡವೀಯ ಹೂಗಾರ
ನಾಗವಾಸದ ಹೆಣ್ಣ ಎದೆಯ ಕೂಸಾದ

ಬಾ ಬಾರೋ ಚಂದಪ್ಪ ಬಾ ಬಾರೋ ಸೂರ್ಯಪ್ಪ
ಬೆದೆಗುಡಿಯ ಚೆಲುವ ಬೆಳಕಣ್ಣರೇ
ಜೀವಕೊಟ್ಟವಳವಳು ಭಾವ ಕೊಟ್ಟವಳವಳು
ದಾರಿಗೆರೆ ತೋರದಲೆ ದೂರಾಗಿ ಹೋದವಳು

ಒತ್ತರಿಸಿ ಬಂದವಳು ನಿತ್ತರಿಸಿ ನಿಂದವಳು
ಉತ್ತರಿಸದೇ ಹೊರಟು ಹೋದಳಲ್ಲ!

'ಹೊಂಬೆಳಗು', ನಳಂದ ಶಾಲೆಯ ಹತ್ತಿರ,
ತುಮಕೂರು - ೫೭೨ ೧೦೩

ಮುಖ ಮತ್ತು ಮುಖವಾಡ



■ ಬಿ.ವಿ. ಕಾರಂತ

ಮಿತ್ರರೆ,

ನಾನು ವಿಷಯ ತೆಗೆದುಕೊಂಡಿರುವುದು 'ಮುಖ ಮತ್ತು ಮುಖವಾಡ'. ವಿಶೇಷವಾಗಿ ಒಬ್ಬರ ಬಗ್ಗೆ ಪರಿಚಯ ಮಾಡುವಾಗ ಮುಖವಾಡ ಎನ್ನುವ ಶಬ್ದವನ್ನು ಬಹಳ ಮಟ್ಟಿಗೆ ಇತ್ತೀಚೆಗೆ ಉಪಯೋಗಿಸುತ್ತೇವೆ. ಆದರಲ್ಲೂ ಪಾಶ್ಚಾತ್ಯ ನಾಟಕಗಳ ಪ್ರಭಾವದಿಂದ ಒಂದು ರೀತಿಯಲ್ಲಿ ಮುಖವಾಡವನ್ನು ನಾವು ಮರೆತೂಬಿಟ್ಟಿದ್ದೇವೆ. ನಮ್ಮಲ್ಲಿ ಮುಖವಾಡಗಳು ಇದ್ದವು; ಇವೆ ಅಥವಾ ಮುಖವಾಡಕ್ಕೆ ಹತ್ತಿರದ ಕೆಲವು ಬೇರೆ ರೂಪಗಳೂ ಇವೆ. ಇದಕ್ಕೆ ಕಾರಣಗಳು ಇಷ್ಟೇ. ನನಗೆ ಇದರಲ್ಲಿ ಆಸಕ್ತಿ ಯಾಕೆ ಬಂತು ಅಂದರೆ, ರಂಗಭೂಮಿಯಿಂದಾಗಿ. ರಂಗಭೂಮಿಯ ಕೇಂದ್ರ ಯಾರು? ನಟ. ಈ ನಟನೇ ಕೇಂದ್ರ. ಯಾಕೆಂದರೆ ಅವನು ನಟನೆಯ ಬಗ್ಗೆಯೇ ವಿಚಾರ ಮಾಡುತ್ತಾ ಮಾಡುತ್ತ ಒಂದು ಒಗಟಾಗಿ ಕಾಣಿಸುತ್ತಿದ್ದಾನೆ. ಆಗ ಅನ್ನಿಸುತ್ತೆ ಅದಕ್ಕೆ ರಂಗಭೂಮಿಯೇ ಒಂದು ಒಗಟಾಗಿರೋದು. ಯಾಕೆ ಒಗಟು ಅಂದರೆ ನಾಟಕ ಇದೆ, ನಿರ್ದೇಶಕ ಇದ್ದಾನೆ, ನಟರಿದ್ದಾರೆ. ಕಾಸ್ಟ್ಯೂಮ್ಸ್ ಇದೆ, ಒಳ್ಳೆಯ ಸಂಭಾಷಣೆ, ಚೆನ್ನಾಗಿ ಮಾತನಾಡ್ತಾ ಇದ್ದಾರೆ. ಎಲ್ಲಾ ಇದ್ದೂ ಕೂಡ ನಾಟಕ ಆಗಬೇಕಾದರೆ ಪ್ರೇಕ್ಷಕರಿರಬೇಕು. ಅಂದರೆ, ಪ್ರೇಕ್ಷಕರಿಲ್ಲದಾಗ ನಾನು ನಾಟಕ ಮಾಡಬಹುದು. ಆದರೆ ಅದು ನಾಟಕ ಆಗೋದಿಲ್ಲ. ನಾಟಕ ಆಗಬೇಕಾದರೆ ಪ್ರೇಕ್ಷಕ ಬೇಕೇಬೇಕು. ಅಂದರೆ ನಟ ಮತ್ತು ಪ್ರೇಕ್ಷಕ – ಅನ್ಯೋನ್ಯ ಆಶ್ರಯ ಅಂತ ಹೇಳ್ತೀವಲ್ಲ ಹಾಗೆ ಅದು ಅನಿವಾರ್ಯವಾದುದು. ಆ ನಟನೆಯಲ್ಲೂ ಯಾವುದೋ ಒಂದು ನಿಗೂಢತೆ ಇದೆ.

ನಿಗೂಢತೆ ಅಂದಕೂಡಲೇ ನಾನು ಯಾವುದೋ ಒಂದು ಆಧ್ಯಾತ್ಮಿಕ ನಿಗೂಢತೆ ಬಗ್ಗೆ ಹೇಳ್ತೀನಿ ಅಂತ ಅಲ್ಲ. ಏನೇ ಆದರೂ ನಾಟಕ ಆಗಬೇಕು ಅನ್ನೋದಕ್ಕೆ ಕಾರಣ ಏನು ಅನ್ನೋ ಪ್ರಶ್ನೆ ಬರುತ್ತೆ. ನಾಟಕ ಆಡಬೇಕು, ನೋಡಬೇಕು ಅನ್ನೋದು ಯಾಕೆ? ನಾವು ಒಳ್ಳೆಯ ನಾಟಕ ಆಡ್ತೀವೋ ಕೆಟ್ಟದ್ದು ಆಡ್ತೀವೋ – ಉಳಿದವಕ್ಕೆ ನಾವು ಹೋಲಿಸಿದ್ರೆ ನಾಟಕದ ಮಾಧ್ಯಮ ಬಹಳ ಕೆಳಮಟ್ಟದಲ್ಲಿದೆ ಅಂತ ನಾನು ಹೇಳಿದ್ರೆ ತಪ್ಪೇನಿಲ್ಲ. ಯಾಕೆಂದರೆ ಇನ್ನೂ ಮೊದಲನೇ ಮೆಟ್ಟಲಿನ ಮೇಲೂ ಇಲ್ಲ. ಇಷ್ಟು ದೊಡ್ಡ ದೇಶದಲ್ಲಿ ನಮಗೆ ಬೇರೆ ಭಾಷೆಗಳ ಬಗ್ಗೆ ಪರಿಚಯವೂ ಇಲ್ಲ. ಇವೆಲ್ಲ ನಮ್ಮ ಭಾರತದ ದೇಶದ ದೊಡ್ಡ ದೌರ್ಬಲ್ಯ. ಸಂಗೀತ, ನೃತ್ಯದ ಬಗ್ಗೆ ಹಾಗೆ ಅನ್ನಿಸ್ತಾಯಿಲ್ಲ. ಸಾಹಿತ್ಯದಲ್ಲೂ ಒಂದು ಕೃತಿ ಭಾಷಾಂತರ ಆಗುತ್ತೆ. ಆದರೆ ನಾಟಕ ಒಂದು ಬಹಳ ಅದ್ಭುತವಾದ ಸಮಸ್ಯಾತ್ಮಕವಾಗಿದೆ. ಅದ್ಭುತ ಅಂತ ಯಾಕೆ ಹೇಳಿದ್ದೀನಿ ಅಂದರೆ — ತಿಳಿದುಕೊಂಡರೆ ಬಹಳ ಹತ್ತಿರವಾದ ಮಾಧ್ಯಮ ಅದು. ನೀವೊಂದು ವಾಡೆಯಲ್ಲಿದ್ದರೆ ಒಂದು ಕಾಸೂ ಖರ್ಚು ಮಾಡದೆ ನಾಟಕ ಮಾಡಬಹುದು. ಯಾಕೆಂದರೆ ಯಾರದೋ ಸೀರೆ, ಧೋತಿ ತಗೊಂಡು ಬರ್ತೀರಾ, ಇನ್ನ್ಯಾರದೋ ಬಟ್ಟೆ ತಗೊಂಡು ಬರ್ತೀರಾ, ಮತ್ತ್ಯಾರದೋ ಮದುವೆಯ ಬಾಸಿಂಗ ತಗೊಂಡ್ರೂ ಅದು ಕಿರೀಟ ಆಗಿಬಿಡುತ್ತೆ. ಒಂದು ಕಾಸೂ ಖರ್ಚಿಲ್ಲದೆ ಆಡುವಂಥಹುದು. ಆದ್ದರಿಂದ ನಾಟಕ ಅಂತ ಹೇಳಿ ಎಲ್ಲರಿಗೂ ತೋರಿಸುವಂಥ ಅದ್ಭುತ ಮಾಡಬೇಕು ಅಂತ ಅಂದಾಗ ಎಲ್ಲಕ್ಕಿಂತ ಹೆಚ್ಚು ಖರ್ಚು ನಾಟಕಕ್ಕೆ ಆಗಿಹೋಗುತ್ತೆ. ಆ ಕಡೆ ಇರೋರು ಮತ್ತು ಈ ಕಡೆ ಇರೋರು — ಇಬ್ಬರೂ ಸೇರಿದಾಗ ನಾಟಕ ಆಗುತ್ತೆ ಅನ್ನೋದು ಮತ್ತೆ ಮತ್ತೆ ಆಗುವಂಥ ಒಂದು ಅದ್ಭುತ ಚಮತ್ಕಾರ. ಅದು ರಂಗಭೂಮಿಯಲ್ಲಿ ಮಾತ್ರ ಸಾಧ್ಯ. ಆದರೆ ನಟನೆಯ ಬಗ್ಗೆ ಮಾತನಾಡುವಾಗ ನಟನಿಗೆ ಎಷ್ಟೋ ಮೂಲಗಳಿವೆ. ಅದರಲ್ಲಿ ಒಂದು ಮುಖವಾಡ ಕೂಡ. ನಿನ್ನೆ ನನಗೊಬ್ಬರು ಹೇಳಿದ್ದರು, ಅಲ್ಲಮ ಪ್ರಭುವಿನ ವಚನದಲ್ಲಿ ಒಂದು ಶಬ್ದ ಇದೆ. 'ಮುಖವಾಡದಯ್ಯಾ' ಅಂತ. ಒಬ್ಬ ಶರಣ ಇದ್ದನಂತೆ. ಆ ಮುಖವಾಡದಯ್ಯ ಆನೆಯ ದೋಚ (ಮುಖ) ಹೊತ್ತುಕೊಂಡು ನಾಯಿಯ ಹಾಗೆ ಬೊಗಳುವ ಮಾನವಯ್ಯ ನೀನು (ಹೊಸ ಶಬ್ದ ನನಗೆ ಇದು) ಯಾರಯ್ಯ ಗುಹೇಶ್ವರ ಅಂತೇನೋ ಇರಬೇಕು. ಯಾಕೆಂದರೆ ಕೊನೆಯಲ್ಲಿ ಗುಹೇಶ್ವರ ಅಂತ ಸೇರಿಸಿಬಿಟ್ಟರೆ ಅದು ಅಲ್ಲಮನದು ಅಂತ ಹೇಳಬಹುದು. ಈ ದೃಷ್ಟಿಯಲ್ಲಿ ಮುಖವಾಡ ಅನ್ನೋದು ಹೊಸ ಶಬ್ದವಲ್ಲ. ಮೊದಲು ಗುಬ್ಬಿ ಕಂಪನಿಯಲ್ಲಿ ಒಬ್ಬ ನಟನನ್ನು ಪರೀಕ್ಷೆ ಮಾಡುತ್ತಿರಬೇಕಾದರೆ ಮೂರು ಕ್ಯಾಪಿಟಲ್ 'P' ಇರಬೇಕು ಅಂತಿದ್ದರು. ಒಳ್ಳೆಯ ಧ್ವನಿ ಇರಬೇಕು, ರೂಪ ಇರಬೇಕು, ಆಮೇಲೆ ಚೆನ್ನಾಗಿ ಪೋಸು ಕೊಡಬೇಕು ಅಂತ. ಇಲ್ಲಿ 'ರೂಪ' ಅಂತ ಯಾಕೆ ಹೇಳ್ತೀವಿ ಅಂದರೆ ಈ 'ರೂಪ' ಶಬ್ದ ಮತ್ತೆ ಮತ್ತೆ ನಾಟಕದಲ್ಲಿ ಉಪಯೋಗವಾಗುತ್ತೆ. ರೂಪಧಾರಣೆ, ರೂಪಿಯ, ಬಹುರೂಪಿಯ ಇಂಥದ್ದೆಲ್ಲ ಬರುತ್ತೆ.

★

ನಟ ನಿಮ್ಮ ಹಾಗೆ ಇರುವ ಅವನು ಒಬ್ಬ ಮನುಷ್ಯ. ಎಲ್ಲರಿಗೂ ಇರುವ ಹಾಗೆ ಅವನಿಗೊಂದು ರೂಪ ಇದೆ. ಅವನಿಗೊಂದು ಆಕಾರ ಇದೆ, ಒಂದು ಆಕೃತಿ ಇದೆ. ಅಂದರೆ ಅದರಲ್ಲಿ ವೈಶಿಷ್ಟ್ಯ ಇಲ್ಲ. ಆದರೆ ಮೂಲ ರೂಪದಲ್ಲಿ ನಟ ನಮ್ಮ ಹಾಗೇ. ಅದಕ್ಕೇ ನಾಟಕವನ್ನು ನಾವು ಬದುಕಿಗೆ ಹತ್ತಿರವಾದದ್ದು ಅನ್ನುತ್ತೇವೆ. ಬದುಕಿಗೆ ಇಷ್ಟು ಹತ್ತಿರವಾದದ್ದು ಇನ್ಯಾವ ಮಾಧ್ಯಮವೂ ಇಲ್ಲ. ಇಷ್ಟು ಹತ್ತಿರವಾದುದರಿಂದಲೇ ಬಹಳ ಕಷ್ಟವಾದದ್ದು. ಅದಕ್ಕೆ ಕೆಲವರು ಹೇಳುತ್ತಾರೆ, ಅದು ಕಲೆಯೇ ಅಲ್ಲ ಅಂತ. ಯಾಕೆಂದರೆ ಉಳಿದ ಪ್ರಕಾರಗಳಲ್ಲಿ ಸಾಹಿತಿಗಾದರೆ ಅಕ್ಷರಗಳಿಂದ ಅಥವಾ ಅವನ ಛಂದ ಸಾಹಿತ್ಯದಿಂದ ಏನೋ ಸೃಷ್ಟಿ ಮಾಡಿ ಎಲ್ಲೋ ಮಾಯವಾಗಬಹುದು. ನಟ ಹಾಗೆ ಮಾಡುವುದಕ್ಕೆ

ಆಗುವುದೇ ಇಲ್ಲ. ಅವನು ಅಲ್ಲೇ ಇರಬೇಕು. 'ನಾನು ಮಾಡಿಬಿಟ್ಟೆ' ಅಂತ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಇಲ್ಲಿ ಆ ನಟನಿಗೆ ತನ್ನ ಭೂತಕಾಲವನ್ನು ಈಗಿನ ಕಾಲದಲ್ಲಿ ವಿಶ್ಲೇಷಣೆ ಮಾಡುತ್ತ ಅರ್ಥೈಸುತ್ತ ಅದು ಒಂದು ರೀತಿಯಲ್ಲಿ ಬದುಕಿಗೆ ಹತ್ತಿರ ಮಾಡುತ್ತ ಭವಿಷ್ಯವನ್ನು ಮಾಡಬೇಕಾಗಿದೆ. ಅದಕ್ಕೆ ಅನ್ನಿಸುತ್ತೆ ವಿಧಿ ಅನ್ನೋದು ನಾಟಕದಲ್ಲೇ ಹುಟ್ಟಿದ್ದು ಅಂತ. ನಮ್ಮ ಸ್ವಂತ ಜೀವನದಲ್ಲಿ ನಮಗೇನು ಗೊತ್ತು ವಿಧಿ ಅನ್ನುವಂಥದ್ದು? ಹೊರಡುವಾಗ ನಮಗೇ ಗೊತ್ತಿರುವುದಿಲ್ಲ, ಅಪಘಾತ ಆಗುತ್ತೆ, ಮತ್ತೇನೋ ಆಗುತ್ತೆ ಅದನ್ನು ಹಣೆಬರಹ ಅಂತ ಹೇಳ್ತೀವಿ ಅಥವಾ ತಪ್ಪು ಮಾಡಿದಾಗ 'ನೋಡಿ, ಇವನಿಗೆ ಮುಂದೆ ಏನು ಕಾದಿರುತ್ತೆ' ಅಂತ ಹೇಳ್ತೀವಿ. ಆದರೆ, ನಾಟಕದಲ್ಲಿ ಎಲ್ಲವನ್ನೂ 'ಆಗಿಸಿ' ತೋರಿಸಬೇಕಾಗುತ್ತದೆ. ಈಡಿಪಸ್ ಒಂದು ಒಳ್ಳೆಯ ಉದಾಹರಣೆ. ಅಂದರೆ ನಟನಿಗೆ ಇವತ್ತಿನದಾಗಿಸುವ ಹಠ : ಏನಾಗಿದೆಯೋ, ಏನು ತಿಳಿದುಕೊಂಡಿದ್ದಾನೋ ಏನು ಗೊತ್ತಿದೆಯೋ ಅದನ್ನು ಇವತ್ತಿನದಾಗಿಸಬೇಕು. ವರ್ತಮಾನ ಕಾಲಕ್ಕೆ ಒದಗಿಸಬೇಕು ಅನ್ನುವ ಹಠದಲ್ಲಿ ಅವನು ಭವಿಷ್ಯತ್ ಕಾಲವನ್ನು ರೂಪಿಸಿಬಿಡುತ್ತಾನೆ; ರೂಪಿಸಬೇಕು. ಆದರೆ ಒಂದು ದೊಡ್ಡ ಸಮಸ್ಯೆ ಅಂದರೆ, ಅವನಿಗೆ ಸ್ವಂತ ವ್ಯಕ್ತಿತ್ವವೇ ಇಲ್ಲ. ಎಲ್ಲೋ ಒಂದು ರೀತಿಯಲ್ಲಿ ಅವನು ಬೇರೊಬ್ಬ. ಲಂಕೇಶರದು ಒಂದು ಕತೆ ಇದೆಯಲ್ಲ 'ನಾನಲ್ಲ'. ಅದು ಇಲ್ಲಿ ಬಹಳ ಒಪ್ಪಿಕೊಳ್ಳುತ್ತೆ. 'ನಾನಲ್ಲ...' ಅಂದರೆ ನಟ ನಿಜವಾಗಿ ನೋಡಿದರೆ 'ಅವನಲ್ಲ', ಅವನು ಬೇರೊಬ್ಬ ಅಥವಾ ಬೇರೊಬ್ಬನೇ ಅವನು. ಆದ್ದರಿಂದ ಅವನು ಸ್ವಯಂ ಅಲ್ಲ. ಈ 'ಬೇರೊಬ್ಬ ತನ' ಪ್ರತ್ಯೇಕತೆ ಇದೆಯಲ್ಲ ಇದು ನಟನ ಒಂದು ದೊಡ್ಡ ಶಕ್ತಿಯೂ ಕೂಡ; ಹಾಗೇ ಅದು ಒಂದು ಕೊರತೆಯೂ ಕೂಡ. ಕೊರತೆ ಅಂದರೆ, ನಟನ ದೃಷ್ಟಿಯಿಂದಲ್ಲ; ಉಳಿದ ದೃಷ್ಟಿಯಿಂದ ನಟನನ್ನು ಗುರುತಿಸಬಾರದು ಅನ್ನೋ ದೃಷ್ಟಿಯಿಂದ. ಅಂದರೆ ಉತ್ತಮ ನಟ ಆಗಿರೋವನನ್ನು ಗುರುತಿಸೋಕೆ ಸಾಧ್ಯವೇ ಇಲ್ಲ. ಬೇರೆ ಬೇರೆ ಪಾತ್ರದಲ್ಲೇ ಅವನು ಕಾಣಸಬೇಕು. ಅವನ ಸ್ವಂತ ವ್ಯಕ್ತಿತ್ವ ಕಾಣಸಬಾರದು ಅಂತ. ಈ ಸಮಸ್ಯೆ ಲೇಖಕರಿಗಿಲ್ಲ; ಈ ಸಮಸ್ಯೆ ಸಂಗೀತಗಾರರಿಗಿಲ್ಲ, ನರ್ತಕರಿಗೂ ಇಲ್ಲ. ಆದರೆ ನಟನಿಗೆ ಈ ಸಮಸ್ಯೆ ಬರುತ್ತೆ. ಯಾಕೆಂದರೆ ಲೇಖಕನಾದರೆ ಉದಾಹರಣೆಗೆ ಕುವೆಂಪು ಒಂದು ಕಾದಂಬರಿ ಬರೆದರೆ ಅದರ ಬಗ್ಗೆ ಪೂರಾ ವಿವರ ಬರೆಯಬಹುದು. ಎಲ್ಲಿ ಹುಟ್ಟಿದ್ದು, ಎಲ್ಲಿ ಓದಿದ್ದು, ಅವರ ಮೇಲೆ ಏನೇನು ಪ್ರಭಾವಗಳು ಬಿದ್ದವು. ಎಲ್ಲಾ ಬರೆಯಬಹುದು. ಆದರೆ ನಟನಿಗೆ ಹಾಗೆ ಬರೆಯೋಕೆ ಆಗುವುದಿಲ್ಲ. ಸುಮ್ಮನೆ ಪರಿಚಯ ಕೊಡಬಹುದು. ಅವರ ಅಪ್ಪ ಕೂಡ ಗುಬ್ಬಿ ಕಂಪನಿಯಲ್ಲಿ ನಟರಾಗಿದ್ದರು ಅಥವಾ ಇನ್ನಾವುದೇ ಕಂಪೆನಿಯಲ್ಲಿ ಅಂತ ಕೊಡಬಹುದು. ಆದರೆ ಇದರಿಂದೇನೂ ಅವನ ನಟನೆಯ ಪರಿಚಯ ಆಗೋದಿಲ್ಲ. ಅದಕ್ಕೇ ಆ ನಟನೆಯ ಬಗ್ಗೆ ಒಬ್ಬ ನಟನನ್ನು ಮೆಚ್ಚಿಕೊಳ್ಳುತ್ತೇವೆ; ಅವನನ್ನು ಅರ್ಥಮಾಡಿಕೊಳ್ಳುವುದಿಲ್ಲ ಅಂತ. ಅರ್ಥಮಾಡಿಕೊಳ್ಳುವ ಮಟ್ಟದಲ್ಲಿ ನಾವಿನ್ನೂ ಬಂದಿಲ್ಲ. ನಮ್ಮ ದೇಶದಲ್ಲಿ ಒಳ್ಳೆಯ ನಟ ಯಾರು ಅಂದ್ರೆ ಹೇಳುವುದು ಬಹಳ ಕಷ್ಟ ಆಗುತ್ತೆ. ಅಥವಾ ನಾವು ಪ್ರೇಕ್ಷಕರಾಗಿ ಬಹಳ ಉದಾರಿಗಳಾಗಿರೋದ್ರಿಂದ ನಾಟಕ ಮುಗಿಯುತ್ತಿದ್ದಂತೆ, ಚಪ್ಪಾಳೆ ಹೊಡೆದು ಒಳಗೆ ಹೋಗಿ 'ಶುಭಾಶಯಗಳು, ಚೆನ್ನಾಗಿ ಮಾಡಿಬಿಟ್ಟಿರಿ' ಅಂತ ಹೇಳಿಬಿಟ್ರೆ ಮುಗೀತು. ನಮ್ಮ ನಟನ ಬದುಕು ಅಲ್ಲಿಗೆ ಮುಗಿಯಿತು. ಆದರೆ ನಾನಿಲ್ಲಿ ಆಥರದಲ್ಲಿ ಹೇಳುತ್ತಿಲ್ಲ. ನಟ ನಿಜವಾಗಲೂ ಆ ತಾಟಸ್ಥ್ಯದಿಂದ ಹೊರಬರಬೇಕಾದರೆ ಏನು ಮಾಡಬೇಕು ಅಂದರೆ, ರೂಪ ಮುಖ್ಯ ಇದ್ದರೂ ಕೂಡ ಅವನು ನಾಟಕದಲ್ಲಿ ಪಾತ್ರವಹಿಸುವುದರಿಂದ, ಅವನು ಬೇರೊಬ್ಬನಾಗಿರುವುದರಿಂದ; ಅವನಿಗೆ ಇನ್ನೂ ಬೇರೆ ಉಪಕರಣಗಳು ಬೇಕಾಗುತ್ತವೆ. ಒಂದು ವೇಳೆ ತನ್ನದು ಯಾವುದೂ ಅಲ್ಲವೇ ಅಲ್ಲ, ನಾಟಕ ತನ್ನದಲ್ಲ ಯಾರೋ ಬರೆದುಕೊಟ್ಟದ್ದು, ನಿರ್ದೇಶನ ಇನ್ಯಾರೋ ಮಾಡಿದ್ದು; ಇನ್ಯಾರೋ ದೀಪದ ವ್ಯವಸ್ಥೆ ಮಾಡುತ್ತಾರೆ, ಮೇಕಪ್ ಮಾಡ್ತಾರೆ. ಅವನು ಮಾಡಿದ್ರೂ ಕೂಡ ಮೇಕಪ್ಪನ್ನು ಬಿಟ್ಟುಬಿಡೋಣ. ಅಷ್ಟೇ ಅಲ್ಲ, ಅವನು

ತಾನಾಗಿ ಕೂತುಕೊಂಡು ಮಾಡುವುದಕ್ಕೂ ಆಗುವುದಿಲ್ಲ. ಅದಕ್ಕೆ ಪ್ರೇಕ್ಷಕರು ಬೇಕು. ಇನ್ನೊಬ್ಬರ ಮುಂದೆ ಮಾಡಿದರೇನೇ ಅವನು ನಟ ಅನ್ನಿಸಿಕೊಳ್ಳೋದು. ಇಲ್ಲದಿದ್ದರೆ ಅದು ಸಾಧ್ಯವಿಲ್ಲ.

ಇಂಥ ಪ್ರತ್ಯೇಕತೆ ಇದೆಯಲ್ಲ ಇದು ಮನುಷ್ಯನ ದೊಡ್ಡ ಸಮಸ್ಯೆ. ಅದನ್ನು ಇಲ್ಲಿ ನಾನು ಸಂಕ್ಷಿಪ್ತವಾಗಿ ಹೇಳುವೆ. ನಾನು ಮನಃಶಾಸ್ತ್ರಜ್ಞನನಲ್ಲ. ನಮ್ಮಲ್ಲಿ ಕೂಡ ಒಂದು ಪ್ರತ್ಯೇಕತೆ ಇದೆ. ಆದರಿಂದ ನಾವು ಯಾರನ್ನೋ ಪ್ರೀತಿಸ್ತೀವಿ. ನಾವು ನಮ್ಮವನಾಗಿದ್ದವನನ್ನು ಪ್ರೀತಿಸೋಕೆ ಹೋಗೋದಿಲ್ಲ. ಬೇರೊಬ್ಬನಾಗಿ ರೋದರಿಂದ ಆ ವ್ಯಕ್ತಿಯನ್ನು ಪ್ರೀತಿಸ್ತೀವಿ. ಅವನ ಮೇಲೆ ರೇಗೋಕೆ ಹೋಗ್ತೀವಿ, ಜಗಳ ಆಡ್ತೀವಿ. ಪ್ರತ್ಯೇಕತೆ ಇದೆ. ಆಗಿಬಿಡುತ್ತೆ ಒಂದು ಯಾತನೆ ಆಗಿಬಿಡುತ್ತೆ. ಆದರೆ ನಾಟಕ ಅದನ್ನು ಎಲ್ಲೋ ಒಂದು ರೀತಿಯಲ್ಲಿ ತೃಪ್ತಿಗೊಳಿಸಿಕೊಳ್ಳುತ್ತೆ. ನಾಟಕ ಕೊನೆಗೆ ಪ್ರಶ್ನೆಗಳನ್ನು ಏಳಿಸುತ್ತೆ; ಸಂದೇಹಗಳನ್ನು ಎಬ್ಬಿಸುತ್ತದೆಯೇ ಹೊರತೂ, ಸಮಾಧಾನ ಕೊಡುವಂಥದ್ದಲ್ಲ. ಅದಕ್ಕೆ ಕಾರಣ ಈ ಪ್ರತ್ಯೇಕತೆ. ಅದಕ್ಕೇ ನಾಟಕದಲ್ಲಿ ಮಾತ್ರ ಸಂವಾದ ಅಂತ ಬರೋದು. ನಾವು ಸಂವಾದ ಅಂತ ಹೇಳಬೇಕಾದಾಗ ಎಷ್ಟು ಸಲ 'ನಮಗೂ ಅವರಿಗೂ ಸಂವಾದ ಇಲ್ಲ' ಅಂತ ಹೇಳುತ್ತೇವೆ ಅಥವಾ ನಮ್ಮ ನಾಟಕ ಜಗತ್ತಿನಲ್ಲಿ ಅಥವಾ ನಮ್ಮ ನಾಟಕ ಶಾಸ್ತ್ರಗಳಲ್ಲೆಲ್ಲ ಸಂವಾದ ಅಂತ ಮುಖ್ಯವಾಗಿ ಹೇಳಿದ್ದಾರೆ. ಆ ಸಂವಾದಕ್ಕೂ ಒಂದು ಮಹತ್ವ ಕೊಟ್ಟಿದ್ದಾರೆ. ಇಷ್ಟೆಲ್ಲ ಆದರೂ, ಇವತ್ತೂ ಕೂಡ ನಮ್ಮ ಸಂಭಾಷಣೆ ಪರಿಪೂರ್ಣವಾಗಿಲ್ಲ. ಅದೇ ದುರಂತ. ನಾವು ಇಷ್ಟೆಲ್ಲ ನಾಟಕದ ಬಗ್ಗೆ ಸಂಭಾಷಣೆ ಮಾಡಿದರೂ ಕೂಡ ನಮ್ಮಲ್ಲಿ ಇನ್ನೂ ಆ ಪ್ರತ್ಯೇಕತೆ ಇದೆ. ಚಿಕ್ಕಮಗುವಿಗೆ ತಾಯಿ ಜೊತೆಯಲ್ಲಿದ್ದಾಗ ಎಂಟು ತಿಂಗಳು ಇದ್ದಾಗಲೇ ಗೊತ್ತಾಗಿಬಿಡುತ್ತೆ ಅಂತ ಹೇಳುತ್ತೇವಲ್ಲ; ಅದಕ್ಕೆ ತಾನು ಬೇರೆ, ತಾಯಿಯ ಮೇಲೆ ತಾನು ಅಧಿಕಾರ ಚಲಾಯಿಸಬೇಕು ಅಂತ ಮಗುವಿಗೆ ಅನ್ನಿಸುತ್ತೆ. ಅವು ಪ್ರತ್ಯೇಕತೆಯ ಸಮಸ್ಯೆಗಳು.

★

ಇದು ಪೂರಾ ಸಮಾಜದಲ್ಲಿ ಬರುತ್ತೆ. ಅಲ್ಲದೆ ನಾಟಕದ ಪಾತ್ರಗಳೆಲ್ಲ ಸಾಮಾನ್ಯವಾದವು ಅಲ್ಲವೇ ಅಲ್ಲ. ಇಲ್ಲಿ ಇರುವ ಪಾತ್ರಗಳೆಲ್ಲ ಒಂದು ಕಡೆ ರಾಮನಂಥವನು, ಇನ್ನೊಂದು ಕಡೆ ರಾವಣನಂಥವನು ಇರಬೇಕಾಗುತ್ತದೆ. ಇಲ್ಲಿ ನಮಗೆ ಗೊತ್ತು ನಟನಿಗೆ ರಾಮನ ಪಾತ್ರ ಮಾಡೋದು ಬಹಳ ಸುಲಭ. ರಾವಣನ ಪಾತ್ರ ಮಾಡುವುದೇ ಬಹಳ ಕಷ್ಟ. ಆದರೂ ಅವನು ಸವಾಲಾಗಿ ತೆಗೆದುಕೊಳ್ಳುವುದು ರಾಮನ ಪಾತ್ರ ಮಾಡುವುದಕ್ಕಲ್ಲ, ರಾವಣನ ಪಾತ್ರ ಮಾಡುವುದಕ್ಕೆ. ಏಕೆಂದರೆ, ರಾವಣನ ಪಾತ್ರ ಒಂದು ಬೇರೆಯದೇ ರೀತಿಯಲ್ಲಿ ಅದರಲ್ಲಿ ಕಾಣಿಸ್ತೀವಿ ಅಂತ ಇರುತ್ತೆ. ತಾನಾಗಿ ಕಾಣಿಸಿಕೊಳ್ಳುವುದಕ್ಕೆ ಆಗು ವುದಿಲ್ಲ. ರಾವಣನ ಮುಖಾಂತರ; ಆ ಇನ್ನೊಂದು ವ್ಯಕ್ತಿತ್ವದ ಮುಖಾಂತರ ನಾನು ಅದರಲ್ಲಿ ಕಾಣಿಸಿ ಕೊಳ್ಳುತ್ತೇನೆ. ಅದು ರಾಮನಿಗೆ ಸಾಧ್ಯವಿಲ್ಲ. ಏಕೆಂದರೆ ರಾಮ ಬಹಳ ತಟಸ್ಥ ವ್ಯಕ್ತಿ. ಅವನು ಶಾಶ್ವತ ಮುಖವಾಡ ಹಾಕಿಕೊಂಡವನು! ನಿಮಗೆ ಗೊತ್ತಿದೆ, ಮಹಾಭಾರತದಲ್ಲಿ ಕೃಷ್ಣ ಯಾವಾಗಲೂ ನಗುತ್ತಿರು ತ್ತಾನೆ. ಅದೂ ಒಂದು ತರಹ ಮುಖವಾಡವೇ. ಜಿ.ವಿ. ಅಯ್ಯರ್‌ರದು 'ಭಗವದ್ಗೀತೆ' ಸಿನಿಮಾ ನೋಡಿ ದಾಗ, ಅಲ್ಲಿ ಕೃಷ್ಣ ಯಾವುದೋ ಉಡುಪಿ ಹೋಟೆಲ್‌ನವನು ಅಂತ ಕಾಣಿಸುತ್ತೆ. 'ನೀನು ಏನೂ ನಟಿಸಬೇಡ, ಬರೀ ನಗುತ್ತಿರು' ಅಂತ ಹೇಳಿದ್ದಾರೆ ಅಂತ ಕಾಣುತ್ತೆ — ಶಾಶ್ವತ ಮುಖವಾಡಗಳಿವು. ಈ ಥರಾ ಮುಖವಾಡಗಳು ನಮ್ಮ ಜೀವನದಲ್ಲಿ ತುಂಬ ಇರುತ್ತವೆ. ಏಕೆಂದರೆ, ವಯಸ್ಸು ಆಗುತ್ತ ಆಗುತ್ತ ಅವರ ಮುಖವೇ ಒಂದು ಮುಖವಾಡವಾಗಿಬಿಡುತ್ತೆ. ಆಮೇಲೆ ಅವರು ನಗುವುದೂ ಗೊತ್ತಾಗಿ ಬಿಡುತ್ತದೆ. ನಗು ಅವರನ್ನು ಒಂದು ತರಹ ಅಂಟಿಕೊಂಡುಬಿಟ್ಟಿರುತ್ತದೆ. ಹೀಗೇ ಎಷ್ಟೊಂದು ಮುಖವಾಡಗಳಿರುತ್ತವೆ.

ಭೇಟಿಯಾದಾಗ 'ಹೇಗಿದ್ದೀರ' ಅಂದಾಗ ಅದು ಶಾಶ್ವತ ಮುಖವಾಡ! ಇದು ನಮ್ಮ ಬದುಕಿನಲ್ಲಿದೆ. ಆದರೆ ನಾಟಕಕ್ಕೆ ಬಂದಾಗ ಅಂಥ ಶಾಶ್ವತತೆ ಸಾಧ್ಯವಿಲ್ಲ. ಅಲ್ಲಿ ನಟ ಸಾಮಾನ್ಯ ವ್ಯಕ್ತಿಯಲ್ಲ. ಆದ್ದರಿಂದ ನಟ ಬೇರೆ ಬೇರೆ ರೂಪಗಳನ್ನು ತಗೋಬೇಕಾಗುತ್ತದೆ. ಬೇರೆ ರೂಪ ತೆಗೆದುಕೊಳ್ಳುವುದಕ್ಕೂ ಮೊದಲು, ಆ ನಟ ರೂಪದಲ್ಲಿ ಇರುವಂಥವನಿಗೆ ನಿಮ್ಮ ರೂಪವೇ ಇರುವುದರಿಂದ ಅವನು ನಟನಾಗಬೇಕಾದರೆ ತನ್ನ ಸ್ವರೂಪವನ್ನು ತಿಳಿದುಕೊಳ್ಳಬೇಕಾಗುತ್ತದೆ. ಅಂದರೆ ರೂಪದಿಂದ ಸ್ವರೂಪ. 'ಸ್ವರೂಪ' ಅಂದರೆ ತನ್ನ ಒಳಗಿನ ಅಂತರ್‌ಲೋಕವನ್ನು ನೋಡಬೇಕಾಗುತ್ತದೆ. ಉದಾಹರಣೆಗೆ ಮಕ್ಕಳು ಆಟವಾಡುತ್ತಾರಲ್ಲ 'ಅಮ್ಮಾ ನಾನೀಗ ಇದ್ದೀನಿ, ನಾನೀಗ ಇಲ್ಲ' ಅಂದರೆ, ತಾವೇ ಕಣ್ಣುಮುಚ್ಚಿಕೊಂಡು 'ಇದ್ದೀನಿ' 'ಇಲ್ಲ' ಅನ್ನುತ್ತ ಹೇಳುವ ಆಟ ಇದೆಯಲ್ಲ ನಾಟಕಕ್ಕೆ ಅದು ಸಾಧ್ಯ. ಏಕೆಂದರೆ ನಾಟಕದಲ್ಲಿ ಇಂಥ ಎಲ್ಲ ಅಧಿಕತಮತೆ (Extremity) ತೋರಿಸೋದಕ್ಕೆ ಸಾಧ್ಯವಿದೆ. ಅದಕ್ಕೆ ಮೊದಲನೆಯ ಪ್ರಶ್ನೆ ಇಲ್ಲಿ ಬರೋದು ಅವನ ಸ್ವರೂಪದ ಬಗ್ಗೆ. ಆ ನಟನಿಗೆ ಆ ಪಾತ್ರಗಳ ಅಥವಾ ತನ್ನ ಸ್ವರೂಪವನ್ನು ನೋಡಬೇಕಾದರೆ ತನಗೆ ಏನೇನು ಗೊತ್ತಿದೆ ಅನ್ನಬೇಕಾದರೆ, ತನ್ನ ಸ್ವರೂಪವನ್ನು ಮೊದಲು ನೋಡಬೇಕಾಗುತ್ತದೆ. ತನ್ನ ರೂಪವನ್ನು ಭಂಗಿಯನ್ನು ವಿಶ್ಲೇಷಣೆ ಮಾಡಬೇಕಾಗುತ್ತದೆ. ಆಗಲೂ ಅವನು ಬೇರಾಗುವುದು ಸಾಧ್ಯವಿದೆ. ಏಕೆಂದರೆ ಬೇರೆಯಾಗುವುದೇ ಅವನ ಆದರ್ಶ. ಅದೇ ಅವನ ಗುರಿಯಾಗಿರುತ್ತದೆ. ನಾನು ಬೇರೆ ಆಗದೆ ಹೋದರೆ, ನಟನೇ ಅಲ್ಲ. ನಾನು ಒಳಗಡೆಯೂ ಒಂದೇ ತರಹ, ಹೊರಗಡೆಯೂ ಒಂದೇ ತರಹ ಆದರೆ ಸ್ಟಾರ್ ಆಗಿಬಿಡುತ್ತೇನೆ. ಸ್ಟಾರ್ ಅಂದರೆ ಗೊತ್ತು ನಿಮಗೆ, ಸಿನೆಮಾದಲ್ಲಿ ಹೇಗಿದ್ದಾನೋ ಹಾಗೇ ಹೊರಗಡೆಯೂ ನೋಡುವುದಕ್ಕೆ ಇಷ್ಟಪಡುತ್ತೇವೆ ನಾವು. ಅವನ ಕ್ರಾಪ್ ಬದಲಾಗಿಬಿಟ್ಟರೆ ನಾವು ಹೇಳ್ತೀವಿ. 'ಚೆನ್ನಾಗಿಲ್ಲ ಸಾರ್, ಅದೇ ಕ್ರಾಪ್ ಚೆನ್ನಾಗಿತ್ತು' ಅಂತ. ಅಮಿತಾಭ್‌ಗಾಗಲಿ, ರಾಜೇಶ್ ಖನ್ನಗೆ ಆಗಲಿ ನಾವು ಸ್ಟಾರ್‌ಗಳು ಅಂತ ಹೇಳುತ್ತೇವಲ್ಲ ಅದು ಸೂಪರ್‌ಸ್ಟಾರ್ ಆದ ಮೇಲೆ ಇನ್ನೂ ಕಷ್ಟ! ಅವರು ಮೀಸೆ ಬೋಳಿಸೋ ಹಾಗಿಲ್ಲ, ತಲೆ ಬೋಳಿಸೋ ಹಾಗಿಲ್ಲ ಎಲ್ಲ ಒಂದು ಅಳತೆ ಮಾಡಿಟ್ಟುಕೊಳ್ಳಬೇಕಾಗುತ್ತದೆ. ಆಗಲೇ ಸ್ಟಾರ್ ಆಗೋಕೆ ಸಾಧ್ಯವಿದೆ.

★

ನಟ ಹಾಗಲ್ಲ, ನಾನು ನಟ ಅಂತ ಹೇಳಬೇಕೆಂದರೆ, ರಂಗಭೂಮಿಯಲ್ಲಿ ಸೇರಿದವನಾಗಿರೋದರಿಂದ ಹಾಗೇ ಹೇಳೋದು. ರಂಗಭೂಮಿಯಲ್ಲೇ ನಿಜವಾದ ನಟ ಇರುವುದು. ಸಿನೆಮಾದಲ್ಲಿ ಮತ್ತು ದೂರದರ್ಶನದಲ್ಲಿ ಈಗ ನಟ ಅಂತ ಹೇಳೋದು ಬಹಳ ಕಡಿಮೆಯಾಗಿದೆ. ಏಕೆಂದರೆ, ಸಿನೆಮಾ ಜಾಹೀರಾತು ಬಂದುಬಿಟ್ಟರೆ ಅದರಲ್ಲಿ ಯಾರೂ ಇಲ್ಲ. ವ್ಯಕ್ತಿಗಳೇ ಬೇಕಿಲ್ಲ. ಆದರೆ ರಂಗಭೂಮಿಯಲ್ಲಿ ಇವತ್ತೂ ಕೂಡ ವ್ಯಕ್ತಿಯೇ ಬೇಕು. ಆದರಿಂದ ನಟನಿಗೆ ಮೊದಲು ತನ್ನ ಸ್ವರೂಪ ತಿಳಿದುಕೊಳ್ಳಬೇಕಾಗುತ್ತದೆ. ಆ ಸ್ವರೂಪ ತಿಳಿದುಕೊಳ್ಳಬೇಕಾದರೆ, ತನ್ನ ಸ್ವರೂಪ ಮಾತ್ರವಲ್ಲ, ನಾಟಕಕಾರ ಕೊಟ್ಟಂಥ ಪಾತ್ರಗಳನ್ನು ಅರ್ಥಮಾಡಿಕೊಳ್ಳುವುದಕ್ಕೋಸ್ಕರ ಅವನು ಉಳಿದವರ ಸ್ವರೂಪಗಳನ್ನು ನೋಡಬೇಕಾಗುತ್ತದೆ. ಆಗ ಉಳಿದವರ ಸ್ವರೂಪಗಳನ್ನು, ಮೂಲ ರೂಪಗಳನ್ನು ಅಧ್ಯಯನ ಮಾಡುತ್ತ ಮಾಡುತ್ತ ನಟ ಬಹುರೂಪ ಧರಿಸಬೇಕಾಗುತ್ತದೆ. ಆದ್ದರಿಂದ ಬಹುರೂಪಿಯ ಅಂತ ಒಂದು ಶಬ್ದ ಇದೆ. ಒಂದು ರೂಪ ಇದೆ ನಿಜ. ಅದು ತಟಸ್ಥ. ಅದು ಎಲ್ಲರಿಗೂ ಇದೆ. ಏನೂ ವ್ಯತ್ಯಾಸ ಇಲ್ಲ. ಆದರೆ ನಾನು ನಟನಾದ್ದರಿಂದ ಪಾತ್ರಗಳ ಮೂಲ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದನ್ನು ಅಭಿನಯಿಸಬೇಕಾದರೆ ನಾನು 'ಬಹುರೂಪಿಯ' ಆಗಬೇಕಾಗುತ್ತದೆ. ಆದರಿಂದ ರೂಪಿಯ

ಅಥವಾ ರೂಪಿ, ಸ್ವರೂಪಿಯ ಅಥವಾ ಬಹುರೂಪಿಯ ಇವು ಅವನ ಮೂರು ಹಂತಗಳು. ಈ ಬಹುರೂಪಿಯಾದ ಸಂದರ್ಭದಲ್ಲಿಯೇ ಒಂದು ರೀತಿಯ ಮುಖವಾಡ ಬಂತು. ಮುಖವಾಡ ನಮ್ಮಲ್ಲಿ ಆದಿವಾಸಿಗಳಿಲ್ಲದೆ, ಆದಿವಾಸಿಗಳಲ್ಲಿ ಮುಖವಾಡ ಬಹಳ ಪ್ರಸಿದ್ಧವಾದುದು. ನಮ್ಮ ದಕ್ಷಿಣ ಕನ್ನಡ ಅಥವಾ ಮಲೆನಾಡಿಗೆ ಹೋದರೆ ಭೂತಗಳಿಗೆಲ್ಲ ಒಂದು ಮುಖವಾಡಗಳಿವೆ. ಪಂಜುರ್ಲಿಯ ಮುಖವಾಡ ನೋಡಿದ್ದೀರ. ಬೇರೆ ಬೇರೆ ಮುಖವಾಡಗಳು ಇದ್ದೇ ಇರುತ್ತವೆ. ನಮ್ಮ ಯಕ್ಷಗಾನದವರ ಮೇಕಪ್ ನೋಡಿದ್ರೆ, ಮೇಕಪ್ ಸಹ ಮುಖವಾಡದ ಥರವೇ ಇರುತ್ತದೆ. ಕಥಕ್ಕಳಿಯ ಮೇಕಪ್ ಕೂಡ ಮುಖವಾಡದಂಥ ಮೇಕಪ್.

ಆ ತರಹದ ಮುಖವಾಡ ಒಂದಲ್ಲ ಒಂದು ರೀತಿಯಲ್ಲಿ ನಮ್ಮಲ್ಲಿನ ಆಚರಣೆಯ, ಒಂದು ಅನುಷ್ಠಾನದ ಅಂಗವಾಗಿದೆ. ಒಂದು ಧಾರ್ಮಿಕ ಕ್ರಿಯೆಯ ಅಂಗವಾಗಿರುವುದರಿಂದ ಅಲ್ಲಿ ಅದಕ್ಕೆ ನಾವು ಬೇರೆಯ ಅರ್ಥವನ್ನು ಕೊಡುತ್ತೇವೆ. ಆದರೂ ನಮ್ಮ ಸಾಮಾನ್ಯ ಬದುಕಿನಲ್ಲಿಯೂ ಕೂಡ ಮುಖವಾಡ ಒಂದೊಂದು ಸಲ ಎಂತೆಂಥ ಅರ್ಥ ಕೊಡುತ್ತವೆ ಅಂದರೆ, ಅದಕ್ಕೆ ಭೂತಕಾಲದ ಪೂರಾ ಇತಿಹಾಸವಿರುತ್ತೆ; ನಮ್ಮ ಚರಿತ್ರೆಯ ಅಂಕಿತವಾಗಿರುತ್ತೆ. ಚರಿತ್ರೆಯ ಅಂಕಿತವಾಗಿರುವುದೆಂದರೆ, ನಮ್ಮ ಇತಿಹಾಸ ಬರೆದ ಹಾಗಲ್ಲ; ಪುಸ್ತಕದಲ್ಲಿ ಬರೆದಿಟ್ಟ ಹಾಗಲ್ಲ. ಮುಖವಾಡ ನೋಡಿದ ಕೂಡಲೇ ನೀವು ಅದನ್ನು ಚಿತ್ರಿಸುತ್ತ, ಬರೆಯುತ್ತ ಹೋಗುತ್ತೀರ, ಹೇಳ್ತಾ ಹೋಗುತ್ತೀರ. ಮಾತನಾಡುತ್ತ ಹೋಗುತ್ತೀರ. ಆ ಮುಖವಾಡಕ್ಕಿಂತ ಹೆಚ್ಚು ನೀವು ಮಾತನಾಡುತ್ತ ಹೋಗುತ್ತೀರ. ಯಾಕೆಂದರೆ, ಮುಖವಾಡ ನಿಮ್ಮನ್ನು ಮಾತನಾಡಿಸುವುದಕ್ಕೆ ಪ್ರಾರಂಭಿಸುತ್ತೆ. ಆದ್ದರಿಂದ ಮುಖವಾಡಗಳಿಗೆ ಬೇರೆ ಬೇರೆ ಐತಿಹ್ಯಗಳು ಬರುತ್ತೆ. ನಾನು ಧಾರ್ಮಿಕ ಆಚರಣೆಯ ಮುಖವಾಡದ ಬಗ್ಗೆ ಹೇಳುತ್ತಿಲ್ಲ. ನಮ್ಮ ಬದುಕಿನಲ್ಲಿ — ನಮ್ಮ ಚಿತ್ರಗಳನ್ನು ನೋಡಿದಾಗ ಅಥವಾ ಮಕ್ಕಳಿಗೆ ಆಟವಾಡಿಸಬೇಕಾದರೂ ಕೂಡ ಈ ಮುಖವಾಡಗಳು ಒಂದೊಂದು ಸಲ ನಮಗೆ ಭಯ,ಆತಂಕ ಎಲ್ಲ ಹುಟ್ಟಿಸಿಬಿಡುತ್ತೆ. ಅಷ್ಟೇ ಅಲ್ಲ, ಮಗುವಿನ ನಗು ಮುಖ ಕೂಡ ಒಂದೊಂದು ಸಲ ಭಯ ಹುಟ್ಟಿಸಿಬಿಡಬಹುದು. ಏಕೆಂದರೆ, ಯಾವುದೋ ಒಂದು ಕಾರಣದಿಂದ ಆ ಮಗುವಿನ ಮುಖ ಸಂತೋಷ ಕೊಡದೆ, ನೋವು ಕೊಡುತ್ತೆ. ನೋವು ಮಾತ್ರವಲ್ಲ ಭಯ ಕೊಡುತ್ತದೆ. ನಂತರ ಸ್ವಪ್ನದಲ್ಲಿ ಬರುವುದಕ್ಕೆ ಪ್ರಾರಂಭವಾಗುತ್ತದೆ. ಅಂದರೆ ಇದೆಲ್ಲ ನಾಟಕದ ಸಮಸ್ಯೆಗಳಾಗಿರುವುದರಿಂದ ನಿಮಗೆಲ್ಲ ಹೇಳುತ್ತಿರುವುದು. ಅಲ್ಲಿ ಮುಖವಾಡಗಳು ಗಟ್ಟಿಯಾಗಿಬಿಡುತ್ತವೆ. ಅದಕ್ಕೆ ಮುಖವಾಡಗಳನ್ನು ನೋಡಿದಾಗ ಕೆಲವರಿಗೆ ಯಾವಾಗಲೂ ಕೂಡ ಭಯ ಹುಟ್ಟೋದು, ಆತಂಕ ಹುಟ್ಟೋದು ಇವೆಲ್ಲ ಇರುತ್ತವೆ. ಅದಕ್ಕೋಸ್ಕರ ನಾವು ಮಕ್ಕಳೆಲ್ಲ ಆಟವಾಡುತ್ತಿರಬೇಕಾದರೆ ಜೀವನದಲ್ಲಿ ಒಂದು ಸಲ ಹೀಗೆ ಹೆದರಿಸುತ್ತಾರೆ ಅಂದುಕೊಳ್ಳಿ. ಒಂದು ಸಣ್ಣ ಘಟನೆ.

ಇಬ್ಬರು ಹುಡುಗಿಯರು ಆಟವಾಡುತ್ತಿದ್ದರೆ. ಒಬ್ಬ ಹುಡುಗ ಮುಖವಾಡ ಹಾಕಿಕೊಂಡು 'ಹ್ಹಹ್ಹಹ್ಹ' ಅಂತ ಗುರುಗುಟ್ಟಿಕೊಂಡು ಹೆದರಿಸುತ್ತಿದ್ದ. ಆ ಹುಡುಗಿಯರಿಬ್ಬರೂ 'ನಮ್ಮನ್ನು ಕಾಪಾಡಿ, ಕಾಪಾಡಿ!' ಅಂತ ಕೂಗಿಕೊಳ್ಳುತ್ತಿದ್ದರು, ಅದೇ ಆಟ ಅವರದು. ಆದರೆ, ಒಂದು ಸಲ ಆ ಹುಡುಗನಿಗೆ ಆವೇಶ ಬಂದು, ನಿಜವಾಗಲೂ ಹಿಡಿದುಬಿಟ್ಟಿದ್ದ. ಹಿಡಿದುಬಿಟ್ಟಾಗ ಆ ಹುಡುಗಿಯರು ಕಿರುಚಿಬಿಟ್ಟರು. 'ಏ ಆಟವಾಡುವಾಗ ಮುಟ್ಟಬಾರದು, ಅಂತ ನಿಯಮ' ಅಂತ. ಆದರಿಂದಲೇ ನಾನು ಹೇಳಿದ್ದು ಅಲ್ಲಿಗಿಲ್ಲಿಗೆ ಇರುವ ವ್ಯತ್ಯಾಸ ಇದು. ಈ ವ್ಯತ್ಯಾಸ ಇದ್ದರೂ ಕೂಡ ನಾವು ಯಾಕೆ ಸುಮ್ಮನೆ ಸಂತೋಷ ಪಡುವುದಕ್ಕೆ ಹೋಗುವುದಿಲ್ಲ? ನಾಟಕ ನೋಡುವಾಗ ಅಂದರೆ, ಅಲ್ಲಿ ಬದುಕಿನ ತಾಕಲಾಟ ತಂದು ಕೊಂಡುಬಿಡುತ್ತೇವೆ. ಮತ್ತೆ ನಾವದನ್ನ ಹಳೀತೀವಿ. 'ಲೋಕೋ ಭಿನ್ನರುಚಿಃ' ಅಂತ ಹೇಳಿದ್ದು ಈ

ಕಾರಣಕ್ಕೆ. ಅದು ಬೇರೆ ಮಾಧ್ಯಮಕ್ಕೆ ಸಾಧ್ಯವಿಲ್ಲ. ಅದಕ್ಕೆ ಈ ಮುಖವಾಡ ಒಂದು ಅನಿವಾರ್ಯ ಆಗಿಬಿಡುತ್ತೆ.

★


ಗ್ರೀಕ್ ನಾಟಕದಲ್ಲಿ ಮುಖವಾಡ ಎಷ್ಟು ಮುಖ್ಯವಾಗಿತ್ತು ಎನ್ನುವುದು ನಿಮಗೆಲ್ಲರಿಗೂ ಗೊತ್ತು. ಮೂರು ಸಾವಿರ ವರ್ಷಗಳ ಹಿಂದೆಯೇ ಅವರು ಮುಖವಾಡ ಉಪಯೋಗಿಸುತ್ತಿದ್ದರು. ಮುಖವಾಡ ಯಾಕೆ ಬಂತು ಅಲ್ಲಿ? ಕಾರಣವೇನೆಂದರೆ, ಅವರದ್ದೂ ಕೂಡ ಪುರಾಣ ಕತೆಗಳು. ಪುರಾಣ ಕತೆಗಳಲ್ಲಿ ಬರುವ ಪಾತ್ರಗಳು. ಅದು ಅವರ ವಾಸ್ತವಿಕ ಜೀವನಕ್ಕೆ ಸಂಬಂಧಪಟ್ಟಿರುವುದಲ್ಲ. ಅವರ ಹಿಂದಿನ ಕತೆಗಳು. ಈಗಿನ ಕಾಲದಲ್ಲಿ ಬಂದುಬಿಟ್ಟರೆ ಆ ನಂಬಿಕೆಯೇ ಬರುವುದಿಲ್ಲ. To make believe ಅಂತಾರಲ್ಲ ಆ ಕಲ್ಪನೆಗೆ ಸಹಾಯಕವಾಗಿ ಮೊದಲು ಹಿಮ್ಮೇಳದಲ್ಲಿ ಒಟ್ಟಿಗೇ ಹಾಡುತ್ತಿದ್ದರು. ಹಾಡುವಾಗ ಶ್ರೋತೃಗಳು ಬರಿಯ ಕಲ್ಪನೆಯಿಂದ ಅರ್ಥಮಾಡಿಕೊಳ್ಳುತ್ತಿದ್ದರು. ಆಮೇಲೆ ಒಬ್ಬ ನಟ ಹುಟ್ಟಿಕೊಂಡ. ಈಸ್ಕಿಲಸ್ ಬಂದ. ಒಬ್ಬನೇ ನಟ ಇದುದ್ದರಿಂದ ಅವನೇ ಬೇರೆ ಬೇರೆ ಮುಖವಾಡ ಹಾಕಿಕೊಂಡು ಬರುತ್ತಿದ್ದ. ಒಂದು ಅಳುಮುಖ –ಒಂದು ನಗುಮುಖ — ಮುಖ್ಯವಾಗಿ ಎರಡು ಮುಖಗಳಿದ್ದವು. ಆಮೇಲೆ ಇಬ್ಬರು ನಟರು ಬಂದರು. ಸೋಫೋಕ್ಲಿಸ್ ಬಂದಾಗ ಮೂರು ಮುಖವಾಡಗಳು ಬಂದವು ಅಂತ ಹೇಳುತ್ತಾರೆ. ಅಂದರೆ ಮುಖವಾಡದ ಕತೆ ಇಲ್ಲಿದೆ.

(ಭಾಷಣವೊಂದರ ಆಯ್ದ ಭಾಗ)

ಕ್ಯಾಸೆಟ್ಟಿನಿಂದ ಕಾಗದಕ್ಕೆ : **ಎಂ.ಆರ್. ಭಗವತಿ**



ಕಥನ ಮತ್ತು ಸಂಸ್ಕೃತಿ



■ **ವೆಂಕಟ್ರಮಣಗೌಡ**

'ಕೇಳು ಜನಮೇಜಯ...'

ಕಥನ ಸಂಸ್ಕೃತಿಯ ಅನನ್ಯ ರೂಪಕದಂತಿದೆ ಈ ಸೊಲ್ಲು. ಪ್ರಭುತ್ವವನ್ನು ಮಣಿಸುವ, ಮೀರುವ, ತಿದ್ದುವ, ನಿರ್ದೇಶಿಸುವ ಮತ್ತು ಲೋಕಜ್ಞಾನವನ್ನು ಅದಕ್ಕೆ ಕೊಡುವ ಧ್ಯಾನ ಹಾಗೂ ಧ್ಯಾಸದಲ್ಲಿ ಕಥನದ ಪರಂಪರೆಯಿರುವುದು. ಅದಕ್ಕಿಂತಲೂ ಮಿಗಿಲಾಗಿ, ಅಬಾಧಿತ ಅವಿಭಾಜ್ಯತೆಯೆಂಬಂತೆ ಸಂಸ್ಕೃತಿಯೇ ಒಂದು ಕಥನವೂ, ಕಥನವೇ ಸಂಸ್ಕೃತಿಯ ಸಂವಿಧಾನವೂ ಆಗಿದೆ.

ಒಬ್ಬ ವಾಲ್ಮೀಕಿಯ ರಾಮಾಯಣವನ್ನು ಎಷ್ಟೆಲ್ಲ ಕವಿಗಳು ಮರಳಿ ಮರಳಿ ಕಂಡುದಕ್ಕೆ, ವ್ಯಾಸ ಪ್ರಜ್ಞೆಯ ಮಹಾಭಾರತವನ್ನು ಮತ್ತೆಷ್ಟೋ ಪ್ರಜ್ಞೆಗಳು ಪ್ರವೇಶಿಸಿದುದಕ್ಕೆ ಕಥನದ ಸಾತತ್ಯವೇ ಮಾರ್ಗವಾದದ್ದು. ರಾಮಾಯಣದ, ಮಹಾಭಾರತದ ಅಷ್ಟೊಂದೂ ಆವೃತ್ತಿಗಳು ಕಾಲ, ಸ್ಥಿತಿ ಮತ್ತು ಮನೋಧರ್ಮದ ಅಂತರದಲ್ಲಿ, ಅಷ್ಟೇ ಬೇರೆ ವಿನ್ಯಾಸದಲ್ಲಿ ವ್ಯಕ್ತಗೊಂಡಂಥವು. ಆದರೆ ಅವತ್ತಿನ ಕ್ರೌಂಚ ಮಿಥುನದ ದುರಂತ ಇವತ್ತಿಗೂ ಉಳಿದಿದೆ; ಅಂದಿನ ದಾಯಾದಿ ಮತ್ಸರ ಈಗಲೂ ನಡೆದಿದೆ. ಅಲ್ಲಿಗೆ, ಸ್ಥಿತ್ಯಂತರಬ ಈಚೆಗೂ ಬಿಡುವಿರದ ಜಂಗಮದ ನಡುವೆಯೂ ಕಥನದ ಮೂಲ ದ್ರವ್ಯವೊಂದು ತನ್ನ ಸತ್ಯದ ಅನುಸಂಧಾನವನ್ನು ದಾಖಲಿಸಿಕೊಳ್ಳುತ್ತಲೇ ಇರುತ್ತದೆ ಎಂದಾಯಿತು; ಅಲ್ಲಿಗೆ, ಬೇರೆ ಬೇರೆ ರೂಪ, ಭಾವ, ಬಗೆಗಳಲ್ಲಿ ಸಿಗುವ ಕಥನದ ಬಿಂದು ತಲತಲಾಂತರಗಳಿಂದ ನಮಗೆದುರಾಗಿಯೇ ಬಂದದ್ದು, ತಲ್ಲಣ-ತನ್ಮಯತೆ ಎರಡೂ ಆಗಿ ನಮ್ಮನ್ನು ನುಡಿಸುತ್ತ-ನಡೆಸುತ್ತಲೇ ಬಂದದ್ದು ಎಂದಾಯಿತು.

ಕಾಲದ ಜತೆಗಿನ ನಿರಂತರ ಯಾನವಾದ ಕಥನವು ನಮ್ಮ ಬದುಕು, ಭಾವನೆ ಮತ್ತು ನಮ್ಮ ಜಗತ್ತಿನ ಪರಿಭಾಷೆಗಳು ಬದಲಾದಷ್ಟೂ, ಅವೆಲ್ಲವನ್ನೂ ಒಳಗೊಳ್ಳುತ್ತಲೇ ಹೋಗುತ್ತದೆ. ಕಥೆ ಶುರುವಾಗುವ 'ಒಂದಾನೊಂದು ಕಾಲ' ವರ್ತಮಾನವೂ ಹೌದು; 'ಒಂದಾನೊಂದು ಊರು' ಇದೇ ಪರಿವೇಷವೂ ಹೌದು.

'ಯಾವುದೇ ಜನರ ಪುರಾಣಕಥೆಗಳು ಅವರ ಕನಸು ಮತ್ತು ಕೋಟಲೆಗಳ ದಾಖಲೆಯಾಗಿರುತ್ತವೆ' ಎನ್ನುತ್ತಾರೆ ಲೋಹಿಯಾ. ಯಾವುದೇ ಕಾಲದ ತುಡಿತ-ತಳಮಳಗಳು ಕಥನದ ಸಂಜ್ಞೆಗಳಲ್ಲಿ ವ್ಯಕ್ತಗೊಳ್ಳ ಲೋಸುಗ ಹೇಗೆಲ್ಲಾ ಅಸೂಕ್ಷ್ಮ ಗತಿಯಲ್ಲಿ ದೂರವನ್ನು ಕ್ರಮಿಸುತ್ತವೆ ಎಂಬುದು ಆಸಕ್ತಿ ಕೆರಳಿಸುವಂಥದ್ದಾಗಿದೆ.

ಮಾನಸಿಕ ಸನ್ನಿಧಾನ

ಏಕಕಾಲಕ್ಕೇ ಕಥನವು ಹೇಳುವ, ಕೇಳುವ ಮತ್ತು ಕಾಣುವ ಪ್ರಕ್ರಿಯೆಯಾಗಿದೆ. ಸಂಸ್ಕೃತಿಯೊಂದನ್ನು ನೆರವೇರಿಸುವ ಬಹು ಮಹತ್ತ್ವದ ಮತ್ತು ವಿಶಿಷ್ಟವಾದ ಈ ಪ್ರಕ್ರಿಯೆಗಳು ಸಾಂಗತ್ಯದಲ್ಲಿದ್ದೂ ಸಮಾನಾಂತರವನ್ನೇರ್ಪಡಿಸಿಕೊಂಡು ಜರುಗುತ್ತವೆ. ಹೇಳುವ, ಕೇಳುವ ಮತ್ತು ಕಾಣುವ ಕಥೆ ಒಂದೇ ಆದರೂ, ಅವು ಚಹರೆಯನ್ನು ಗಳಿಸುವುದು ಮನಸ್ಸಿನ ಬೇರೆ ಬೇರೆ ಪಾತಳಿಗಳಲ್ಲಿ. ಹಾಗಾಗಿ, ಯಾವುದೇ ಸಂಸ್ಕೃತಿಯ ಕಥನ ಆ ಸಂಸ್ಕೃತಿಯ ಮನಸ್ಸಿನದ್ದಾಗಿರುತ್ತದೆ. ಅಂತೆಯೇ ಮೇಲೆ ಹೇಳಿದ ಮೂರೂ ಪ್ರಕ್ರಿಯೆಗಳಲ್ಲಿ ಕಥನದ ಮಾನಸಿಕ ದಾಖಲಾತಿಯೇ ಮುಖ್ಯ; ಜರೂರಿನದ್ದೂ ಕೂಡ. ಹೀಗೆ ಕಥನ ಸಂಸ್ಕೃತಿ ಅನುವಾಗುವುದು ಮನಸ್ಸಿನ ಆವರಣದಲ್ಲಿ; ಕಥನದ ಜಗತ್ತು ನಿಶ್ಚಯವಾಗುವುದು ಭಾವಗಳ ಜಗುಲಿಯಲ್ಲಿ. ಆವರಣದ ನಂತರವೇ ಅನಾವರಣ; ಜಗುಲಿಯಿಂದಲೇ ಜಗದಗಲದ ಕಡೆಗಿನ ದಾರಿ.

ಭಾರತೀಯ ಸಮಾಜ ರಚನೆಯ ಬಾಹ್ಯ ರೂಪವನ್ನು ಗ್ರಹಿಸಲು ನೆರವಾಗುವಂಥ ಚಿಂತನೆಗೆ ಕಾರಣರಾದ ಇತಿಹಾಸ ಸಂಶೋಧಕ ಧರ್ಮಪಾಲ್, 'ಭಾರತೀಯ ಪ್ರಾಚೀನ ವಾಙ್ಮಯದಲ್ಲಿ ಕಾಣುವ ಮೌಲ್ಯಯುತ ಸಂಗತಿಗಳು ಮತ್ತು ಮೇಲಿಂದ ಮೇಲೆ ವ್ಯಕ್ತವಾಗುವ ಅಂಶಗಳು ಭಾರತೀಯ ಚಿತ್ತ-ಕಾಲಗಳ ಸಹಜ ವೃತ್ತಿಯನ್ನು ನಿರೂಪಿಸುತ್ತವೆ' ಎಂದು ಹೇಳಿರುವಲ್ಲಿಯೂ ಕೂಡ ಕಥನದ ಮಾನಸಿಕ ಸನ್ನಿಧಾನವನ್ನು ಗ್ರಹಿಸಬಹುದಾಗಿದೆ. ನಮ್ಮದಾಗಿರುವ ಒಂದು ಕಥೆ ನಮ್ಮ ಸಮಾಜದ್ದೂ ನಮ್ಮ ಪರಂಪರೆಯದ್ದೂ ಆಗಿರುತ್ತಲೇ, ಕಾಲದ ವಿವಿಧ ಘಟ್ಟ ಮತ್ತು ತಿರುವುಗಳ ಸಂಬಂಧದಲ್ಲಿ ಇನ್ನೊಬ್ಬರದ್ದೂ ಆಗಿರಬಹುದು. ಹಾಗಿದ್ದೂ ಕಥೆ ಹಂಚಿಹೋಗುವುದಿಲ್ಲ. ಅದು ಎರಡು ಮನಸ್ಸುಗಳ ಪರಂಪರೆಯನ್ನು ಒಂದು ಭಿತ್ತಿಯಲ್ಲಿ ಸಂವಾದಕ್ಕೆ ಸೇರಿಸುವ ಕೆಲಸ ಮಾಡುತ್ತದೆ. ನಮಗೆ ಅನ್ನಿಸಿದ್ದು ಇನ್ನೊಬ್ಬರಿಗೂ ಅನ್ನಿಸಬಹುದಾದ, ಯಾವುದ್ದೋ ಒಂದು ಕಾಲದ್ದು ಮತ್ತೊಂದು ಕಾಲದ ಭಾಗವೂ ಆಗಬಹುದಾದ ಸಾಧ್ಯತೆಯಿದೆಯಲ್ಲ, ಅಂಥ ಗೆರೆಯನ್ನು ಗ್ರಹಿಸುವ ಕ್ರಮವೇ ಕಥನದ ಕ್ರಮ.

ಹೆಣ್ಣೆಂಬ ಪಾವಿತ್ರ್ಯ ಮತ್ತು ಸಾತತ್ಯ

ನೀರಿನಲ್ಲಿ ಮೀನಿನ ಹೆಜ್ಜೆಯನ್ನಾದರೂ ಗುರುತಿಸಬಹುದು, ಆದರೆ ಹೆಣ್ಣಿನ ಚಾಂಚಲ್ಯವನ್ನು ತಿಳಿಯಲಾಗದು ಎಂದ ಕೃಷ್ಣನ ಮಾತಿನಲ್ಲಿ ಒಮ್ಮೆಲೆ ನೂರಾರು, ಸಾವಿರಾರು ಕಥೆಗಳ ಪ್ರವರ್ತನೆಯಾಗುವಂತೆ ಕಾಣಿಸುತ್ತದೆ. ಭೂಮಿಯಿಂದ ಶುರುವಾಗುವ ಹೆಣ್ಣಿನ ಚರಿತ್ರೆ ರಾಣಿಯಿಂದ ಮೊದಲಾಗಿ ದಾಸಿ ಅಥವಾ ಕಾರ್ಮಿಕಳವರೆಗಿನ ಹಲವು ನಿಲುವುಗಳಲ್ಲಿ, ಸಂವೇದನೆಗಳಲ್ಲಿ, ಸ್ವಭಾವಗಳಲ್ಲಿ ಬರೆಯಿಸಿಕೊಂಡದ್ದಾಗಿದೆ. ಒಂದು ಸಂಸ್ಕೃತಿಯ ಪ್ರಭಾವದಲ್ಲಿ ಹೆಣ್ಣನ್ನು ಕಾಣುವುದು ಅಥವಾ ಚಿತ್ರಿಸುವುದು ಮತ್ತು

ಹೆಣ್ಣೊಬ್ಬಳ ವೈಯಕ್ತಿಕತೆಯಲ್ಲಿ ಸಮೂಹವನ್ನು ಗ್ರಹಿಸುವುದು ಇವೆರಡೂ ಕಥನದ ಧಮನಿಗಳಲ್ಲಿ ಸೇರಿಹೋಗಿರುವ ಪರಿಚಲನೆಗಳೇ ಆಗಿವೆ.

ಹಾಗೆ ನೋಡಿದರೆ, ಹೆಣ್ಣಿನ ಚರಿತ್ರೆಯಿಲ್ಲದೆ ಕಥನದ ಸಾಧ್ಯತೆಯನ್ನು ಊಹಿಸುವುದೂ ಪ್ರಾಯಶಃ ಅಸಾಧ್ಯ. ಮಹಾಭಾರತವನ್ನು ತೆಗೆದುಕೊಂಡರೆ, ದುರ್ಯೋಧನನ ವಿಷಯದಲ್ಲಿ ಪ್ರತೀಕಾರದ ಬೆಂಕಿಯೇ ಆಗಿರುವ ದ್ರೌಪದಿ ತಾನು ಮನಸಾರೆ ಯಾವ ಗಂಡಸಿಗೆ ಒಲಿದಿರುವಳೋ ಆ ಕರ್ಣ ದುರ್ಯೋಧನನ ಪರಮಾಪ್ತ ಸ್ನೇಹಿತನಾಗಿರುವುದೇ ಮಹಾಭಾರತದಲ್ಲಿ ನಿಜವಾದ ಸಂಘರ್ಷ ಎನ್ನಿಸುವುದಿಲ್ಲವೇ? ದ್ರೌಪದಿಯಿಲ್ಲದಿದ್ದರೆ ಮಹಾಭಾರತ, ಸೀತೆ ಇಲ್ಲದಿದ್ದರೆ ರಾಮಾಯಣ ಇಲ್ಲಿಯವರೆಗೂ ನಿಲ್ಲುತ್ತಿದ್ದವೊ ಇಲ್ಲವೊ. ಅದಕ್ಕಿಂತ, ಯುಗಾಂತರದ ತಲೆಮಾರುಗಳ ವರ್ತನೆಗೂ ಹೊಂದುವಷ್ಟು ಅಧಿಕೃತತೆಯಲ್ಲಿ ಅವುಗಳ ಚರ್ಯೆ ಸ್ಫುಟಗೊಳ್ಳುತ್ತಿರಲಿಲ್ಲ.

ಹೆಣ್ಣಿನ ಚರಿತ್ರೆ ಮತ್ತು ಕಾಲದ ಚರಿತ್ರೆ ನೈಸರ್ಗಿಕ ಮತ್ತು ಭಾವನಾತ್ಮಕ ನೆಲೆಯಲ್ಲಿ ಸಂಯೋಗವೆನ್ನ ಬಹುದಾದಂಥ ಒಂದು ಸ್ಥಿತಿಯಲ್ಲಿ ಬರುವಂಥವು. ಜನಪದದ ಒಂದು ಸಂಸ್ಕೃತಿಯಲ್ಲಿ ಹೆಣ್ಣುಮಗಳೊಬ್ಬಳು ಬಸುರಿ ಎಂಬುದನ್ನು 'ಹೊತ್ತಿನಲ್ಲಿದ್ದಾಳೆ' ಎನ್ನುವ ಮೂಲಕ ಸಂವೇದಿಸುವುದುಂಟು. ಹೀಗೆ, ತಾಯಾಗು ವವಳ ಚೈತನ್ಯವನ್ನು 'ಹೊತ್ತು' ಎಂದು ಪರಿಭಾವಿಸುವುದೇ ಒಂದು ಘನ. ಇಂಥದೊಂದು ನೆಲದ ದೃಢತೆಯನ್ನು ಹೊಂದಿರುವ ಸಮಯದ ಬಗೆಗಿನ ಪ್ರಜ್ಞೆ ಬದುಕನ್ನು ನೇಯುವ ಅಂತಃಸತ್ವವುಳ್ಳದ್ದೂ ಬದುಕನ್ನು ಕಾಣುವ ಅಂತರ್ಮುಖಿಯೂ ಆಗಿದೆ. ಸದ್ದಿನ ಜಗತ್ತಿನಿಂದ ದೂರವಿರುವ ಬೇರೆಯೇ ಆದ ಪ್ರಜ್ಞೆ ಇದು. ಮಂದಿ ಸುಳಿವ ಅಲೆ ತಣ್ಣಗಾಗುತ್ತಿದ್ದಂತೆ ರಾತ್ರಿಯಲ್ಲಿ ದೇವರು ನಡೆದುಬರುತ್ತಾನೆ, ಪಂಜಿನ ಬೆಳಕಿನಂಥ ಬೆಳಕಿನೊಂದಿಗೆ ಮೈಯಿದ್ದೂ ಇಲ್ಲದಂಥ ದೇವರು ನಡೆದುಹೋಗುತ್ತಾನೆ ಎಂಬಿತ್ಯಾದಿ ಚಿತ್ರಗಳು ಜನಪದ ನಂಬಿಕೆಯಲ್ಲಿವೆ. ಮಳೆಗಾಲದಲ್ಲಿ ಬೆಟ್ಟದ ಹಳ್ಳ ಪ್ರವಾಹದೋಪಾದಿಯಲ್ಲಿ ಜಿಚ್ಚುವುದು ಮಂದಿಯೆಲ್ಲ ಮಲಗಿರುವ ರಾತ್ರಿಯಲ್ಲೇ; ಮತ್ತು ಜನ ಎಚ್ಚರಾಗುತ್ತಿದ್ದಂತೆ ತುಂಬಿಕೊಂಡು ಹರಿಯುತ್ತಿದ್ದ ಹಳ್ಳ ಇಳಿದು ಮೊದಲಿನ ಸ್ಥಿತ ರೂಪ ಹೊಂದುತ್ತದೆ ಎಂಬ ಮಾತುಗಳಿವೆ. ಬದುಕಿನ ಸಮಯಕ್ಕಿರುವ ಶುದ್ಧ ಮೌನದ ದಾರಿಯೊಂದನ್ನು ಈ ಮಾತುಗಳು ಹೊಳೆಯಿಸುವಂತೆ ಕಾಣಿಸುತ್ತದೆ. ಕಡೆಗೂ ಎಲ್ಲ ಸದ್ದುಗಳ ನಂತರ ಗಾಢವಾಗುವುದು ಮೌನವೇ. ಹೆಣ್ಣಿನ ಚರಿತ್ರೆಯ ಮೊದಲ ಪುಟವಾದ ಭೂಮಿ ಈ ರೂಪಿನ ಸತ್ಯ. ಭೂಮಿ ಫಲವತಿ. ಅವಳು ಪ್ರೀತಿಸುವ ಶಕ್ತಿ ಅಂಥ ಆರ್ದ್ರತೆಯನ್ನು ಸದಾ ಕಾಯುವ ಹಿರಿ ಭಾವದಲ್ಲಿ ನಿಕ್ಕಿಯಾಗಿರುವ ಈ ಜಗತ್ತಿನ ನೆಲೆ. ಅವಳ ಬಸಿರು ಜೀವವನ್ನು ದಯಪಾಲಿಸುವುದೂ ಜೀವವನ್ನು ಸಹಜ ಗೊಳಿಸುವುದೂ ಆಗಿದೆ. ಬದುಕಿನ ಬಗೆಗಿನ ಸೌಜನ್ಯವೊಂದೇ ಉತ್ತುಂಗದ್ದಾದುದರಿಂದ ಭೂಮಿ ಅಥವಾ ಹೆಣ್ಣು ಈ ಜಗದ ಪಾವಿತ್ರ್ಯ ಮತ್ತು ಸಾತತ್ಯ. ಪಾವಿತ್ರ್ಯ ಮತ್ತು ಸಾತತ್ಯವಿಲ್ಲದೆ ಕಥನವಿಲ್ಲ.

ವರ್ತನೆಯ ವ್ಯಾಕರಣ

ಯಾವುದೇ ಕಾಲದ ಕಥೆಯೂ ತನ್ನ ಕಾಲವನ್ನು ಹಿಗ್ಗಿಸಿಕೊಂಡು ಬದುಕನ್ನು ನೋಡುವ ಆಯಾಮ ಧರಿಸುವುದು, ಸ್ಥಿತ್ಯಂತರದ ಬೆಳವಣಿಗೆಗಳನ್ನು ತನ್ನೊಳಗೇ ಅನುಭವಿಸುತ್ತ ಅದರ ಪ್ರವರ್ತನೆಗಳನ್ನು ದಕ್ಕಿಸಿಕೊಳ್ಳುವ ಮೂಲಕ. ಕಥನ ಮೂಲತಃ ಒಂದು ವರ್ತನೆ, ಕ್ರಿಯೆ ಆಗಿರುವುದರಿಂದ ಅದು ತಾನು ಜರುಗುವ ಭೌಗೋಳಿಕ, ಭಾಷಿಕ, ಮಾನಸಿಕ ಪರಿಸರದಲ್ಲಿ ತನ್ನನ್ನು ತಾನು ಹುಡುಕಿಕೊಂಡು ನಡೆಯು ತ್ತದೆ. ಆದರೆ ಈ ಭೌಗೋಳಿಕ, ಭಾಷಿಕ, ಮಾನಸಿಕ ಪರಿಸರವೇ ಕಥನದ ಎದುರಿನ ಪ್ರಮೇಯ ಕೂಡ ಹೌದು. ಈ ಪ್ರಮೇಯವನ್ನು ದಾಟದ ನಂತರದಲ್ಲಿ ಯಾವ ಸ್ವರೂಪದಲ್ಲಿ ಕಥೆ ನಮ್ಮನ್ನು ತಲುಪುತ್ತದೆ

ಅನ್ನುವುದೇ ಕುತೂಹಲಕರವಾದದ್ದು. ಕಥೆಗಾರನ ನಿರ್ವಹಣೆ ಪರೀಕ್ಷೆಗೊಳಪಡುವುದು ಈ ಹಂತದಲ್ಲಿ. ಇನ್ನೂ ಕುತೂಹಲಕರ ಸಂಗತಿಯೆಂದರೆ, ಈ ಪ್ರಮೇಯದೊಂದಿಗಿನ ಮುಖಾಮುಖಿಯ ಧ್ವನಿ ಕಥನದ ಒಟ್ಟು ಕ್ರಮದಲ್ಲಿ ಹೇಗೆ ವ್ಯಕ್ತಗೊಳ್ಳುತ್ತದೆ ಅನ್ನುವುದು.

ಈ ಅನಿವಾರ್ಯ ಮುಖಾಮುಖಿ ಸಂದರ್ಭವನ್ನು ಸಾಂಸ್ಕೃತಿಕ ಪರಿಭಾಷೆಯಲ್ಲಿ ವಿಸ್ತರಿಸಿ ಅಚ್ಚುಗೊಳಿಸುವ ಕಾರಣಕ್ಕಾಗೇ ಯಾವುದೇ ಒಳ್ಳೆಯ ಕಥೆ ಗಮನ ಸೆಳೆಯುವುದು. ಪ್ರೀತಿ, ನೋವು, ಸಂಭ್ರಮ, ವಿಷಾದ, ಆರ್ದ್ರತೆ ಇವೆಲ್ಲವೂ ಇರಬಹುದಾದ ಮತ್ತು ಇರುವ ಮನುಷ್ಯ ಸಂಬಂಧದ ನೆಲದಲ್ಲಿ ಊರಿಕೊಳ್ಳುವ ಕಥನದ ಬೇರು ಸಂಬಂಧಗಳ ಸತ್ಯದೆಡೆ ಕುತೂಹಲಿಸುತ್ತದೆ. ಕಥನದ ಎದುರಿನ ಪ್ರಮೇಯವನ್ನು ಸಾತತ್ಯದ ಜರುಗುಪಿಕೆಗಾಗಿ ಪರಿವರ್ತಿಸುವ ಸತ್ವವು ಸಂಬಂಧಗಳ ಆಳದಲ್ಲಿ ಇದೆಯೇ ಎಂಬುದನ್ನು ಕಂಡುಕೊಳ್ಳುವ ಧಾಟಿಯಲ್ಲಿ ಒಳ್ಳೆಯ ಕಥೆ ಬದುಕಿನೊಂದಿಗೆ ಸಂವಾದಿಸುತ್ತದೆ.

ಇರದುದರೆಡೆಗಿನ ಪ್ರಯಾಣ

ಕಥೆ ತಾನಿರುವಂತೆಯೇ, ಇರದಿರುವ ಕ್ರಮಕ್ಕೆ ಚಾಚಿಕೊಳ್ಳಬೇಕಿತ್ತೆಂಬ ಆಸೆಯನ್ನು ಹುಟ್ಟಿಸುತ್ತದೆ. ಸುಭದ್ರೆಯ ಗರ್ಭದಲ್ಲಿರುವಾಗ ಅಭಿಮನ್ಯು ತನ್ನ ತಾಯಿಗೆ ಕೃಷ್ಣ ಹೇಳಿದ ಚಕ್ರವ್ಯೂಹ ಭೇದಿಸುವ ಕಥೆಯನ್ನು ಕೇಳಿಸಿಕೊಳ್ಳುತ್ತಾನೆ. ಕಥೆ ಕೇಳಿಸಿಕೊಳ್ಳುತ್ತಾ ಸುಭದ್ರೆ ನಿದ್ದೆ ಹೋದಾಗ, ತನ್ನ ಕಥೆಗೆ ಹೂಂಗುಡುತ್ತಿರುವುದು ಅವಳಲ್ಲ, ಅವಳ ಗರ್ಭದಲ್ಲಿರುವ ಜೀವ ಎಂದು ತಿಳಿದು ಕೃಷ್ಣ ಕಥೆ ನಿಲ್ಲಿಸುತ್ತಾನೆ. ಚಕ್ರವ್ಯೂಹವನ್ನು ಭೇದಿಸಿದ ನಂತರ ಹೇಗೆ ಅದರಿಂದ ಹೊರಕ್ಕೆ ಬರಬೇಕು ಎಂಬುದನ್ನು ಕೇಳಿಸಿಕೊಳ್ಳುವ ಅವಕಾಶ ಅಭಿಮನ್ಯುವಿಗೆ ಒದಗಿದ್ದರೆ ಮಹಾಭಾರತದ ಘಟನೆಗಳ ಕೆಲವು ಎಳೆಗಳು ಬದಲಾಗುತ್ತಿದ್ದವು.

ಕಥನವೊಂದು ಹೀಗೆ, ಪ್ರಸ್ತುತ ಇರುವ ರೀತಿಯಲ್ಲೇ ತನ್ನ ಇತರ ಆಯಾಮಗಳ ಬಗ್ಗೆ ನಮ್ಮನ್ನು ಹೊರಳಿಸುತ್ತದೆ. ಹೀಗಿಲ್ಲದೇ ಹೋಗಿದ್ದರೆ..., ಹಾಗಿರುತ್ತಿದ್ದರೆ... ಎಂಬ 'ಪ್ರಯಾಣ'ವೊಂದು ಅಗತ್ಯವಿದ್ದೂ ಇಲ್ಲದೆಯೂ ಸಿದ್ಧವಾಗುವುದು ಕಥನದ ಈಗಿರುವ ಎಳೆಗಳಲ್ಲೇ ಎಂಬುದನ್ನು ಗಮನಿಸುವಾಗ, ಅದರ ಸೃಜನಾತ್ಮಕ ಸಂಪರ್ಕಗಳನ್ನು ಕಲ್ಪಿಸಿಕೊಳ್ಳಬಹುದು.

ಸವಾಲು, ಸಹಯೋಗ

ನಮ್ಮ ಕಾಲದ ಕಥನಗಳು ಎರಡು ಬಗೆಯವು. ಒಂದು, ಸಾರ್ವತ್ರಿಕ ಅನುಭವವನ್ನು ಒಟ್ಟುಗೂಡಿಸುವ 'ಕ್ರಮ'ದ್ದು. ಇನ್ನೊಂದು, ವೈಯಕ್ತಿಕ ಅನುಭವವನ್ನು ತೆರೆದಿಡುವ 'ಸತ್ಯ'ದ್ದು. ಒಂದರಲ್ಲಿ 'ಕ್ರಮ' ಇನ್ನೊಂದರಲ್ಲೂ ಕಂಡೀತು. ಇನ್ನೊಂದರಲ್ಲಿನ 'ಸತ್ಯ' ಇದರದ್ದೂ ಆಗಿದ್ದೀತು. ಕಥನದ ಸಾಹಚರ್ಯದಲ್ಲಿ ಇದು ಸಹಜವಾಗೇ ಬರಲೂಬಹುದು. ಆದರೆ ಸತ್ಯವನ್ನು ಕಥನದ ಕ್ರಮದಲ್ಲಿ, ಕಥನದ ಕ್ರಮವನ್ನು ಸತ್ಯದ ಅಚ್ಚುಕಟ್ಟಿನಲ್ಲಿ ಒಳಗೊಳಿಸುವ ನಿರ್ವಹಣೆಯನ್ನು ಪ್ರೇರೇಪಿಸುವುದು ಕಥನದ ಪರಿಭಾಷೆಯನ್ನು ಕುರಿತು ನಿಲುವಿನ ಕೆಲಸ. ಇದು ಕಥೆಗಾರನ ಮುಂದಿರುವ ಸವಾಲು ಹೇಗೋ, ಹಾಗೇ ಅವನಿಗೊದಗುವ ಸಹಯೋಗವೂ ಹೌದು.

ಈ ಸಹಯೋಗವೆಂಬುದನ್ನು ಸ್ವಲ್ಪ ಬೇರೆ ಬಗೆಯಲ್ಲೂ ವಿವರಿಸಬಹುದು. ಮಗುವಿನ ನೋಟದಲ್ಲಿಯ ಅಸೀಮ ಆಪ್ತತೆ, ಮೀನಿನ ಚಲನೆಯಲ್ಲಿನ ತೀವ್ರ ಚುರುಕುತನ, ಹಕ್ಕಿಯ ಕಣ್ಣ ಚಂಚಲತೆಯಲ್ಲಿನ ವಿಶಿಷ್ಟ ವೇಗ ನಮ್ಮ ಮನಸ್ಸಿನಲ್ಲಿ ಕಟ್ಟುವ ಚಿತ್ರವನ್ನು ಕಲ್ಪಿಸಿಕೊಂಡರೆ, ಚಿತ್ರದಲ್ಲೂ ಒಂದು ಮಗು, ಒಂದು ಮೀನು, ಒಂದು ಹಕ್ಕಿ ಹೂಬೇಹೂಬಾಗಿ, ಜೀವಂತವಾಗಿ ಕಾಣುವುದು. ಈ

'ಜೀವಂತಿಕೆ' ಅದು ನಮಗೆ ಕಾಣುವ ಮತ್ತು ನಾವು ಅದನ್ನು ನೋಡುವ ಸಹಯೋಗದಲ್ಲಿಯದು.

ತಾಯ್ತನದ ನೆಲೆ, ಮಾನವೀಯ ಹಂಬಲ

ಋಗ್ವೇದದಲ್ಲಿ ಪ್ರಸ್ತಾಪವಾಗುವ ಹೋಮಾಪಕ್ಷಿ ಕಥನದ ನೆಲೆಯಲ್ಲಿ ಕುತೂಹಲಕಾರಿ ಜೀವನ ಚಕ್ರವುಳ್ಳದ್ದಾಗಿದೆ. ಅದು ಆಕಾಶದಲ್ಲಿ ತತ್ತಿಯಿಡುತ್ತದೆ. ತತ್ತಿ ನೆಲದ ಕಡೆಗೆ ಬೀಳುತ್ತ ಬೀಳುತ್ತ ಹಾಗೆ ಬೀಳುತ್ತಿರುವಾಗಲೇ ಅದರಿಂದ ಮರಿ ಹೊರಬರುತ್ತದೆ. ಅದೂ ನೆಲದ ಕಡೆಗೆ ಬೀಳತೊಡಗುತ್ತದೆ. ಮತ್ತೆ ಹಾಗೆ ಬೀಳುತ್ತಿರುವಾಗಲೇ ರೆಕ್ಕೆ ಬಲಿತು, ತಾನು ಬೀಳುತ್ತಿದ್ದೇನೆಂಬುದು ಅದರ ಪ್ರಜ್ಞೆಯಲ್ಲಿ ದಾಖಲಾಗುತ್ತದೆ. ಗುರುತ್ವದ ಕಕ್ಷೆ ತಪ್ಪಿಸಿಕೊಂಡು ಅದು ಆಕಾಶದ ಕಡೆಗೆ ಹಾರತೊಡಗುತ್ತದೆ. ಮತ್ತೆ ಅದು ಆಕಾಶದಲ್ಲಿ ತತ್ತಿಯಿಡುವುದು, ತತ್ತಿ ಕೆಳಕ್ಕೆ ಬೀಳತೊಡಗುವುದು. ಅದರಿಂದ ಹೊರಕ್ಕೆ ಬರುವ ಮರಿ ಆಕಾಶಕ್ಕೆ ಹಾರುವುದು – ಇದು ಹೋಮಾಪಕ್ಷಿಯ ನಿರಂತರ ಜೀವನಯಾನ. ಅದು ತನ್ನ ನೆಲೆಯನ್ನು ತಾಯ್ತನದ ಪರಿಸರವನ್ನು ಕಳೆದುಕೊಳ್ಳುವುದಿಲ್ಲ ಎಂಬುದೇ ಕಥನದ ಅಂತರಂಗಕ್ಕಾಗುವ ಸಂಗತಿ.

ಇಂಥ ಹೋಮಾಪಕ್ಷಿ, ಒಜ್ಜೆಗೊಂಡಿದ್ದೂ ತನ್ನೊಜ್ಜೆಕೊಳ್ಳಿರೆಂದು ಕೇಳಿದ ಭೂಮಿ, ಎಲ್ಲ ಮೋಡಗಳನ್ನು ಮುಗಿಲಿಗೆ ಕಳಿಸಿಯೂ ಯಾವ ನಿರೀಕ್ಷೆಗಳನ್ನೂ ಮುದ್ರಿಸಿ ಕಾಯದ ಕಡಲು, ಪ್ರತಿ ಬಿಂದುವಿನ ರೋಮಾಂಚನವನ್ನೂ ಬಲ್ಲ ಕಾಲ – ಈ ಅಸಾಮಾನ್ಯ ಕಥನಗಳ ದಂಡೆಯಲ್ಲಿ ನಿಂತಿರುವ ನಮ್ಮೆಲ್ಲರ ಕಥೆಗಳು ನಮ್ಮೊಳಗೇ ಇವೆ. ಕಥೆ ನಮ್ಮನ್ನು ಸತಾಯಿಸುವ ಮರೀಚಿಕೆಯೂ ಅಲ್ಲ, ಬೆಂಬತ್ತುವ ನೆರಳೂ ಅಲ್ಲ; ಅದು ನಮ್ಮ ಒಟ್ಟು ಇರುವಿಕೆಯ ಸಾಕ್ಷಾತ್ಕಾರ. ಗೊತ್ತಿರುವುದರ ಎಳೆಯನ್ನು ಹಿಡಿದು ಗೊತ್ತಿರದಿದ್ದುದರ ಜಾಡಿನಲ್ಲಿ ನಡೆಯುವ ಬೆರಗು.


ನಾವು ಉಸಿರಾಡುತ್ತಿರುವ ಈ ಗಳಿಗೆ ಎಂಥದು ಮತ್ತು ಈ ಕಾಲದ ಕಥನ ಅಪೇಕ್ಷಿಸುವುದೇನು ಎಂಬುದರ ಬಗ್ಗೆ ಒಂದು ಮಾತನ್ನು ಪ್ರಸ್ತಾಪಿಸುವುದರೊಂದಿಗೆ ಈ ಬರಹ ಮುಗಿಸುತ್ತೇನೆ.

೧೯೯೨ರ ಡಿಸೆಂಬರ್ ೬ರಂದು ಅಯೋಧ್ಯೆಯಲ್ಲಿ ಬಾಬರಿ ಮಸೀದಿ ಮತೀಯ ಮೂಲಭೂತವಾದಿಗಳಿಂದ ನಾಶವಾದಾಗ ಬಾಂಗ್ಲಾದೇಶದಲ್ಲಿನ ಅಲ್ಪಸಂಖ್ಯಾತ ಹಿಂದೂಗಳು ಬಹುಸಂಖ್ಯಾತ ಮುಸ್ಲಿಂರ ಬೇಟೆಯಾಗುತ್ತಾರೆ. ಧರ್ಮಾಂಧತೆಯ ಅತಿರೇಕ ಮತ್ತು ಮನುಷ್ಯನೇ ಮನುಷ್ಯನ ಬಗ್ಗೆ ಅಮಾನವೀಯವಾದ ಆ ಘಟನೆಯನ್ನು ನಾಚಿಕೆಗೇಡು ಎಂದೇ 'ಲಜ್ಜಾ' ಬರೆದ ತಸ್ಲಿಮಾ ನಸ್ರೀನ್ ವ್ಯಾಖ್ಯಾನಿಸುತ್ತಾಳೆ. ತನ್ನ ಸುಂದರ ದೇಶದಲ್ಲಿ ಅದರೊಂದು ಭಾಗವೇ ಆಗಿ ಸೇರಿದ್ದ ಪುಟ್ಟ ಹಿಂದೂ ಸಮೂಹವನ್ನು ಅಮಾನವೀಯ ದೃಷ್ಟಿಗೆ ತುತ್ತಾಗಿಸಿದ್ದಕ್ಕೆ ನಾವೆಲ್ಲರೂ ಹೊಣೆ, ಇದು ಸಾಮೂಹಿಕ ಸೋಲು ಎಂದೇ ಆಕೆ ಹೇಳುತ್ತಾಳೆ. ಮಹತ್ವದ ಮತ್ತು ಮಾನವೀಯ ಹೋರಾಟದ ಹಂಬಲವುಳ್ಳ ವ್ಯಾಖ್ಯಾನ ಅದು. ತಸ್ಲಿಮಾಳ ಹಂಬಲ ಮನುಷ್ಯರೆಲ್ಲರ ಮನಸ್ಸಿನಲ್ಲಿ ಮೊಳೆಯಬೇಕಾದ ಹಂಬಲ.

ಜಗತ್ತನ್ನು ನಿಜವಾದ ಅರ್ಥದಲ್ಲಿ ಕೂಡಿಸುವ ತುರ್ತು ಇರುವ, ಒಳ್ಳೆಯದನ್ನು ಹುಡುಕಿಕೊಂಡು ನಮ್ಮೊಳಗೇ ಇಳಿಯಬೇಕಾಗಿರುವ ಇವತ್ತಿನ ಸಂದರ್ಭದಲ್ಲಿ ಮನುಷ್ಯರು ಮನುಷ್ಯರನ್ನು ಕಾಣುವಂತಾದರೆ, ಭೂಮಿ, ಕಡಲು, ಕಾಲದಂಥ, ಹೋಮಾಪಕ್ಷಿಯಂಥ ಅಸಾಧಾರಣ ಕಥನಗಳ ದಂಡೆಯಲ್ಲಿ ನಿಂತಿರುವ ನಾವು ಕೃತಾರ್ಥರು.

ನಂ. ೧, ೨ನೇ ಮಹಡಿ, ೧ನೇ ಅಡ್ಡರಸ್ತೆ ಆರ್.ಕೆ. ರಸ್ತೆ
ಶೇಷಾದ್ರಿಪುರಂ, ಬೆಂಗಳೂರು - ೫೬೦ ೦೨೦

ಪುಸ್ತಕ ಪರಿಚಯ



ವೀಚಿ ಸಮಗ್ರ ಕಾವ್ಯ

ವೀಚಿ ಸಮಗ್ರ ಕಾವ್ಯ

ಲೇಖಕ : ವೀ. ಚಿಕ್ಕವೀರಯ್ಯ

ಬೆಲೆ : **ರೂ. 400/-** **ಪುಟ : LVI + 480**

ಪ್ರಕಾಶನ : ವೀಚಿ ಸಾಹಿತ್ಯ ಪ್ರತಿಷ್ಠಾನ,
ಸಂಜೀವಿನಿ ಆಯುರ್ವೇದ ಆಸ್ಪತ್ರೆ,
ಜನರಲ್ ಕಾರಿಯಪ್ಪ ರಸ್ತೆ ಕೆ.ಆರ್. ಬಡಾವಣೆ,
ತುಮಕೂರು - 572 101

ಕಳೆದ ನಾಲ್ಕು ದಶಕಗಳಿಂದ ಕವಿತೆ, ಗದ್ಯ ಬರೆಯುತ್ತ ಬಂದಿರುವ ವೀ. ಚಿಕ್ಕವೀರಯ್ಯನವರ ಸಮಗ್ರ ಕಾವ್ಯ ಪ್ರಕಟವಾಗಿದೆ. ನವ್ಯ, ದಲಿತ-ಬಂಡಾಯಗಳ ಬಿರುಗಾಳಿಯನ್ನು 'ತೂರಿಕೊಂಡು' ಇವರ ಕವಿತೆಗಳು ಸಾಗಿಬಂದಿವೆ. ಆದರ್ಶ, ಕನಸುಗಾರಿಕೆ, ಪ್ರೇಮ, ಕಾಮ, ಬೇಟ, ವಿರಹಗಳೇ ಈ ಕವಿಯ ಸ್ಥಾಯಿ. ಈ ಹಾಯಿಪಟ ಹೊತ್ತ ಹಡಗು ಕಾವ್ಯದ ಸಮುದ್ರ ಪ್ರವೇಶಿಸುತ್ತದೆ. ವೀಚಿ ಅವರು ಈವರೆಗೆ ಪ್ರಕಟಿಸಿರುವ 'ಪ್ರಣಯಚೈತ್ರ', 'ವಿಷಾದ ನಕ್ಷೆ', 'ಸಂಕಲಿರತಳಿ', 'ನವಿಲುಮನೆ', 'ಅಭಿನಯದ ಬಯಲು', 'ನಿತ್ಯ ಮದುವಣಗಿತ್ತಿ', 'ಬಂತೆಂದರೂ ಇದ್ದುದಿದ್ದಯಿತು' ಮತ್ತೆ ಮೇಲೆರಡು ಅಸಂಕಲಿತ ಕವಿತೆಗಳು ಇವಿಷ್ಟು ಈ ಕೃತಿಯ ಒಡಲು. ಕೆ.ಪಿ. ನಟರಾಜರು ಬರೆದಿರುವ ಮುನ್ನುಡಿ ಕಾವ್ಯ ಪ್ರವೇಶಕ್ಕೆ ದಾರಿ ಕಲ್ಪಿಸಿಕೊಡುವ ಪ್ರಯತ್ನ ಮಾಡಿದರೂ ಅದು ಮೇಲುಮೇಲಿನ ಪರಿಚಯವೇ ಆಗಿದೆ. ವೀಚಿ ಏಕೆ ನಮ್ಮ ನಡುವಿನ ಅಡಿಗ, ಶರ್ಮ, ಎ.ಕೆ. ರಾಮಾನುಜನ್, ಸಿದ್ದಲಿಂಗಯ್ಯ, ಸಿದ್ದಯ್ಯ, ಶಿವಪ್ರಕಾಶ್ ಇವರ ಸಮಕಾಲೀನರಾಗಿದ್ದೂ ನವೋದಯದ ಶೈಲಿಗೆ ಜೋತುಬಿದ್ದರು ಎಂಬುದಕ್ಕೆ ಉತ್ತರವಿಲ್ಲ. ಆಶ್ಚರ್ಯವೆಂದರೆ 'ಪ್ರಣಯಚೈತ್ರ' ಹೊರಬಂದ ೧೯೬೧ರ ಇಸವಿಯನ್ನು ಕೆ.ಪಿ. ನಟರಾಜ್ 'ನವೋದಯ ಚಳವಳಿ ಅಥವಾ ಪಂಥದ ಇಳಿಗಾಲ' (xviii) ಎಂದು ತಪ್ಪಾಗಿ ಗುರುತಿಸುವುದು. 'ಗುರು ಕಾರುಣ್ಯ'ದಂಥ ವೀಚಿಯವರ ಮಹತ್ವದ ಕವಿತೆ ಗುರುತಿಸುವುದನ್ನು ಬಿಟ್ಟರೆ ಉಳಿದಂತೆ ಇಪ್ಪತ್ತೆಂಟು ಪುಟಗಳ ಮುನ್ನುಡಿ ತೌಡು ಕುಟ್ಟುವಲ್ಲಿ ಯಶಸ್ವಿಯಾಗಿದೆ. ಕವಿಯೊಬ್ಬನನ್ನು ದ್ವೀಪವಾಗಿ ಕಲ್ಪಿಸಿಕೊಂಡು ಅವನನ್ನು ಚಾರಿತ್ರಿಕ, ಸಾಂಸ್ಕೃತಿಕ ಒತ್ತಡ, ಆಶಯಗಳಾಚೆಗೆ ಚಿತ್ರಿಸುವ ದುಸ್ಸಟಗಳನ್ನು ನಾವುಗಳು ಇನ್ನಾದರೂ ಬಿಟ್ಟುಬಿಡಬೇಕು. ಇನ್ನು ವೀಚಿಯವರ ೨೮೬ ಕವಿತೆಗಳ ವಿಚಾರಕ್ಕೆ ಬಂದರೆ, ವೀಚಿ ನಮ್ಮಲ್ಲಿ ಹಲವು ಬಗೆಯ ಕಾವ್ಯ ಪ್ರಯೋಗಗಳನ್ನು ತಂತ್ರಾಂಶದ ದೃಷ್ಟಿಯಿಂದ (ಉದಾ: ಛಂದಸ್ಸು) ಮಾಡುತ್ತ ಬಂದವರು. ನಡುನಡುವೆ ಅಲ್ಲಲ್ಲಿ ಮಿಂಚುವ ಸಾಲುಗಳು ಅವರ ಯಾವುದೇ ಸಂಕಲನದಲ್ಲೂ ದೊರೆಯುತ್ತದೆ. ಆದರೆ ಕವಿಯ ಒಟ್ಟು ಧ್ಯಾನಶೀಲತೆಯಲ್ಲಿ ಮುಖ್ಯವಾದ ಕೊರತೆಯೆಂದರೆ ವಿಸ್ತಾರವಾದ ವಿಷಯಗಳನ್ನು ಆರಿಸಿಕೊಂಡರೂ ಅದನ್ನು ಭಾಷಾ ಸೂಕ್ಷ್ಮಗಳಲ್ಲಿ ಅದ್ದಿ ಹೊಸ ಅನುಭವ ಕೊಡಲು ಪ್ರಯತ್ನಿಸದಿರುವುದು. ಹೀಗಾಗಿ ಕವಿತೆಯ ಮೈ ಶಬ್ದದ ಬೊಜ್ಜಿನಿಂದ ಕುಲುಕುತ್ತದೆ. ಉದಾ: 'ಧ್ಯಾನ' ಪದ್ಯ ಗಮನಿಸಿ :

ಪಟ್ಟಿನಿಂದ ಜಟ್ಟಿ ಜಟ್ಟಿ –
ಯನ್ನು ಗಟ್ಟಿ ಹಿಡಿಯುವಂತೆ
ನೆಲವ ಭದ್ರ ಹಿಡಿಯೊ ಮಗನೆ
ಧರ್ಮ ಯುಗವನೆ –

ಪ್ರಾಸ ಪ್ರಿಯತೆಯ ಸುಳಿಯಲ್ಲಿ ಕವಿತೆ ನೀರು ಪಾಲಾಗುತ್ತದೆ ಅಲ್ಲವೆ?
ಇನ್ನು ವರ್ತಮಾನಕ್ಕೆ ಸ್ಪಂದಿಸುತ್ತ ಬರೆಯುವ ಮನಸ್ಥಿತಿ :

ಏಕ ಮಾದರಿಯ ಪಡಿಯಚ್ಚಾಗದಿರೋ
ಭೋಗ ಜೀವನದಲ್ಲೇ ಪರ್ಯವಸಾನ
ಬೇಡ
ನಿನಗೂ ಅಮೆರಿಕೆ ಕನಸು ಬೀಳದಿರಲು (– 'ಪರದಿಕೋ')

ಆಶಯ ಹಿರಿದಾಗಿದ್ದರೂ, ಭಾಷೆ ಅದನ್ನು ತುಂಬಿಕೊಳ್ಳದಿರುವುದು ಇವರ ಸುಮಾರು ಕವಿತೆಗಳ ಸ್ಥಾಯಿ ಭಾವವೇ ಆಗಿದೆ. ಹೀಗಾಗಿ ಕೆ.ಪಿ. ನಟರಾಜ್ ಹೇಳದೇ ಬಿಟ್ಟದ್ದನ್ನು ನುಡಿಯುವುದಾದರೆ — ಆಧುನಿಕ ಕಾಲದಲ್ಲಿ ಬದುಕಿಯೂ ಆಧುನಿಕ ಸಂವೇದನೆ (ಬದುಕು ಮಾತ್ರ ಅಲ್ಲ. ಏಕೆಂದರೆ Living is different from mere life)ಯಿಂದ ವಂಚಿತವಾಗುವುದು ವೀಚಿಯವರ ಸಮಗ್ರದಲ್ಲೇ ಕಾಣುತ್ತದೆ.

ವೀಚಿ ಹಿರಿಯ ಕವಿ, ಆಧ್ಯಾತ್ಮಿಕತೆಯ ಲಯದ ಮೇಲೆ ಬೆರಳಿಟ್ಟು ಅದನ್ನು ಭಾಷೆಯಲ್ಲಿ ನುಡಿಸಬಲ್ಲವರು. ಹೆಣ್ಣು-ಗಂಡಿನ ನೆಲೆಯ ನಂತರ ಇವರನ್ನು ಕಾಡಿರುವುದು 'ಗುರು'ವಿನ ಪರಿಕಲ್ಪನೆ. ಈಚಿನ ಕಾವ್ಯ ಮುಖ್ಯವಾಗಿ ಇಹದ ಬದುಕಿನಲ್ಲಿ ಪರಮಾರ್ಥವನ್ನು ಕರಗಿಸಿಕೊಳ್ಳಲು ಬಾಯಿ ತೆರೆಯುತ್ತಿದೆ. ಶಿವಪ್ರಕಾಶರ ಮುಖ್ಯ ಕವಿತೆಗಳು ಬಂದ ನಂತರವೂ ಆನಂದ ಜಂಝುರವಾಡ, ಕೆ.ಬಿ. ಸಿದ್ದಯ್ಯ, ಎಸ್.ಜಿ. ಸಿದ್ಧರಾಮಯ್ಯ ಮುಂತಾದವರ ಮೂಲಕ ಕರ್ನಾಟಕ ಸಂಸ್ಕೃತಿಯ ನೆಲದ ಮರೆಯ ನಿಧಾನರಾದ ಅನುಭಾವಿ – ತತ್ವಪದಕಾರರ ಪರಂಪರೆ ಸುಪ್ತವಾಗಿದ್ದದ್ದು ಈಗ ಅಲ್ಲಲ್ಲಿ ತನ್ನ ಜಲದ ಕಣ್ಣು ತೆರೆಯುತ್ತಿದೆ.

ಯಾವುದೇ ರಿಯಾಯಿತಿ ಕೊಡದೆ ನೋಡಿದರೂ ವೀಚಿಯವರ ಕಾವ್ಯ ಸಮಗ್ರದಲ್ಲಿ ಅನುಭವವನ್ನು ಸರಳೀಕರಣಗೊಳಿಸಿದ ಮತ್ತು ಬೆರಗು, ಮುಗ್ಧತೆ ಸಮವಾಗಿ ಬೆರೆತ ಕವಿತೆಗಳಿವೆ. ಈ ಕವಿಯ ಕೆಲವು ಸಾಲುಗಳನ್ನು ನೋಡಿ :

'ನನ್ನ ಗುರು ಬೆಳೆಯುವ ಹಿಮಾಲಯ
ಪಾರದರ್ಶಕ ಅಂತಃಕರಣ'

★

'ಬಂಡೆನೆಲ
ಬೇರಿಳಿಯದಿಕ್ಕಟ್ಟು ಬಿಕ್ಕಟ್ಟು
ಹತ್ತುವಾಗಲು ತುಳಿತ
ಇಳಿಯುವಾಗಲೂ ತುಳಿತ'

★

'ನಿರ್ಮಮಕಾರದ ಗದ್ದುಗೆ ಮೇಲೆ
ಮಂಡಿಸಿದವಗೆ
ಧ್ಯಾನವೇ ಜೀವಗಳಸ...' ('ನನ್ನ ಗುರು' ಕವಿತೆ)


ನಿಜವಾದ ಅರ್ಥದಲ್ಲಿ 'ಶತಮಾನದ ಕವಿತೆ'ಗಳಲ್ಲಿ ಒಂದಾಗಿರುವ ವೀಚಿಯವರ 'ಗುರು ಕಾರುಣ್ಯ' (ಅಭಿನಯದ ಬಯಲು ಸಂಕಲನ ೧೯೯೨) ಅವರ 'ಗಂಗಾವತರಣ', 'ಪಕ್ಷಿಕಾಶಿ', 'ಮದುಗಿರಿಯ ಮೌನವಿಕಾಸ' ಮತ್ತು 'ಭೂಮಿಗೀತ'ವಾಗಿದೆ. ಎಲ್ಲ ಶ್ರೇಷ್ಠ ಕವಿತೆಗಳೂ ಸರಳವಾಗಿದ್ದುಕೊಂಡೇ ಅರ್ಥದೀಪ್ತಿ ಬೆಳಗುತ್ತವೆನ್ನುವುದಕ್ಕೆ 'ಗುರುಕಾರುಣ್ಯ' ಹೊರತಲ್ಲ.

'ಗುರುವ ನೋಡುವ ಬಯಕೆ

ಗರಿಗೆದರಿದಾಗೆಲ್ಲ
ಏಳುಹೆಡೆ ಸರ್ಪ ಬಂದು ನಿಲ್ಲುವುದೆನ್ನ
ಮನೆಯ ಬಾಗಿಲಿಗೆ' —

— ಎಂದು ಮೊದಲಾಗುವ ಕವಿತೆ ಪುರಂದರ, ಎಕ್ಕುಂಡಿಯವರ ಕಥನಶೈಲಿಯ ನೆನಪು ಮಾಡುತ್ತಲೇ ರಾಮಕೃಷ್ಣ ಪರಮಹಂಸರಂಥ ಸಾಧುಗಳ ಬದುಕನ್ನು ಒಳಕ್ಕೆ ಸೆಳೆದುಕೊಳ್ಳುತ್ತದೆ. ಅವಧೂತನ ಖಾಯಂ ಹುಚ್ಚುತನದ ವಿವಿಧಾವಸ್ಥೆಗಳಾದ ಕೋಪ, ಮಾತೃವಾತ್ಸಲ್ಯ, ದೀಕ್ಷೆ ಎಲ್ಲವೂ ಸ್ವಸ್ಥಾನದಲ್ಲಿ ಸೇರಿಸಿಕೊಂಡು ಬೆಳೆಯುವ ಕವಿತೆ ಆಧ್ಯಾತ್ಮಿಕತೆಯನ್ನು ವರ್ಣಿಸಲು ಹೋಗದೆ ಹಿತಮಿತ ವಿವರಣೆಯಲ್ಲಿ ಗಕ್ಕನೆ ನಿಲ್ಲುತ್ತದೆ. 'ಗುರು ಕಾರುಣ್ಯ'ವು ವೀಚಿಯವರ ಏಳು ಕವನ ಸಂಕಲನಗಳ ನಂತರ ಹೊಸ ಕವಿತೆಗಳ ದಿಕ್ಕನ್ನು ನಿಗದಿ ಪಡಿಸಬಲ್ಲಷ್ಟು ಸಶಕ್ತವಾಗಿವೆ. 'ಬಂತೆಂದರೂ ಇದ್ದುದ್ದಿತ್ತೆಯಿತ್ತು' (ಇದು ಮಧುರಚೆನ್ನರ ಕವಿತೆಯ ಒಂದು ಸಾಲು) ಬಂದ ಮೇಲೂ ಕನ್ನಡವು ವೀಚಿಯವರ ಹೊಸ ಕವಿತೆಗಳನ್ನು ಆಸೆಗಣ್ಣಿನಿಂದ ನಿರೀಕ್ಷಿಸುತ್ತದೆ.

ಬೈರಾಗಿ



ಕಾವ್ಯದ ಸೂಕ್ಷ್ಮತೆಯನ್ನು ಕಳೆದುಕೊಂಡ ಶತಮಾನದ ಸಂಪಾದನೆ

ಶತಮಾನದ ಕಾವ್ಯ
ಸಂಪಾದಕರು : ಎಚ್.ಎಸ್. ವೆಂಕಟೇಶಮೂರ್ತಿ
ಬೆಲೆ : **ರೂ. 250/-**
ಪ್ರಕಾಶನ : ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜಯಚಾಮರಾಜೇಂದ್ರ ರಸ್ತೆ
ಬೆಂಗಳೂರು - 560 002

ಒಂದು ಭಾಷೆಯ ಸಾಹಿತ್ಯ ಸಂದರ್ಭದಲ್ಲಿ ಆ್ಯಂಥೋಲಾಜಿಯ ಮಹತ್ವವೇನು? ಎಂದು ಕೇಳಿಕೊಂಡರೆ ಅದು ತನ್ನ ಕಾಲದ ಸಾಹಿತ್ಯದ (ಇಲ್ಲಿ ಕಾವ್ಯದ) ಶ್ರೇಷ್ಠ ಗುಣಧರ್ಮಗಳನ್ನು ಪ್ರಕಟಿಸುತ್ತಿರುತ್ತದೆ. ಎಚ್.ಎಸ್. ವೆಂಕಟೇಶಮೂರ್ತಿ ಅವರು ಸಂಪಾದಿಸಿದ 'ಶತಮಾನದ ಕಾವ್ಯ' ಸಂಪುಟ ಶ್ರೇಷ್ಠ ಕವಿಗಳ ಶ್ರೇಷ್ಠ ಕಾವ್ಯವನ್ನು ಪ್ರಕಟಿಸುವುದರೊಂದಿಗೆ ಈಚಿನ ಅನೇಕ ಕವಿಗಳ ಕೆಟ್ಟ ಕಾವ್ಯವನ್ನೂ ಒಳಗೊಂಡ ಸಂಕಲನವಾಗಿದೆ.

ಕಳೆದ ಶತಮಾನದ ಇಡೀ ಕನ್ನಡ ಕಾವ್ಯದ ಅವಲೋಕನ ಮಾಡಲು ಈ ಪರಿಶೀಲನೆಯ ಮಿತಿಯಲ್ಲಿ ಸಾಧ್ಯವಿಲ್ಲದಿರುವುದರಿಂದ ಅದನ್ನು ಈ ಪುಸ್ತಕದ ಕುರಿತಾಗಿ ಮಾಡುತ್ತಿಲ್ಲ. ಅದು ಅನಗತ್ಯ ಕೂಡ. (ಅದನ್ನು ಸಂಪುಟದ ಸಂಪಾದಕರೇ ತಮ್ಮ ಪ್ರಸ್ತಾವನೆಯಲ್ಲಿ ಮಾಡಿಲ್ಲ. ಕೇವಲ ಕವಿಗಳ ಕವಿತೆಗಳನ್ನು ವಿವರಿಸಿದ್ದಾರೆ.) ಬದಲು ಪುಸ್ತಕದ ಸಂಪಾದಕರ ಒಲವುಗಳನ್ನು ಗಮನಿಸಲು ಪ್ರಯತ್ನಿಸಲಾಗಿದೆ ಮತ್ತು ಈ ಸಂದರ್ಭದಲ್ಲಿ ಸಂಕಲನ ಎಷ್ಟರಮಟ್ಟಿಗೆ ಮುಖ್ಯ ಎಂಬುದನ್ನು ನೋಡಲಾಗಿದೆ.

ಸಂಪಾದಕರು ಈ ಕೆಳಗಿನ ಕೆಲವು ನಿಲುವುಗಳ ಮೂಲಕ ಕವಿತೆಗಳನ್ನು ಆಯ್ಕೆ ಮಾಡಿರುವುದಾಗಿ ಪ್ರಸ್ತಾವನೆಯಲ್ಲಿ ಸೂಚಿಸಿದ್ದಾರೆ.

೧. ಈ ಸಂಗ್ರಹ, ಶತಮಾನದ ಸೂಕ್ಷ್ಮ ಸ್ಪಂದನ – ತಲ್ಲಣಗಳಿಗೆ ನುಡಿ ಕೊಡುವಂತಿರಬೇಕು.

೨. ಈ ಸಂಗ್ರಹ, ಶತಮಾನದ ವೈವಿಧ್ಯಮಯ ಕಾವ್ಯ ಪ್ರಯೋಗಗಳ ಪ್ರಾತಿನಿಧ್ಯವನ್ನು ಸಾಧಿಸಬೇಕು.

೩. ಈ ಸಂಗ್ರಹ, ಕಾವ್ಯಝುರಿಯ ಎಲ್ಲ ಪಲ್ಲಟಗಳನ್ನೂ ಪರಿವರ್ತನೆಯ ಲಕ್ಷಣಗಳನ್ನೂ ಸ್ಫುಟವಾಗಿ ಸೂಚಿಸುವಂತಿರಬೇಕು.

೪. ಈ ಅಂಶಗಳನ್ನು ಗಮನದಲ್ಲಿಟ್ಟು ಕವಿತೆಗಳನ್ನು ಆರಿಸುವಾಗ, ಕವಿತೆ ಮೂಲತಃ ಕವಿತೆಯಾಗಿರಬೇಕು. ಕವಿತೆಯ ವಿಚಾರವೋ ತತ್ವವೋ, ವಸ್ತುವೋ ಆಯ್ಕೆಗೆ ಮೂಲ ಪ್ರಮಾಣವಲ್ಲ. ಕವಿತೆ, ಕವಿತೆಯಾಗಿ ಒಂದು ವಿಚಾರವನ್ನೋ, ತತ್ವವನ್ನೋ, ವಸ್ತುವನ್ನೋ, ಆಶಯವನ್ನೋ ಹೇಗೆ ಅಂತರ್ಗತಗೊಳಿಸಿಕೊಂಡಿದೆ; ತಿಂದದ್ದನ್ನು ಅರಗಿಸಿಕೊಂಡು ಹೇಗೆ ಜೀವಸತ್ವವನ್ನಾಗಿ ಮಾರ್ಪಡಿಸಿಕೊಂಡಿದೆ ಎಂಬುದು ಆಯ್ಕೆಗೆ ಮೂಲಮಾನವಾಗಬೇಕು.

ಸಂಪಾದಕರ ಮೇಲಿನ ನಿಲುವುಗಳು ಕನ್ನಡದ ಪ್ರಮುಖ ಕವಿಗಳ, ಕವಿತೆಗಳ ಆಯ್ಕೆಯಲ್ಲಿ ನಿಜವಾಗಿವೆ. ಆದರೆ ಆಯ್ಕೆಯಾಗಿರುವ ಕವಿಗಳಿಗೆ ಹತ್ತಿರವಾಗುತ್ತಿರುವಂತೆ ಸಂಪಾದಕರ ಮೇಲಿನ ನಿಲುವುಗಳು ಹಿನ್ನೆಲೆಯಲ್ಲೇ ಉಳಿದಿವೆ. ಅದರ ಬದಲು ಸಂಪಾದಕರು ಉದಾರವಾಗಿದ್ದಾರೆ. ಎಷ್ಟು ಉದಾರವಾಗಿದ್ದಾರೆ ಎಂದರೆ ಕವಿತೆಗಳೇ ಅಲ್ಲದವೂ ಸಹ ಈ ಸಂಕಲನದಲ್ಲಿ ಸೇರಿವೆ. ಕಣ್ತಪ್ಪಿನಿಂದ ಇದು ಆಗಿರಬಹುದು ಎನ್ನುವುದಕ್ಕೂ ಇಲ್ಲಿ ಅವಕಾಶವಿಲ್ಲ.

ಒಂದು ಕಾಲಮಾನದ ಕವನ ಸಂಗ್ರಹಗಳಿಗೆ, ಸಂಪಾದನೆಗಳಿಗೆ ಒಂದು ಚಾರಿತ್ರಿಕ ಮಹತ್ವವಿರುತ್ತದೆ. ಕಾರಣವಿರುತ್ತದೆ, ಒತ್ತಡವಿರುತ್ತದೆ. ಈ ಸಂಪಾದನೆಯನ್ನು ಮಾತ್ರ ಹವ್ಯಾಸಿ ಸಂಪಾದನೆ, ಅಕೆಡೆಮಿಕ್ ಸಂಪಾದನೆ ಎಂದು ಕರೆಯಬಹುದು. ಒಂದು ರೀತಿಯಲ್ಲಿ ಇದು 'ಸರ್ಕಾರೀ ಕಾವ್ಯ ಸಂಪಾದನೆ'ಯಾಗಿದೆ. ಕಾವ್ಯದ ಸೂಕ್ಷ್ಮ ಸಂವೇದನೆಗಳನ್ನು ಕಳೆದುಕೊಂಡ ಸಂಪಾದನೆಯಾಗಿದೆ.

ಶ್ರೇಷ್ಠತೆಯ ದೃಷ್ಟಿಯಿಂದ ನೋಡದೆ, ಉತ್ತಮ ಕಾವ್ಯ ಎಂಬುದನ್ನಷ್ಟೇ ಮಾನದಂಡವಾಗಿಟ್ಟು ಕೊಂಡರೂ ಈ ಸಂಪುಟದಲ್ಲಿನ ಈಚಿನ ಸುಮಾರು ೨೦ ಕವಿಗಳನ್ನು ಕೈಬಿಡಬೇಕಿತ್ತು. ಕವಿತೆಯನ್ನು ಓದಿದಾಗ 'ಕನಿಷ್ಠ ಕಾವ್ಯದ ಅನುಭವ ನೀಡುವ, ಓದುಗನನ್ನು ವಿಸ್ಮಯಗೊಳಿಸುವ, ಚಕಿತಗೊಳಿಸುವ, ಮತ್ತೊಮ್ಮೆ ಕವಿತೆಯನ್ನು ಓದಿಸಿಕೊಳ್ಳುವಂಥ ಕವಿತೆಗಳನ್ನು ಕೆಲವು ಸಾಮಾನ್ಯ ಕವಿಗಳ ಆಯ್ಕೆಯಲ್ಲಿ ಅನುಸರಿಸಬಹುದಿತ್ತು. ಇದೊಂದು ಕೆಲ ಕವಿಗಳ ಕವಿತೆಯ ಸಂದರ್ಭದಲ್ಲಿ ಅಕಾಡೆಮಿಯ ಸರಕಾರಿ ಯೋಜನೆಯ ಸರಕಾರೀ ಆಯ್ಕೆ ಪಟ್ಟಿಯಂತಿದೆ ಮತ್ತು ಈ ಆಯ್ಕೆಯ ಹಿಂದಿನ ತಾತ್ವಿಕ ನೆಲೆಯನ್ನು ಪ್ರಶ್ನಿಸಬೇಕಾಗಿದೆ.

ಇಂಥ ಯಾವ ಆಯ್ಕೆಯೂ ಪೂರ್ಣವಾಗಿರಲು ಪೂರ್ವಾಗ್ರಹಗಳಿಂದ, ವೈಯಕ್ತಿಕ ಆಯ್ಕೆಯಿಂದ ಬೇರೆಯಾಗಿರಲು ಸಾಧ್ಯವಿಲ್ಲ ಎಂಬುದು ಈ ಸಂಪುಟದಲ್ಲಿ ಇನ್ನಷ್ಟು ನಿಜವಾಗಿದೆ. ಇದು ಜಡ ಮನಸ್ಸೊಂದರ, ಪ್ರತಿಭೆ ಗೈರು ಹಾಜರಾಗಿರುವ ಸಂಪಾದನೆಯಾಗಿದೆ. ಎಲ್ಲರಿಗೂ ಪ್ರಾತಿನಿಧ್ಯ ಕೊಡುವ ಅವಸರದಲ್ಲಿ ಕೆಟ್ಟ ರಚನೆಗಳನ್ನು ಸೇರಿಸಲಾಗಿದೆ.

ಕವಿತೆಗಳ ಆಯ್ಕೆಯೇ ಒಂದು ಬಗೆಯ ವಿಮರ್ಶೆಯಾಗಿರುವುದರಿಂದ ಕವಿತೆಗಳ ಆಯ್ಕೆಯಲ್ಲಿ

ಈ ವಿಮರ್ಶನ ಪ್ರಜ್ಞೆಯೇ ಸಂಪಾದಕರಿಗೆ ಕೈಕೊಟ್ಟಿದೆ. ಕಾವ್ಯ ಚರಿತ್ರೆಯನ್ನು ನಿಷ್ಠುರವಾಗಿ ಅರಿಯುವ, ಅದನ್ನು ಓದುಗರಿಗೆ ತೋರುವ ಕೆಲಸವನ್ನು ಸಂಕಲನಕಾರ ಏಕಕಾಲದಲ್ಲಿ ಮಾಡುತ್ತಿರುತ್ತಾನೆ. ಈ ಸಂಕಲನದ ಸಂದರ್ಭದಲ್ಲಿ ಈ ಅಪೇಕ್ಷಿತ ಕೆಲಸವೇ ಆಗಿಲ್ಲ.

ಬೇಂದ್ರೆ, ಮಧುರಚೆನ್ನ, ನರಸಿಂಹಸ್ವಾಮಿ, ಅಡಿಗರಂಥ ನಮ್ಮ ಹಿರಿಯ ಮುಖ್ಯ ಕವಿಗಳ ಕಾವ್ಯಕ್ಕೂ, ಅನಂತರದ ತಲೆಮಾರುಗಳ (ಮತ್ತು ಇಲ್ಲಿ ಆಯ್ಕೆಯಾಗಿರುವ ಸಾಮಾನ್ಯ ಕವಿಗಳ) ಕವಿಗಳ ಕಾವ್ಯಕ್ಕೂ ಇರುವ ಸಮಾನ ಅಂಶಗಳು ಯಾವುವು, ಅದನ್ನು ಜೋಡಿಸುವ ಪರಂಪರೆಯ ಕೊಂಡಿಗಳು, ಮುಂದುವರಿಕೆಯಾಗಿರುವ ಪ್ರಧಾನ ಆಶಯಗಳು ಯಾವುವು ಒಂದು ಶತಮಾನದ ನಮ್ಮ ಕಾವ್ಯ ಚಾರಿತ್ರಿಕವಾಗಿ ಯಾಕೆ ಮುಖ್ಯ ಎಂಬುದನ್ನು ಈ ಹಿನ್ನೆಲೆಯಲ್ಲಿ ಎಚ್.ಎಸ್.ವಿ. ವಿವರಿಸಿಲ್ಲ.

ಕನ್ನಡದಲ್ಲಿ ಈಗಾಗಲೇ ಪಿ. ಲಂಕೇಶ್ ಸಂಪಾದಿಸಿದ 'ಅಕ್ಷರ ಹೊಸಕಾವ್ಯ' ಈಗಲೂ ತನ್ನ ಮಹತ್ವವನ್ನು ಉಳಿಸಿಕೊಂಡ ಸಂಕಲನವಾಗಿದೆ. ಓ.ಎಲ್. ನಾಗಭೂಷಣ ಸ್ವಾಮಿ ಅವರು ಸಂಪಾದಿಸಿದ 'ನಮ್ಮ ಕನ್ನಡ ಕಾವ್ಯ' ಕಾವ್ಯದ ಓದುಗಳನ್ನು ವಿಸ್ತರಿಸುವ ಆಶಯ ಉಳ್ಳದ್ದಾಗಿದೆ. ಈ ಪ್ರಸ್ತುತ ಪುಸ್ತಕ ಕಾಲಮಾನದ ಚೌಕಟ್ಟು ಮಾತ್ರ ಇರುವ ಯಾವುದೇ ಎಲ್ಲೆಗಳಿಲ್ಲದ ಸಂಕಲನವಾಗಿದೆ.

ಈ ಸಂಗ್ರಹದಲ್ಲಿ ಅತ್ಯಂತ ಚಿತ್ರವತ್ತಾಗಿ ಬರೆದ ಕವಿ ಚಂದ್ರಕಾಂತ ಕುಸನೂರರ ಕವಿತೆಗಳಾಗಲಿ, ಉತ್ತಮ ಕಾವ್ಯ ಸೃಷ್ಟಿಸುತ್ತಿರುವ ಅಬ್ದುಲ್ ರಶೀದ, ಕೆ.ಪಿ. ಮೃತ್ಯುಂಜಯ, ಹರಿಯಪ್ಪ ಪೇಜಾವಾರ ಇಂಥ ಅನೇಕರ ಕವಿತೆಗಳನ್ನು ಒಳಗೊಂಡಿಲ್ಲ.

ಹೇಮಾ ಪಟ್ಟಣಶೆಟ್ಟಿ, ಎಚ್.ಎಸ್. ಮುಕ್ತಾಯಕ್ಕ, ಎಲ್.ಎನ್. ಮುಕುಂದರಾಜ್, ಜರಗನಹಳ್ಳಿ ಶಿವಶಂಕರ್ (ಹನಿಗವನಗಳು), ಮಾಲತಿ ಪಟ್ಟಣಶೆಟ್ಟಿ, ವಿಷ್ಣುನಾಯ್ಕ, ಎಂ.ಎನ್. ವ್ಯಾಸರಾವ್, ದೊಡ್ಡರಂಗೇಗೌಡ, ಬಸವರಾಜ ಸಬರದ, ಶೈಲಜಾ ಉಡಚಣ, ಪ್ರಹ್ಲಾದ ಅಗಸನ ಕಟ್ಟೆ, ಶಶಿಕಲಾ ವೀರಯ್ಯ ಸ್ವಾಮಿ, ಲೋಕೇಶ ಅಗಸನಕಟ್ಟೆ, ಶಂಕರಕಟಗಿ, ಬಸವರಾಜ ವಕ್ಕುಂದ ಮುಂತಾದ ಕವಿಗಳ ಸಾಮಾನ್ಯ ಕವಿತೆಗಳು ಈ ಸಂಕಲನದಲ್ಲಿ 'ಜಾಗ' ಪಡೆದಿರಬೇಕಾದರೆ, ಮೇಲೆ ಸೂಚಿಸಿದ ಕೆಲ ಕವಿಗಳು ಯಾಕೆ ಸೇರಿಲ್ಲ ಎಂಬುದು ಸಂಪಾದಕರು ವಿವರಿಸಬಹುದಾದ ಸಂಗತಿಯಾಗಿದೆ. ಮೇಲಿನ ರೀತಿಯ ಕವಿಗಳ ಸಾಮಾನ್ಯ ಕಾವ್ಯವನ್ನು ಕೈಬಿಟ್ಟು ಈ ಸಂಪುಟವನ್ನು ಸಂಪಾದಿಸಿದ್ದರೆ ಒಂದು ಓದಬಲ್ಲ ಸಂಕಲನವೊಂದು ಓದುಗರಿಗೆ ಸಿಗುತ್ತಿತ್ತು. ಇದರಿಂದಲೇ ಸಂಪಾದಕರ ಕಾವ್ಯದ ಕುರಿತಾದ ಒಲವು-ನಿಲುವುಗಳು ಸ್ಪಷ್ಟವಾಗಿ ಗೋಚರವಾಗುತ್ತದೆ.

ಅಸಾಹಿತ್ಯ ಕಾರಣಗಳಿಗಾಗಿ ಸಂಪುಟವೊಂದರಲ್ಲಿ ಸೇರಿಕೊಂಡ ಕವಿಗಳು ಜನರ ಮನದಿಂದ ಬಹುಬೇಗ ಅಳಿಸಿಹೋಗುತ್ತಾರೆ. ಯಾವ ಸಂಪುಟಗಳೂ ಅವರನ್ನು ಉಳಿಸಲಾಗುವುದಿಲ್ಲ. ಇಂಥ ಯಾವ ಸಂಪುಟಗಳು ಇಲ್ಲದೆಯೂ ಬೇಂದ್ರೆ, ಅಡಿಗ, ನರಸಿಂಹಸ್ವಾಮಿ, ಮಧುರಚೆನ್ನ, ಶಿವಪ್ರಕಾಶ್‌ರಂಥ ಕವಿಗಳು ಉಳಿದುಕೊಳ್ಳುತ್ತಾರೆ; ಇದಿಷ್ಟೆ ಕನ್ನಡದ ಕಳೆದ ಶತಮಾನದ ಪ್ರಾತಿನಿಧಿಕ ಕಾವ್ಯ, ಇಲ್ಲಿರುವುದಷ್ಟೆ ಕನ್ನಡದ ಉತ್ತಮ ಕಾವ್ಯ ಎಂದು ಇಂಥ ಸಂಕಲನಗಳು ಸೃಷ್ಟಿಸುವ ಭ್ರಮೆಗಳನ್ನು ಓದುಗರು ಹರಿಯಬೇಕಿದೆ. ಓದುಗರು ನಮ್ಮ ಶ್ರೇಷ್ಠ ಕವಿಗಳನ್ನು ಅವರ ಪುಸ್ತಕಗಳಲ್ಲೇ ಓದುವುದು ಅವರನ್ನು ಇಡಿಯಾಗಿ ಅರಿಯಲು ಸಾಧ್ಯವಾಗುತ್ತದೆ.

ಎಚ್.ಎಸ್. ವೆಂಕಟೇಶಮೂರ್ತಿಯವರಂಥ ಪ್ರತಿಭಾವಂತ ಕವಿ ಈ ಸಂಕಲನವನ್ನು ಸಂಪಾದಿಸಬೇಕಿರಲಿಲ್ಲ. ಕನ್ನಡ ಸಾಹಿತ್ಯದ ಯಾವುದೇ ಒಬ್ಬ ವಿದ್ಯಾರ್ಥಿ ಇದಕ್ಕಿಂತ ಉತ್ತಮ ಕಾವ್ಯ ಸಂಕಲನವನ್ನು ಸಂಪಾದಿಸಬಲ್ಲ ಎಂಬುದನ್ನಷ್ಟೇ ಇಲ್ಲಿ ಸೂಚಿಸಬಹುದು.

■ ಸಂದೀಪ ನಾಯಕ

ಮೂರು ಕವನ ಸಂಗ್ರಹಗಳು

ನಿಜದ ಹಾದಿಯ ಬೆಳಕು

ಕವಿ : ಸಂತೋಷ ಚೊಕ್ಕಾಡಿ
ಬೆಲೆ : **ರೂ. 40/-**
ಪ್ರಕಾಶನ : ಅಭಿರುಚಿ ಬುಕ್ ಹೌಸ್
ನಂ. 4, ಸಿಟಿ ಕೆ.ಎಸ್.ಆರ್.ಟಿ.ಸಿ. ಬಿಲ್ಡಿಂಗ್
ಕೆ.ಆರ್. ವೃತ್ತ ಮೈಸೂರು - 1

'ನಿಜದ ಹಾದಿಯ ಬೆಳಕು' ಸಂತೋಷ ಚೊಕ್ಕಾಡಿಯವರ ಎರಡನೇ ಕವನ ಸಂಕಲನವಾಗಿದೆ. ನಿತ್ಯದ ಅನೇಕ ಸಂಗತಿಗಳೊಂದಿಗೆ ಮುಖಾಮುಖಿಯಾಗುವ ಕವಿ ಅವರ ಸೂಕ್ಷ್ಮ ವಿವರಗಳೊಂದಿಗೆ ಕವಿತೆಗಳಲ್ಲಿ ಹಿಡಿದಿಟ್ಟಿದ್ದಾರೆ. ಈಗ ಬರುತ್ತಿರುವ ಕನ್ನಡ ಕವಿತೆಗಳ ಭಿನ್ನ ಮಾದರಿಗಳೇನೂ ಈ ಸಂಕಲನದಲ್ಲಿ ಇಲ್ಲ.

ಸಂಕಲನದ ಮುಖ್ಯ ಕವಿತೆ 'ನಿಜದ ಹಾದಿಯ ಬೆಳಕು' ವಿನಲ್ಲಿ

ಧೈರ್ಯಗೆಡದಿರು ಮನವೇ
'ಬಿಸಿಲಿದು ಬರಿ ಬಿಸಿಲಲ್ಲವೋ
ಸೂರ್ಯನ ಕೃಪೆ ಕಾಣೋ'
ಬಿಸಿಲಿದು ಹುಸಿಯಲ್ಲ
ನಿಜದ ಹಾದಿಯ ಬೆಳಕು
ಮನಸೆಳೆಯುವ ರೂಪಕವೊಂದನ್ನು ಕೊಡುತ್ತಾರೆ.

ಕೆ.ವಿ. ತಿರುಮಲೇಶ್ ಕಾವ್ಯದ ಪ್ರಭಾವದಿಂದ ಹೊರಬರಲು ಒಲ್ಲದ ಕವಿ ಇನ್ನೂ ಅದೇ ತಿರುಮಲೇಶ್ ಹಾದಿಯಲ್ಲಿದ್ದಾರೆ. ತಿರುಮಲೇಶ್ ಪ್ರಭಾವದಿಂದ ಹೊರಬಂದರೆ ವಿಶಿಷ್ಟವಾದ ಕವಿತೆಗಳನ್ನು ಬರೆಯಲು ಈ ಕವಿಗೆ ಸಾಧ್ಯವಿದೆ.

ಗೆದ್ದವರ ಒಳಗೂ
ಏಕೆ ಇಣುಕುತ್ತದೆ ಸೋತ ದನಿ?
... ...
ಗೆಲ್ಲಬೇಕು ಒಳಗನ್ನೆ
ಎಲ್ಲ ಗೆಲ್ಲುವ ಮೊದಲು (ಮೊದಲು)

ಒಂದು ವಿಚಾರ ಇಲ್ಲಿ ಕವಿತೆಯ ರೂಪ ತಾಳಿದೆ.

ಹೇಗೆ ಇಲ್ಲಿನ ಕವಿತೆಗಳ 'ನಿಜದ' ... 'ನಿಜದ ಹಾದಿಯ ಬೆಳಕು' ಹೇಗೆ ಇಲ್ಲಿನ ಕವಿತೆಗಳ 'ನಿಜದ
[illegible] ಕವಿತೆಗಳಲ್ಲಿ ಬರುವ 'ನಿಜದ ಹಾದಿಯ ಬೆಳಕು' ಹೇಗೆ ಇಲ್ಲಿನ ಕವಿತೆಗಳ 'ನಿಜದ
ಶೋಧನೆ'ಯಾಗಿದೆ ಎಂಬುದನ್ನು ಮುನ್ನುಡಿಯಲ್ಲಿ ಸರಿಯಾಗಿ ಗುರುತಿಸಿರುವ ಕೆ.ವಿ. ತಿರುಮಲೇಶ್

ಜೊತೆಗೆ ನಿಜದ ಹಾದಿಯ ಕುರಿತಂತೆ ವಿವರವಾದ ತತ್ತ್ವ ಚಿಂತನೆ, 'ಹೊಸ ಕಾವ್ಯ' ಚಿಂತನೆ ನಡೆಸಿದ್ದಾರೆ. ಆ ಮಟ್ಟಿಗೆ ಅವರು ಸಂಕಲನದ ವಿಮರ್ಶಾತ್ಮಕ ಚಿಂತನೆ ನಡೆಸಿರುವುದರಿಂದ ಪಾರಾಗಿದ್ದಾರೆ.

ಆ ಕೆಲಸವನ್ನು ಸೂಕ್ಷ್ಮಜ್ಞರಾದ ಓದುಗರಿಗೂ, ವಿಮರ್ಶಕರಿಗೂ ಬಿಟ್ಟುಕೊಟ್ಟಿರುವುದಾಗಿ ಹೇಳಿದ್ದಾರೆ. ಅವರ ಮುನ್ನುಡಿ ನೋಡಿದರೆ ತಿರುಮಲೇಶ್ ಹೇಳದೇ ಉಳಿದಿದದೂ ಕೂಡ ಬಹಳಷ್ಟನ್ನು ಹೇಳಬಲ್ಲದು!

★



ಮೊದಲ ಸಿರಿ

ಕವಿ : ಲಲಿತಾ ಸಿದ್ದಬಸವಯ್ಯ
ಬೆಲೆ : ರೂ. 42/-
ಪ್ರಕಾಶನ : ಚಿನ್ಮಯಿ ಪ್ರಕಾಶನ
ನಂ. 5217, ಗುರುಸನ್ನಿಧಿ, ಎರಡನೆಯ ತಿರುವು
ಅಶೋಕನಗರ, ತುಮಕೂರು - 572103

ನಕ್ಷತ್ರ, ಆಕಾಶ, ಭೂಮಿ, ಒಡಲು, ಚಂದ್ರ, ಎಂದೆಲ್ಲ ಬೇಸರವಿಲ್ಲದೆ ಬರೆದುದನ್ನೇ ಬರೆಯುತ್ತ ಒಂದೇ ಬಗೆಯ ವಸ್ತುಗಳ ಸುತ್ತ ಗಿರಕಿ ಹೊಡೆವ, ಅಳುವ ಕವಯತ್ರಿಯರ ಸುಕುಮಾರ ಕಾವ್ಯದ ನಡುವೆ ಲಲಿತಾ ಸಿದ್ದಬಸವಯ್ಯನವರ ಮೊದಲ 'ಜೋರಿನ' ದನಿ ವಿಶಿಷ್ಟ ರೀತಿಯಲ್ಲಿ ಕೇಳುತ್ತದೆ.

ಗೃಹಿಣಿಯೊಬ್ಬಳ ದೈನಿಕದ ಬದುಕಿನ ವಿವರಗಳು ಇಲ್ಲಿ ಕವನಗಳಾಗಿವೆ. ಇವರು ಬದುಕನ್ನು ತಮ್ಮ ಅನುಭವಗಳನ್ನು ಗ್ರಹಿಸುವ ಕ್ರಮದಲ್ಲೇ ಭಿನ್ನತೆ ಇದೆ, ಪ್ರಾಮಾಣಿಕತೆ ಇದೆ. ತಮ್ಮ ಅಭಿವ್ಯಕ್ತಿಗೆ ನಿಷ್ಠರಾಗಿರುವ ಹವಣಿಕೆ ಇದೆ.

ನನ್ನ ಕರುಳಿನ ಬಳ್ಳಿ ತಳೆದ ಎಸಳು
ನಮ್ಮ ಬದುಕಿನ ಬುತ್ತಿಯೂಟಕ್ಕೆ ಬೆಲ್ಲ ತುಪ್ಪವಾಗಿಹಳು
ಹಲವು ಸಲ ಅವಳೇ ತಾಯಿ ನಾನು ಮಗಳು (ಮಗಳು)

ಎಂಬ ಅಂತಃಕರಣದ ಮಾತುಗಳು ಅವರ 'ಗಟ್ಟಿ' ದನಿಯ ನಡುವೆ ಇದೆ.

ಕೆಲವು ಕವಿತೆಗಳು ಕೆಲವೊಮ್ಮೆ ತಮ್ಮ ಕಾವ್ಯದ ಸೂಕ್ಷ್ಮತೆಯನ್ನು ಬಿಟ್ಟುಕೊಟ್ಟಂತಿವೆ. ಕವಿತೆಗಳಲ್ಲಿ ಮಾತಿನ ನೇರತನ, ಒಗರುತನವಿದೆ. ಈ ಪರಿಕರಗಳಿಂದಲೇ ಇವರು ಭಿನ್ನರಾಗಲು ಯತ್ನಿಸುತ್ತಾರೆ.

ಆಧುನಿಕ ಮಹಿಳೆಯೊಬ್ಬಳ ಪ್ರಾಮಾಣಿಕ ಸಂವೇದನೆಗಳ ಕಥನಗಳಾದ *ಎಲ್ಲೋ ಜೋಗಪ್ಪ ನಿನ್ನರಮನೆ, ಶಯನಕಕ್ಷೆಯ ಭಗವದ್ಗೀತೆ, ಕೈಕೊಟ್ಟ ಹುಡುಗಿಯ ಸಕಾರಣ ಕಾವ್ಯ, ಮಾಗಡಮ್ಮ ಉಘೇ ಉಘೇ* ತಮ್ಮ ಅಭಿವ್ಯಕ್ತಿಯ ವಿಶಿಷ್ಟತೆಯಿಂದಾಗಿ ಗಮನ ಸೆಳೆಯುತ್ತವೆ.

ತಾಂಬೂಲ ರಾಗ, ೨೫ನೇ ಆ್ಯನಿವರ್ಸರಿಯ ಸಂಜೆ, ಮಗಳು, ನನ್ನ ದೊರಿ, ಮುಂತಾದ ಕವಿತೆಗಳು ತನ್ನ ಸುತ್ತಣ ಸೀಮಿತ ಪರಿಸರವನ್ನು, ವಸ್ತುವನ್ನು ಕವಿಯೊಬ್ಬ ಸರಿಯಾಗಿ ಗ್ರಹಿಸಿ ಬರೆದುದಕ್ಕೆ ಉತ್ತಮ ಉದಾಹರಣೆಗಳಾಗಿವೆ. ಕೊನೆಯಲ್ಲಿ ಇವರದೊಂದು ಕಾಡುವ ಸಾಲು—

... ಕಣ್ಣೀರ ಖಾತೆಯೇ ಇರದಂತ ಕಣ್ಣಲ್ಲೂ ಒಂದು ಹನಿ ನೀರು (ಜಟಾಯು)

★



ಚುಕ್ಕಿ

ಕವಿ : ಜ್ಯೋತಿ ಗುರುಪ್ರಸಾದ್
ಬೆಲೆ : **ರೂ. 50**
ಪ್ರಕಾಶನ : ರುಜುವಾತು ಪ್ರಕಾಶನ
498, 6ನೇ 'ಎ' ಮೇನ್
ಆರ್.ಎಂ.ವಿ. 2ನೇ ಘಟ್ಟ, ಬೆಂಗಳೂರು - 560 094

ಜ್ಯೋತಿ ಗುರುಪ್ರಸಾದ್ ಅವರ ಮೊದಲ ಕವನ ಸಂಕಲನ 'ಚುಕ್ಕಿ' ಆಪ್ತವಾದ ಮೆಲು ದನಿಯ ಕವಿತೆಗಳನ್ನು ಒಳಗೊಂಡಿದೆ. ಬದುಕು, ಅದುಕೊಡುವ ಅನುಭವವನ್ನು ಮುಗ್ಧತೆಯಿಂದ ನೋಡುವ ಕವಿಗೆ ಅದು ವಿಸ್ಮಯಕ್ಕೆ ಕಾರಣವಾಗುವ ಸಂಗತಿಯಾಗಿದೆ.

'ತಲೆಯೆತ್ತಿ ನೋಡು' ಎಂದಿತು
ಕಣ್ತೆರೆದರೆ ಬರೀ ಆಕಾಶ!
ನನ್ನನ್ನು ನೋಡಲು ಆಕಾಶ
ಹೂಡಿದ ಸಂಚು! (ಲಕ್ಷಣ)

ಇವರ ಕವಿತೆಗಳಲ್ಲಿ ಬದುಕಿಗೆ – ಕಾವ್ಯಕ್ಕೆ ಬೇಕಾದ ಅಚ್ಚರಿ ಬೆರೆತ ಲವಲವಿಕೆಯಿದೆ. ಈ ಲವಲವಿಕೆಯೇ ಇಲ್ಲಿನ ಕವಿತೆಗಳ ಉಸಿರು. 'ಚುಕ್ಕಿ' ಕವಿತೆಯಲ್ಲಿ ಸೀಮೆ ಸುಣ್ಣ ಉದ್ದವಾಗಿದ್ದಾಗ ಅಂಗಳ ದಲ್ಲಿ ರಂಗೋಲಿ ಬಿಡಿಸುವ ಕವಿ, ಚುಟುಕು ಸೀಮೆಸುಣ್ಣವಿದ್ದಾಗ ಪುಟ್ಟ ನಕ್ಷತ್ರವನ್ನು ಒಂದೇ ಗೆರೆಯಲ್ಲಿ ಅಂಗಳದಲ್ಲಿ ಬಿಡಿಸಬಲ್ಲರು. ಇಲ್ಲಿ ಸಾಂಪ್ರದಾಯಿಕವಾಗಿ ರಂಗೋಲಿ ಬರೆವುದನ್ನು ಮರೆತು ನೋಡಿದರೂ, ಕವಿಗೆ ಅದು ಯಾಂತ್ರಿಕ ಕ್ರಿಯೆಯಾಗಿಲ್ಲ, ಅದೊಂದು ಸೃಜನಶೀಲ ಅನಿವಾರ್ಯತೆಯಾಗಿದೆ. ಆದರೆ ಕವಿಗೆ ತನ್ನ ಅನುಭವ, ಅದಕ್ಕೆ ತಕ್ಕಂತೆ ಮಾತುಗಳನ್ನು, ಕಾವ್ಯದ ರೂಹುಗಳನ್ನು ತನ್ನ ಮಿತಿಯಲ್ಲಿ ಬರೆವ ವಿಶ್ವಾಸ, ವಿವೇಕ ಇದೆ. 'ಚುಕ್ಕಿ' ಕವಿತೆಯಂತೆಯೇ ತಮ್ಮ ಪರಿಮಿತಿಯಲ್ಲಿ ಸಂಕಲನದ ಕವಿತೆಗಳು ರೂಪುಗೊಂಡಿವೆ.

ಇವರ ಕವಿತೆಗಳಲ್ಲಿ ಕೆಲ ಚಕಿತಗೊಳಿಸುವ ಸಾಲುಗಳಿವೆ.


ನಾನು-ನೀನು ಅಪ್ಪಲು
ಬರೀ ಬೆತ್ತಲೆಯ ಅರಿವೆ (ಅರಿವೆ)

ಬಿತ್ತಿದ್ದನ್ನು
ಬೆಳೆಯುವ ಭಾರ
ನನ್ನದಾಗದಿದ್ದರೆ
ನಾನು ತಾಯಿಯಲ್ಲ (ಜವಾಬ್ದಾರಿ)

ಜಡೆ, ಸ್ಪ್ಯಾಚು, ನವಿಲುಗರಿ, ಅಂಗಳ, ಗಡಿಯಾರ, ವಿರಹ, ನನ್ನ ಅಪ್ಪ ಇಂತಹ ಓದಬಲ್ಲ ಕವನಗಳನ್ನು ನೀಡಿದ ಜ್ಯೋತಿ ಗುರುಪ್ರಸಾದ್ ತಮ್ಮ ಮಾತುಗಳಲ್ಲಿ ಬಳಸುದಾರಿ ಹಿಡಿಯುವುದಿಲ್ಲ. ತಮ್ಮ ಸರಳ ಗ್ರಹಿಕೆಗಳನ್ನು ರಳವಾಗಿಯೇ ಮಂಡಿಸುತ್ತಾರೆ. ಕವಿತೆಗಳಲ್ಲಿ ಪುಟ್ಟ ಚಿತ್ರಗಳನ್ನು ನೀಡುವ, ಹೆಚ್ಚಿನ ವಸ್ತು-ವಿಸ್ತಾರವಿಲ್ಲದ ಇರುವ ಮುಂದಣ ದಿನಗಳಲ್ಲಿ ತಾವು ಇಟ್ಟ 'ಚಿಕ್ಕಿ'ಯಿಂದಲೇ ಕಾವ್ಯದ ವಿಸ್ತಾರ ಚಿತ್ರವನ್ನು ಬರೆಯಬಲ್ಲರು.

ಸಂದೀಪ ನಾಯಕ

ಪ್ರತಿಕ್ರಿಯೆ



✦

'ಸಂಚಯ'-೬೨ ತಲುಪಿತು. ಬಹುಮಾನಿತ ಕವಿತೆಗಳು ಹೊಸ ಹೊಳಹು ಹೊಸ ಪ್ರಯೋಗ ಇವುಗಳಿಂದ 'ತಾಜಾ' ಆಗಿವೆ. ಆಗ್ರಹಮುಕ್ತ ಪದ್ಯಗಳನ್ನು ಓದುವಣಿಗೆಗೆ ಒದಗಿಸಿದ್ದಕ್ಕೆ ಕೃತಜ್ಞತೆಗಳು. ಸಂಕಿರಣದಲ್ಲಿ ಎಂ. ವ್ಯಾಸರ ಬರವಣಿಗೆ ಕುರಿತಾದ ಲೇಖನಗಳು ವಸ್ತುನಿಷ್ಠವಾಗಿವೆ. ಸರಿಸುಮಾರು ಮೂವತ್ತು ವರ್ಷಗಳಿಂದ ಬಿಡಿಬಿಡಿಯಾಗಿ 'ವ್ಯಾಸ'ರನ್ನು ಓದುತ್ತಿದ್ದವರಿಗೂ, ಅವರ ಒಟ್ಟಾರೆ ಓದಿನ ಅನುಭವ ಬಹುಶಃ ದಕ್ಕಿಲ್ಲ. ಈ ನಾಲ್ಕು ಜನ ಲೇಖಕರು ಈ ಅನುಭವವನ್ನು ದಕ್ಕಿಸಿಕೊಟ್ಟಿದ್ದಾರೆ. ಇದು ಉಪಯುಕ್ತ ಪ್ರಯತ್ನ. ಸಂಚಯಕ್ಕೆ ಧನ್ಯವಾದ.

ಲಲಿತಾ ಸಿದ್ಧಬಸವಯ್ಯ, ತುಮಕೂರು

✦

ಪುಸ್ತಕ ವಿಮರ್ಶೆ ಗಮನಸೆಳೆಯುವಂತಿದೆ. ಕೃತಿ ವಿಮರ್ಶೆಯಲ್ಲಿ ನಿಷ್ಠುರತೆ ಇರಬೇಕೆಂದು ಪ್ರತಿಪಾದಿಸುವವರಲ್ಲಿ ನಾನೂ ಒಬ್ಬ ಆದರೆ ಇತ್ತೀಚೆಗೆ ನಿಷ್ಠುರತೆಯ ಹೆಸರಿನಲ್ಲಿ ಉಡಾಫೆಯ ಗುಣವೊಂದು ಬೆಳೆಯುತ್ತಿದೆ. ಇದು ಅಪಾಯಕಾರಿಯಾದ ಬೆಳವಣಿಗೆ. ನಿಷ್ಠುರತೆ ಕೃತಿಯ ಒಳ್ಳೆಯ ಅಂಶಗಳನ್ನು ನಿರ್ಲಕ್ಷಿಸುವಂತಾಗದಿರಲಿ ಎಂಬುದು ನನ್ನ ಬಯಕೆ.

ಡಾ. ಸಂತೋಷ ಚೊಕ್ಕಾಡಿ, ಮೈಸೂರು

✦

ಕಳೆದೆರಡು ವರ್ಷಗಳಲ್ಲಿ 'ಸಂಚಯ'ಕ್ಕೆ ಅದರದೇ ಆದ ಲಕ್ಷಣ (Character) ರೂಪುಗೊಂಡ ರೀತಿಯನ್ನು ಅಭಿಮಾನದಿಂದ ನೋಡುತ್ತಿದ್ದೇನೆ. ಈ ಹೊಸ ಸಂಚಿಕೆಯ ಮುಖಪುಟದ ರೇಖಾಚಿತ್ರದಲ್ಲಿರುವ Energy ಮೈ ಜುಮ್ಮೆನಿಸುವಂತಿದೆ. ಇಡೀ ಸಂಚಿಕೆಯ ಗುಣಮಟ್ಟ ಅಭಿರುಚಿ ಹದನಾಗಿದೆ ಅಲ್ಲಿ ನಿಮ್ಮ ಮನಸ್ಸಿದೆ. ಎಂ. ವ್ಯಾಸರ ಕುರಿತ ಲೇಖನಗಳು ಸಕಾಲಿಕವೂ, ಸೂಕ್ಷ್ಮವೂ ಆಗಿದೆ. ಅವರನ್ನ ಓದಿಯೇ ಬೆಳೆದ ನಮ್ಮ ರಕ್ತದಲ್ಲಿ ಅವರ ಶಂಕರೀ ನದಿ ಸೆಳಕುಗಳು ಯಾವತ್ತೂ ಹರಿಯುತ್ತದೆ. ಅವರ ವ್ಯಾಕುಲ ಪಕ್ಷಿಗಳು ನಡುರಾತ್ರಿ ರೆಕ್ಕೆ ಬಿಚ್ಚುತ್ತದೆ.

ನಿಮ್ಮಲ್ಲಿ ಯುವ ಲೇಖಕರನ್ನು ವಿಮರ್ಶೆಗೆ ಹಚ್ಚಿದ್ದೀರಿ ಒಳ್ಳೆಯದೇ ಆದರೆ ಇಲ್ಲೊಂದು ಸಣ್ಣ ಆತಂಕ ಇದೆ. ಅವರಿಂದ 'ವಿಮರ್ಶಿತ'ರಾದವರು ಅವರ ವಿಮರ್ಶೆಯನ್ನು 'ಮುಕ್ತ'ವಾಗಿ ತೆಗೆದುಕೊಳ್ಳದೇ ತಮ್ಮ ತಮ್ಮ 'ಇಗೋ'ಗಳಿಗೆ ಅಂಟಿಸಿಕೊಂಡು ಅವರನ್ನು lifelong ಖಳನಾಯಕರಂತೆ ನೋಡಿಬಿಟ್ಟರೆ! ಮುಂದೆ ಅವರು ಸ್ವತಃ ರಚಿಸುವ ಸಾಹಿತ್ಯವನ್ನು ಪೂರ್ವಾಗ್ರಹದಿಂದಲೇ ಓದುವಂತಾಗಬಾರದು... ಎಳೆಯ ಕವಿ ಕತೆಗಾರರು ವಿಮರ್ಶಕರೂ ಆಗುವುದು ಸ್ವತಃ ಅವರಿಗೇ ಒಂದು ಕಸಿವಿಸಿಯ ಸಂಗತಿ ಆಗಬಾರದು. ನವ್ಯದ ಜಾಯಮಾನದಲ್ಲಿ ಆ ಲೇಖಕರ ನಡುವೆ ಇಂಥ ವಿಮರ್ಶನ ವಿನಿಮಯ ಸಂಬಂಧ ಅದ್ಭುತವಾಗಿತ್ತು. ಶಾಂತಿನಾಥ - ಲಂಕೇಶ್ - ಅನಂತಮೂರ್ತಿ, ಶರ್ಮ- ಚಿತ್ತಾಲ - ಚಂಪಾ - ಗಿರಡ್ಡಿ ಇವರೆಲ್ಲ ಪರಸ್ಪರರನ್ನೂ ವ್ಯಕ್ತಿಗತ ಮೋಹಾಸೂಯೆಗಳನ್ನು ಮೀರಿ ವಿಮರ್ಶಿಸಿದ ವಾತಾವರಣ ಮತ್ತೆ ಮೂಡುವಂತಾದರೆ ಎಷ್ಟು ಚೆನ್ನ. ಇದಕ್ಕೆ ಸಂಚಯ ವೇದಿಕೆ ಆಗಲಿ.

ಜಯಂತ ಕಾಯ್ಕಿಣಿ, ಬೆಂಗಳೂರು.

ಸಂಚಯ ಗ್ಯಾಲರಿ



ಕೃಪೆ: ಶಿಲ್ಪಕಲಾ ಅಕಾಡೆಮಿ

ಕೃತಿ: ಮಹಿಳೆ, ಕಂಚು
ಕಲಾವಿದರು : ಎನ್. ಎಚ್. ಕುಲಕರ್ಣಿ



ಶಿಲ್ಪಿ : ಸಿ. ನಾಗಪ್ಪ

ಹೆಡ್-II, ಕಲ್ಲಿನ ಶಿಲ್ಪ

ಕೃಪೆ : ಶಿಲ್ಪಕಲಾ ಅಕಾಡೆಮಿ

SANCHAYA (Quarterly) MAG (2) PRB-DECL : 309/94-95

Edited, Printed & Published by **D.V. Prahalad**
No. 100, 2nd Main, 6th Block, 3rd Stage, 3rd Phase,
Banashankari, Bangalore - 560 085, Ph : 080-679 1925